# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (178)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್ 1ನೇ ಮುಖ್ಯರಸ್ತೆಗೆ (ಹಳೆ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) "ಶ್ರೀ ಭಗತ್ ಸಿಂಗ್ - 1ನೇ ಮುಖ್ಯರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:02 (82)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್ 1ನೇ ಮುಖ್ಯರಸ್ತೆಗೆ (ಹಳೆ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) "ಶ್ರೀ ಭಗತ್ ಸಿಂಗ್ - 1ನೇ ಮುಖ್ಯರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:20-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (179)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್, 2ನೇ ಮುಖ್ಯರಸ್ತೆಗೆ (ಹಳೇ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) "ಶ್ರೀ ಭಗತ್ ಸಿಂಗ್ – 2ನೇ ಮುಖ್ಯರಸ್ತೆ" ಎಂಬುದಾಗಿ ನಾಮಕರಣ ಮಾಡುವಂತೆ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:03(83)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್, 2ನೇ ಮುಖ್ಯರಸ್ತೆಗೆ (ಹಳೇ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) "ಶ್ರೀ ಭಗತ್ ಸಿಂಗ್ – 2ನೇ ಮುಖ್ಯರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:22-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:22-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (180) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 103 ರ ವ್ಯಾಪ್ತಿಯಲ್ಲಿ ಬರುವ ರಂಗನಾಥಪುರ 1ನೇ ಮುಖ್ಯರಸ್ತೆಗೆ (ಮಾಗಡಿ ಮುಖ್ಯರಸ್ತೆಯಿಂದ 60 ಅಡಿ ರಸ್ತೆ ಪಟ್ಟೇಗಾರಪಾಳ್ಯ ಸೇರುವ ರಸ್ತೆವರೆಗೆ) "ಜಮೀನ್ದಾರರಾದ ದಿವಂಗತ ಶ್ರೀಮತಿ ಕೋಮಲಮ್ಮ ರಸ್ತೆ" ಎಂಬುದಾಗಿ ನಾಮಕರಣ ಮಾಡುವಂತೆ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 06(86)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 103 ರ ವ್ಯಾಪ್ತಿಯಲ್ಲಿ ಬರುವ ರಂಗನಾಥಪುರ 1ನೇ ಮುಖ್ಯರಸ್ತೆಗೆ (ಮಾಗಡಿ ಮುಖ್ಯರಸ್ತೆಯಿಂದ 60 ಅಡಿ ರಸ್ತೆ ಪಟ್ಟೇಗಾರಪಾಳ್ಯ ಸೇರುವ ರಸ್ತೆವರೆಗೆ) "ಜಮೀನ್ದಾರರಾದ ದಿವಂಗತ ಶ್ರೀಮತಿ ಕೋಮಲಮ್ಮ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (181) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ ಃ 56 ರ ವ್ಯಾಪ್ತಿಯಲ್ಲಿ ಬರುವ ಕರುಮಾರಿಯಮ್ಮ ಟೆಂಪಲ್‌ನಿಂದ ಮಹದೇವಪುರ ವರ್ತುಲ ರಸ್ತೆವರೆಗೆ "ಶ್ರೀ ವೀರ ಸಾವರ್ಕರ್ ಮುಖ್ಯರಸ್ತೆ " ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ : 07(87)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ ಃ 56 ರ ವ್ಯಾಪ್ತಿಯಲ್ಲಿ ಬರುವ ಕರುಮಾರಿಯಮ್ಮ ಟೆಂಪಲ್‌ನಿಂದ ಮಹದೇವಪುರ ವರ್ತುಲ ರಸ್ತೆವರೆಗೆ " ಶ್ರೀ ವೀರ ಸಾವರ್ಕರ್ ಮುಖ್ಯರಸ್ತೆ " ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (182) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 167 ರ ವ್ಯಾಪ್ತಿಯಲ್ಲಿ ಬರುವ ಟಾಟಾ ಸಿಲ್ಕ್ ಫಾರಂ ಬಡಾವಣೆ, ಕೆ.ಆರ್.ರಸ್ತೆಯಲ್ಲಿರುವ ಕಂಠೀರವ ಗರಡಿ ಮನೆಯ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಓಬಳಪ್ಪ ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:30-05-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 01(02)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:03-07-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 167 ರ ವ್ಯಾಪ್ತಿಯಲ್ಲಿ ಬರುವ ಟಾಟಾ ಸಿಲ್ಕ್ ಫಾರಂ ಬಡಾವಣೆ, ಕೆ.ಆರ್.ರಸ್ತೆಯಲ್ಲಿರುವ ಕಂಠೀರವ ಗರಡಿ ಮನೆಯ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಓಬಳಪ್ಪ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (183) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 41 ರ ವ್ಯಾಪ್ತಿಯಲ್ಲಿ ಬರುವ ಎನ್.ಟಿ.ಟಿ.ಎಫ್ ವೃತ್ತಕ್ಕೆ ಕರ್ನಾಟಕ ನಾಡಿನ ಪ್ರಸಿದ್ಧ ಜೀವನದಿಯಾದ "ಕಾವೇರಿ ವೃತ್ತ" ಎಂದು ಹಾಗೂ ಟಿ.ವಿ.ಎಸ್. ವೃತ್ತಕ್ಕೆ "ಕುವೆಂಪು ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 01(81)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 41 ರ ವ್ಯಾಪ್ತಿಯಲ್ಲಿ ಬರುವ ಎನ್.ಟಿ.ಟಿ.ಎಫ್ ವೃತ್ತಕ್ಕೆ ಕರ್ನಾಟಕ ನಾಡಿನ ಪ್ರಸಿದ್ಧ ಜೀವನದಿಯಾದ "ಕಾವೇರಿ ವೃತ್ತ" ಎಂದು ಹಾಗೂ ಟಿ.ವಿ.ಎಸ್ ವೃತ್ತಕ್ಕೆ "ಶ್ರೀ ಕುವೆಂಪು ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (184) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 176 ರ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ ಬಡಾವಣೆ 2ನೇ ಹಂತ ಇ.ಡಬ್ಲ್ಯೂ.ಎಸ್ ಬಡಾವಣೆಗೆ "ಶ್ರೀ.ಆರ್.ಗುಂಡೂರಾವ್ ಬಡಾವಣೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 05(85)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ ಆಕ್ಷೇಪಣೆಗಳು ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 176 ರ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ ಬಡಾವಣೆ 2ನೇ ಹಂತ ಇ.ಡಬ್ಲ್ಯೂ.ಎಸ್ ಬಡಾವಣೆಗೆ "ಶ್ರೀ. ಆರ್.ಗುಂಡೂರಾವ್ ಬಡಾವಣೆ" ಎಂದು ನಾಮಕಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:20-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29–11–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (185) / 2011–12

'ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಇರುವ 7ನೇ ಅಡ್ಡರಸ್ತೆಗೆ, ಜಯನಗರ 5ನೇ ಬಡಾವಣೆ, 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ "ಶಾಕಾಂಬರಿ ದೇವಾಲಯ ರಸ್ತೆ" ಎಂಬುದಾಗಿ ನಾಮಕರಣ ಮಾಡುವಂತೆ ದಿನಾಂಕ:28–07–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:118/2011–12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06–09–2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 179 ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಇರುವ 7ನೇ ಅಡ್ಡರಸ್ತೆಗೆ ಜಯನಗರ 5ನೇ ಬಡಾವಣೆ, 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ "ಶಾಕಾಂಬರಿ ದೇವಾಲಯ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17–10–2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17–10–2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17–10–2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (186) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179 ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಇರುವ 8ನೇ ಬ್ಲಾಕ್, 45ನೇ ಅಡ್ಡರಸ್ತೆ ನಡುವೆ ಇರುವ ರಸ್ತೆಗೆ "ಅಯೋಧ್ಯ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:199/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 179 ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಇರುವ 8ನೇ ಬ್ಲಾಕ್, 45ನೇ ಅಡ್ಡರಸ್ತೆ ನಡುವೆ ಇರುವ ರಸ್ತೆಗೆ "ಅಯೋಧ್ಯ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29–11–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (187) / 2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜಯನಗರ 5ನೇ ಬಡಾವಣೆ, 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ "ಶ್ರೀ.ರಾಘವೇಂದ್ರಸ್ವಾಮಿ ಮಠ ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28–07–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:120/2011–12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06–09–2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜಯನಗರ 5ನೇ ಬಡಾವಣೆ, 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ "ಶ್ರೀ.ರಾಘವೇಂದ್ರಸ್ವಾಮಿ ಮಠ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17–10–2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17–10–2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:17–10–2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (188) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜೆ.ಪಿ.ನಗರ 1ನೇ ಹಂತ, ವೈಶ್ಯ ಬ್ಯಾಂಕ್ ಕಾಲೋನಿ, 4ನೇ ಅಡ್ಡರಸ್ತೆಯಲ್ಲಿರುವ 33ನೇ ಮುಖ್ಯರಸ್ತೆಗೆ "ಶ್ರೀ.ರಾಮದೇವಾಲಯ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:121/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜೆ.ಪಿ.ನಗರ 1ನೇ ಹಂತ, ವೈಶ್ಯ ಬ್ಯಾಂಕ್ ಕಾಲೋನಿ, 4ನೇ ಅಡ್ಡರಸ್ತೆಯಲ್ಲಿರುವ 33ನೇ ಮುಖ್ಯರಸ್ತೆಗೆ "ಶ್ರೀ.ರಾಮದೇವಾಲಯ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (189) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜೆ.ಪಿ.ನಗರ 7ನೇ ಹಂತದ ಬಡಾವಣೆಗೆ "ದಿವಂಗತ ಶ್ರೀ.ವಿ.ಎಸ್.ಕೃಷ್ಣಯ್ಯರ್" ರವರ ಹೆಸರನ್ನು ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:123/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜೆ.ಪಿ.ನಗರ, 7ನೇ ಹಂತದ ಬಡಾವಣೆಗೆ "ದಿವಂಗತ ಶ್ರೀ.ವಿ.ಎಸ್.ಕೃಷ್ಣಯ್ಯರ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (191) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:56 ರ ವ್ಯಾಪ್ತಿಯಲ್ಲಿ ಬರುವ ಬಿ.ನಾರಾಯಣಪುರ ಬಂಡೆ ಪ್ರದೇಶಕ್ಕೆ "ಹನುಮಾನ್ ಜಂಕ್ಷನ್" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:09(89)/2011-12 ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 56 ರ ವ್ಯಾಪ್ತಿಯಲ್ಲಿ ಬರುವ ಬಿ.ನಾರಾಯಣಪುರ ಬಂಡೆ ಪ್ರದೇಶಕ್ಕೆ "ಹನುಮಾನ್ ಜಂಕ್ಷನ್" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (192) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:131 ರ ವ್ಯಾಪ್ತಿಯಲ್ಲಿ ಬರುವ ಗಂಗೊಂಡನಹಳ್ಳಿ 4ನೇ ಅಡ್ಡರಸ್ತೆಗೆ ಮತ್ತು ವೀರಾಂಜನೇಯ ದೇವಸ್ಥಾನ ಬಳಿ ಇರುವ ವೃತ್ತಕ್ಕೆ ಸಮಾಜ ಸೇವಕರಾದ ದಿವಂಗತ ಶ್ರೀ.ಸಿ.ಚೆಲುವಯ್ಯ ರವರ ಹೆಸರನ್ನು ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:10(90)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:131 ರ ವ್ಯಾಪ್ತಿಯಲ್ಲಿ ಬರುವ ಗಂಗೊಂಡನಹಳ್ಳಿ 4ನೇ ಅಡ್ಡರಸ್ತೆಗೆ ಮತ್ತು ವೀರಾಂಜನೇಯ ದೇವಸ್ಥಾನ ಬಳಿ ಇರುವ ವೃತ್ತಕ್ಕೆ ಸಮಾಜ ಸೇವಕರಾದ ದಿವಂಗತ ಶ್ರೀ.ಸಿ.ಚೆಲುವಯ್ಯ ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (193) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:125, 2ನೇ ಮುಖ್ಯರಸ್ತೆ, ಮಾರೇನಹಳ್ಳಿ ಬಿನ್ನಿ ಬಡಾವಣೆ 1ನೇ ಹಂತದಲ್ಲಿರುವ ಉದ್ಯಾನವನಕ್ಕೆ "ಬಿನ್ನಿ ಉದ್ಯಾನವನ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:11(91)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:125, 2ನೇ ಮುಖ್ಯರಸ್ತೆ, ಮಾರೇನಹಳ್ಳಿ ಬಿನ್ನಿ ಬಡಾವಣೆ 1ನೇ ಹಂತದಲ್ಲಿರುವ ಉದ್ಯಾನವನಕ್ಕೆ "ಬಿನ್ನಿ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (194) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:35 ವ್ಯಾಪ್ತಿಯ ನ್ಯೂ ಬಿ.ಇ.ಎಲ್ ರಸ್ತೆಗೆ ಸಾಹಿತಿಗಳು, ನಾಟಕಕಾರರು, ಪದ್ಮಶ್ರೀ ಪ್ರಶಸ್ತಿ ವಿಜೇತರಾದ "ಶ್ರೀ.ಸಿ.ಕೆ.ವೆಂಕಟರಾಮಯ್ಯ" ರವರ ಹೆಸರನ್ನು ನಾಮಕರಣ ಮಾಡುವುದೆಂದು ದಿನಾಂಕ:18-03-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:269/2010-11 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:12-04-2011 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 35 ರ ವ್ಯಾಪ್ತಿಯ ನ್ಯೂ ಬಿ.ಇ.ಎಲ್ ರಸ್ತೆಗೆ ಸಾಹಿತಿಗಳು, ನಾಟಕಕಾರರು, ಪದ್ಮಶ್ರೀ ಪ್ರಶಸ್ತಿ ವಿಜೇತರಾದ "ಶ್ರೀ.ಸಿ.ಕೆ.ವೆಂಕಟರಾಮಯ್ಯ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (127) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಿವಿಧ ನ್ಯಾಯಾಲಯಗಳಲ್ಲಿರುವ ದಾವೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಸಲುವಾಗಿ, ಪಾಲಿಕೆಯ ಎಲ್ಲಾ 8 ವಲಯಗಳಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳನ್ನು ಕಾನೂನು ಇಲಾಖೆಯಲ್ಲಿ ಅಥವಾ "Out Source" ಮುಖಾಂತರ ಹೆಸರುಗಳನ್ನು ಪಡೆದು ನೇಮಿಸಿಕೊಂಡು, ಆಯಾ ವಲಯಗಳಿಗೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳಲ್ಲಿರುವ ದಾವೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಮತ್ತು ಪಾಲಿಕೆಯ ಸ್ವತ್ತುಗಳನ್ನು ಸಂರಕ್ಷಿಸಲು ಹೆಚ್ಚಿನ ಆದ್ಯತೆ ನೀಡುವಂತಹ ಕೆಲಸಗಳನ್ನು ನಿರ್ವಹಿಸಲು ಸದರಿಯವರುಗಳಿಗೆ ಮಾಸಿಕ ಗೌರವ ಧನ ವೇತನ ರೂ.10,000/- ಮತ್ತು ರೂ.2,500/- ಗಳ ಭತ್ಯೆಗಳನ್ನು ನಿಗಧಿಪಡಿಸಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಹಾಗೂ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ12(3ಎ)/ಪಿಆರ್31/09-10, ದಿನಾಂಕ:21-07-2009 ರ ಪತ್ರದಂತೆ ಪಾಲಿಕೆಯ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿರುತ್ತದೆ. ತದನಂತರ, ಸದರಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು / ನಿವೃತ್ತ ಸಿವಿಲ್ ನ್ಯಾಯಾಧೀಶರುಗಳ ಸೇವೆಯನ್ನು ಕೆಲವೊಂದು ವಲಯಗಳಲ್ಲಿ ಮಾತ್ರ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲಾಗಿರುತ್ತದೆ.

ಈ ಸಂಬಂಧವಾಗಿ, ಈ ಕಛೇರಿಯ ಆದೇಶದ ಸಂಖ್ಯೆ: ಬಿ12(3ಎ)ಪಿಆರ್03/11-12, ದಿನಾಂಕ: 09-05-2011 ರ ಆದೇಶದನ್ವಯ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಆಡಳಿತ ಶಾಖೆಯ ವಿಷಯಗಳನ್ನು ಹೊರತುಪಡಿಸಿ ಹಾಗೂ ವಕಾಲತ್ತುಗಳಿಗೆ ಸಹಿ ಮಾಡುವ ಅಧಿಕಾರವನ್ನು ಕೇಂದ್ರ ಕಛೇರಿಯಲ್ಲಿನ ಕಾನೂನು ಕೋಶದ ಮುಖ್ಯಸ್ಥರಲ್ಲಿ ಉಳಿಸಿ, ವಲಯ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆ, ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ, ಜಾಹೀರಾತು ವಿಭಾಗ, ಆಸ್ತಿ ವಿಭಾಗ, ಅರಣ್ಯ ಇಲಾಖೆ, ಅಂಕಿ ಅಂಶ ವಿಭಾಗ, ಪಶುಪಾಲನೆ ಇಲಾಖೆ, ವಿದ್ಯಾ ಇಲಾಖೆ ಹಾಗೂ ಇತರೇ ಇಲಾಖೆಗಳಿಗೆ ಸಂಬಂಧಿಸಿದಂತೆ, ವಿವಿಧ ನ್ಯಾಯಾಲಯಗಳಲ್ಲಿನ ಎಲ್ಲಾ ಪ್ರಕರಣಗಳ ಕಾನೂನು ವ್ಯವಹರಣೆಯನ್ನು ವಲಯ ವ್ಯಾಪ್ತಿಯ ಕಾನೂನು ವಿಭಾಗದ ಸಲಹೆಗಾರರ ಸಹಕಾರದೊಂದಿಗೆ ನಿರ್ವಹಿಸಲು ಅಧಿಕಾರ ನೀಡಲಾಗಿರುತ್ತದೆ.

ಮುಂದುವರೆದಂತೆ, ಪ್ರಸ್ತುತ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ವಲಯ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|
| 1 | ಪೂರ್ವ | 1503 |
| 2 | ಪಶ್ಚಿಮ | 1131 |
| 3 | ದಕ್ಷಿಣ | 1530 |
| 4 | ದಾಸರಹಳ್ಳಿ | 32 |
| 5 | ಬೊಮ್ಮನಹಳ್ಳಿ | 138 |
| 6 | ಮಹದೇವಪುರ | 138 |
| 7 | ಯಲಹಂಕ | 148 |
| 8 | ರಾಜರಾಜೇಶ್ವರಿನಗರ | 163 |
| | **ಒಟ್ಟು** | **4,783** |

. . . . 2

ಈ ಸಂಬಂಧವಾಗಿ, ಪಾಲಿಕೆಯ ಎಲ್ಲಾ ವಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಹಾಗೂ ಕಛೇರಿ ಆದೇಶ ಸಂಖ್ಯೆ: ಬಿ12(3ಎ)ಪಿಆರ್31/09-10, ದಿನಾಂಕ:21-07-2009 ರ ಅಧಿಕಾರ ಪ್ರತ್ಯಾಯೋಜನೆಯಂತೆ ಪಾಲಿಕೆಯ ದಕ್ಷಿಣ, ರಾಜರಾಜೇಶ್ವರಿನಗರ, ಮಹದೇವಪುರ, ಬೊಮ್ಮನಹಳ್ಳಿ ಮತ್ತು ದಾಸರಹಳ್ಳಿ ವಲಯಗಳಲ್ಲಿ, ವಲಯ ಹಂತದಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳು ದಿನಾಂಕ:22-06-2011 ಮತ್ತು 23-06-2011 ರಂತೆ ಮನವಿ ಸಲ್ಲಿಸಿ, ಸದರಿಯವರು ಪ್ರಸ್ತುತ ಪಡೆಯುತ್ತಿರುವ ಮಾಸಿಕ ಗೌರವ ಧನ ರೂ.10,000+2,500 (ಭತ್ಯೆ) = ಒಟ್ಟು ರೂ.12,500 ಗಳಿಂದ ರೂ.30,000+10,000 (ಭತ್ಯೆ) = ಒಟ್ಟು ರೂ.40,000 ಗಳಿಗೆ ಗೌರವಧನವನ್ನು ಹೆಚ್ಚಿಸಿ ಪರಿಷ್ಕರಿಸಲು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಪಾಲಿಕೆಯ ಎಲ್ಲಾ ವಲಯಗಳಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳಿಗೆ ಹಾಲಿ ಪಾವತಿಸಲಾಗುತ್ತಿರುವ ಮಾಸಿಕ ಗೌರವಧನವನ್ನು ರೂ.12,500/- ಗಳಿಂದ ರೂ.20,000/- ಗೌರವಧನ ಹಾಗೂ ರೂ.4,000/- ಗಳನ್ನು ಸಾರಿಗೆ ಭತ್ಯೆ (Conveyance Allowance) ಹೆಚ್ಚಿಸುವ ಸಂಬಂಧ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 08-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:08-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (195) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಲೆಕ್ಕಪತ್ರ ಸ್ಥಾಯಿ ಸಮಿತಿಯಿಂದ ನಗರ ಪಾಲಿಕೆಯ ಹಲವಾರು ಕಚೇರಿಗಳನ್ನು ತಪಾಸಣೆ ಮಾಡಿದ ಸಂದರ್ಭದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುವಲ್ಲಿ ಒಟ್ಟಾರೆ ವಿಫಲವಾಗಿರುವುದು ಕಂಡು ಬಂದಿರುತ್ತದೆ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಲ್ಲಿ ಮಹಾನಗರ ಪಾಲಿಕೆಯ ಹಣಕಾಸು, ಲೆಕ್ಕ ಪತ್ರಗಳ ನಿರ್ವಹಣೆಯ ಕಾರ್ಯವನ್ನು ನಿರ್ವಹಿಸುತ್ತಿದ್ದು, ಸದರಿ ಕಚೇರಿಯಲ್ಲಿ ಎಲ್ಲಾ ಪಾವತಿಗಳನ್ನು ಸೂಕ್ತ ರೀತಿಯಲ್ಲಿ ಪಾವತಿ ಪೂರ್ವ ಲೆಕ್ಕಪರಿಶೋಧನೆ ಮಾಡದೇ ಹಾಗೂ ಕಾಲಕಾಲಕ್ಕೆ ಎಲ್ಲ ಕಚೇರಿಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ಮಾಡದೇ ಕೇವಲ ತಮ್ಮ ಕಚೇರಿಗೆ ಬರುವ ಎಲ್ಲಾ ರೀತಿಯ ಬಿಲ್ಲುಗಳನ್ನು ಮಾತ್ರ ಪಾವತಿ ಮಾಡುತ್ತ ಬಂದಿರುತ್ತದೆ ಹಾಗೂ ನಿಯಮಾವಳಿಗಳಲ್ಲಿ ಇರುವ ರೀತಿಯ ದಾಖಲೆಗಳನ್ನು ಇಡದೇ ಇರುವುದರಿಂದ, ಲೆಕ್ಕಾಚಾರದ ಮಾಹಿತಿಗಳು ಸರಿಯಾಗಿ ಸಿಗದೇ ಜಮಾ ಮತ್ತು ಖರ್ಚಿನ ವಿವರಗಳನ್ನು ಇಡಲಾಗಿದೆಯೇ ಹೊರತು ಪಾಲಿಕೆಯ ಆದಾಯ ಮತ್ತು ವೆಚ್ಚದ ನೈಜ ಚಿತ್ರಣ ದೊರಕುತ್ತಿಲ್ಲ.

ಈ ಬಗ್ಗೆ ದಿನಾಂಕ:24-12-2010 ರಂದು ಇಂಡಿಯನ್ ಆಡಿಟ್ ಮತ್ತು ಅಕೌಂಟ್ಸ್ ಇಲಾಖೆಯಿಂದ ಪಾಲಿಕೆಯ ಹಣಕಾಸಿನ ವ್ಯವಸ್ಥೆಯ ಬಗ್ಗೆ ವರದಿ ಬಂದಿದ್ದು, ಸದರಿ ವರದಿಯಲ್ಲಿ ಸಾಕಷ್ಟು ನ್ಯೂನತೆಗಳನ್ನು ಎತ್ತಿ ತೋರಿಸಲಾಗಿದೆ. ಇದರಿಂದ ಪಾಲಿಕೆಯ ಲೆಕ್ಕಪತ್ರಗಳು ಅದರಲ್ಲೂ, ಹಣಕಾಸಿಗೆ ಸಂಬಂಧಿಸಿದ ನಿರ್ವಹಣೆಯನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲದಿರುವುದು ಸಾಬೀತಾಗಿದೆ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯ ಆಡಳಿತ ಯಂತ್ರವು ಸರಿಯಾಗಿ ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಪಾಲಿಕೆಯಲ್ಲಿ ಮುಖ್ಯವಾದ ಕೆಲವು ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಂಡು ಕ್ರಮ ಕೈಗೊಳ್ಳಬೇಕೆಂದು ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು ಪತ್ರ ಬರೆದು ಕೋರಿರುವುದರಿಂದ, ಈ ಕೆಳಕಂಡ ವಿಷಯಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಲಾಗಿದೆ.

### ವಿಷಯ : 'ಎ' – ಆಂತರಿಕ ಲೆಕ್ಕ ಪರಿಶೋಧನೆ

ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಪತ್ರದ ಸಂಖ್ಯೆ: ನಅಇ 307 ಎಂಎನ್‌ಯು 2006, ದಿನಾಂಕ:14-07-2009 ರಲ್ಲಿನ ಪ್ರತಿ ವರ್ಷ ಆಡಿಟ್ ಆಕ್ಷೇಪಣೆಗಳು ಹೆಚ್ಚಾಗುತ್ತಿರುವುದನ್ನು ಮನಗಂಡು ಈ ಆಕ್ಷೇಪಣೆಗಳನ್ನು ಮೂಲದಲ್ಲಿಯೇ ತಪ್ಪಿಸಲು ವಿಶೇಷ ಕೋಶವೊಂದನ್ನು ರಚಿಸಿ, ಲೆಕ್ಕಪರಿಶೋಧನೆ ಕಾರ್ಯಕ್ರಮವನ್ನು ಜರುಗಿಸಲು ಈಗಾಗಲೇ ಸೂಚಿಸಿ 2 ವರ್ಷ ಆಗುತ್ತಾ ಬಂದಿರುವುದರಿಂದ, ಈ ಬಗ್ಗೆ ಕ್ರಮಕೈಗೊಂಡಿಲ್ಲದೇ ಇರುವುದರಿಂದ ಪಾಲಿಕೆಯು ಬೃಹದಾಕಾರವಾಗಿ ಬೆಳೆದು ಸುಮಾರು 10000 ಕೋಟಿ ಆಯವ್ಯಯ ಮಾಡುತ್ತಿರುವುದರಿಂದ ಆಂತರಿಕ ಲೆಕ್ಕಪರಿಶೋಧನೆಯನ್ನು ಮಹಾಲೇಖಪಾಲರಿಂದ ಮಾಡಿಸುವುದು ಅವಶ್ಯಕವಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 1964-65 ರಿಂದ 2008-09 ರವರೆಗಿನ ಲೆಕ್ಕಪರಿಶೋಧನೆಯಲ್ಲಿ ಸುಮಾರು 1264.00 ಕೋಟಿ ಆಕ್ಷೇಪಣೆ ಮತ್ತು 247.40 ಕೋಟಿ ವಸೂಲಾತಿಗೆ ಸೂಚಿಸಿದ್ದು, ಬಾಕಿ ಇರುತ್ತದೆ. ಪಾಲಿಕೆಯಲ್ಲಿ ಆಂತರಿಕ ಲೆಕ್ಕಪರಿಶೋಧನೆ ಕಾರ್ಯ ಜಾರಿಗೆ ತಂದಲ್ಲಿ ಈ ರೀತಿಯ ಆಕ್ಷೇಪಣೆಗಳು ಬರುವುದಿಲ್ಲ ಹಾಗೂ ಮೂಲದಲ್ಲಿಯೇ ತಡೆಗಟ್ಟಲು ಈ ಕೆಳಕಂಡ ಅಂಶಗಳನ್ನು ಸೇರಿಸಿ ಆಂತರಿಕ ಲೆಕ್ಕಪರಿಶೋಧನೆ (Internal Audit) ಜಾರಿಗೆ ತರಲು ಮಹಾಲೇಖಪಾಲರನ್ನು ಸರ್ಕಾರದ ಮುಖಾಂತರ ಕೋರುವುದು.

. . . . 2

ಎ) ಪ್ರತಿಯೊಂದು ಕಚೇರಿಯಲ್ಲಿ ಇನ್ನು ಮುಂದೆ ಪಾಲಿಕೆಯಲ್ಲಿ ಬಿಲ್ಲನ್ನು ತಯಾರಿಸುವ ಮುನ್ನವೇ ಆಂತರಿಕ ಲೆಕ್ಕಪರಿಶೋಧನೆ ಮಾಡಿಸಿ ಅಭಿಪ್ರಾಯ ಪಡೆದ ನಂತರವೇ ಬಿಲ್ಲನ್ನು ತಯಾರಿಸುವುದು.

ಬಿ) ಆಂತರಿಕ ಲೆಕ್ಕಪರಿಶೋಧನೆ ಆಗದೇ ಇರುವ ಬಿಲ್ಲುಗಳನ್ನು ಅಂಗೀಕರಿಸಿದಲ್ಲಿ ನೇರವಾಗಿ ಬಿಲ್ಲನ್ನು ಅಂಗೀಕರಿಸುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನೇ ಜವಾಬ್ದಾರರನ್ನಾಗಿ ಮಾಡುವುದು.

ಸಿ) ಪಾಲಿಕೆಯಲ್ಲಿ ಲೆಕ್ಕ ಪತ್ರಗಳನ್ನು ನಿಯಮಾನುಸಾರ ಪಾಲಿಸಬೇಕಾಗಿರುವುದರಿಂದ, ಆಂತರಿಕ ಲೆಕ್ಕಪರಿಶೋಧನೆ ಕಾರ್ಯವನ್ನು ಮಹಾಲೇಖಪಾಲರಿಂದ ಮಾಡಿಸಲು ಕೂಡಲೇ ಪತ್ರ ಬರೆದು ಸಿಬ್ಬಂದಿಗಳನ್ನು ನೇಮಕ ಮಾಡುವುದು

ಡಿ) ಮಹಾಲೇಖಪಾಲರ ಇಲಾಖೆಯಿಂದ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳುವವರೆವಿಗೂ ಎಲ್ಲಾ ವಲಯದ ಸಹಾಯಕ ನಿಯಂತ್ರಕರುಗಳಿಗೆ ಆಂತರಿಕ ಲೆಕ್ಕ ಪರಿಶೋಧನೆ ಕಾರ್ಯನಿರ್ವಹಿಸಲು ಸೂಚಿಸುವುದು.

ಇ) ಆಂತರಿಕ ಲೆಕ್ಕಪರಿಶೋಧನೆ ಕಾರ್ಯವನ್ನು ಮಹಾಲೇಖಪಾಲರಿಂದ ಮಾಡಿಸಲು ವಿಳಂಭವಾದಲ್ಲಿ ಕೂಡಲೇ ಹೊರಗುತ್ತಿಗೆ ನೀಡಿ, ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡುವುದು.

## <u>ವಿಷಯ : 'ಬಿ'</u>

ಪಾಲಿಕೆಯಲ್ಲಿ ಪ್ರೀ ಆಡಿಟ್, ವಿಶೇಷ ಆಡಿಟ್ ಮತ್ತು ಆಂತರಿಕ ಲೆಕ್ಕಪರಿಶೋಧನೆ ಕಾರ್ಯ ತ್ವರಿತಗೊಳಿಸಲು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಆಕ್ಟ್, ಸೆಕ್ಷನ್ 4ಜಿ ಅಡಿಯಲ್ಲಿ ವಿಶೇಷ ಅನುಮತಿ ಕೋರಿ ಲೆಕ್ಕಪರಿಶೋಧನೆ ಕಾರ್ಯ ತ್ವರಿತಗೊಳಿಸಲು ಕೂಡಲೇ ಕ್ರಮಕೈಗೊಳ್ಳಬಹುದಾಗಿರುವುದರಿಂದ ಒಂದು ಸಮಿತಿ ರಚಿಸಿ ನಿರ್ಧಾರ ತೆಗೆದುಕೊಂಡರೆ ಹೆಚ್ಚು ಸೂಕ್ತ ಎನ್ನುವುದು ಲೆಕ್ಕಪತ್ರ ಸಮಿತಿಯ ಅಭಿಪ್ರಾಯವಾಗಿರುವುದರಿಂದ ಈ ಬಗ್ಗೆ ಗಮನಹರಿಸುವುದು.

ಎ) ಪಾಲಿಕೆಯ ಹಣಕಾಸಿನ ಲೆಕ್ಕಪತ್ರಗಳನ್ನು ಪ್ರೀ ಆಡಿಟ್ ಮಾಡಿಸುವುದು ಆದ್ಯ ಕರ್ತವ್ಯವಾಗಿರುವುದರಿಂದ, ದಿನಾಂಕ:01-04-2011 ರಿಂದ ಪಾಲಿಕೆಯ ಎಲ್ಲಾ ಲೆಕ್ಕಪತ್ರಗಳನ್ನು ಪ್ರೀ ಆಡಿಟ್ ಮಾಡಿಸಲು ಬೆಂಗಳೂರು ಇನ್ಸ್‌ಟಿಟ್ಯೂಟ್ ಚಾರ್ಟೆಡ್ ಅಕೌಂಟ್ ಅಸೋಸಿಯೇಶನ್‌ರವರಿಂದ ಕಾರ್ಯಕೈಗೊಳ್ಳಲು ಟೆಂಡರ್ ಕರೆದು ಕ್ರಮಕೈಗೊಳ್ಳುವುದು ಅಥವಾ ಕರ್ನಾಟಕ ಟ್ರಾನ್ಸ್‌ಫರೆನ್ಸಿ ಆಕ್ಟ್ ಸೆಕ್ಷನ್ 4ಜಿ ಅಡಿಯಲ್ಲಿ ವಿಶೇಷ ಅನುಮತಿ ಕೋರಿ ಮುಂದುವರೆಸುವುದು.

ಬಿ) ಪಾಲಿಕೆಯ ಕಳೆದ 15 ವರ್ಷದ ಲೆಕ್ಕಪತ್ರಗಳನ್ನು ಹೊರಗುತ್ತಿಗೆ ನೀಡಿ ಸ್ಪೆಷಲ್ ಆಡಿಟ್ ಮಾಡಿಸುವ ಬಗ್ಗೆ ಕೂಡಲೇ ಟೆಂಡರ್ ಆಹ್ವಾನಿಸಲು ತೀರ್ಮಾನಿಸುವುದು.

ಸಿ) ಪಾಲಿಕೆಯಲ್ಲಿ 2001 ರಿಂದ ಜಾರಿಗೆ ತಂದಿರುವ ಎಫ್.ಬಿ.ಎ.ಎಸ್ ಪದ್ಧತಿಯಲ್ಲಿ ಲೆಕ್ಕಗಳನ್ನು ನಿರ್ವಹಣೆ ಮಾಡಲು ಮಾಸಿಕ ರೂ.5 ಲಕ್ಷದಂತೆ ಸುಮಾರು ರೂ. 6 ಕೋಟಿಗಳನ್ನು ಖರ್ಚು ಮಾಡಲಾಗಿದೆಯಾದರೂ ಸಹ ಎಫ್.ಬಿ.ಎ.ಎಸ್. ನಲ್ಲಿ ಕೇವಲ ಡಾಟ ಎಂಟ್ರಿ ಮಾತ್ರ ಸಾಧ್ಯವಾಗಿದೆ ಮತ್ತು ಈ ಪದ್ಧತಿಯಲ್ಲಿ ಬ್ಯಾಲೆನ್ಸ್‌ಶೀಟ್ ತಯಾರು ಮಾಡಲು ಇದುವರೆವಿಗೂ ಸಾಧ್ಯವಾಗಿರುವುದಿಲ್ಲ.

ಆದ್ದರಿಂದ ಪಾಲಿಕೆಯ 15 ವರ್ಷಗಳ ಹಣಕಾಸಿನ ಆದಾಯ ಮತ್ತು ವೆಚ್ಚದ ಬಗ್ಗೆ ಬ್ಯಾಂಕ್ ರಿಕನ್ಸಿಲೇಶನ್ ಮಾಡುವುದು ಅವಶ್ಯಕತೆ ಇದ್ದು, ಇದನ್ನು ಹೊರ ಗುತ್ತಿಗೆ ಅಡಿಯಲ್ಲಿ ಬ್ಯಾಂಕ್ ರಿಕನ್ಸಿಲೇಶನ್ ಮಾಡಲು ಕೂಡಲೇ ಟೆಂಡರ್ ಕರೆಯುವ ಬಗ್ಗೆ ತೀರ್ಮಾನಿಸುವುದು.

## ವಿಷಯ : 'ಸಿ'

ದಿನಾಂಕ:01-10-2011 ರಂದು ಈ ಕುರಿತು ಐ.ಐ.ಎಂ. ತಂಡ, ಜಯನಗರ ವಿಧಾನಸಭಾ ಸದಸ್ಯರು, ಸಿ.ಎಫ್.ಓ.ರವರೊಂದಿಗೆ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರು ಚರ್ಚಿಸಿದ್ದು, ಸದರಿ ವೇಳೆಯಲ್ಲಿ Director of Municipal Administration (ಡಿ.ಎಂ.ಎ) ಅಧೀನದಲ್ಲಿ ಯೋಜಿಸಲಾಗಿರುವ ಮುನಿಸಿಪಲ್ ರಿಸೋರ್ಸ್ ಸೆಲ್ (ಎಂ.ಆರ್.ಸಿ) ಯೋಜನೆಯ ಸಾಧಕ ಭಾದಕಗಳನ್ನು ಚರ್ಚಿಸಿದ ವೇಳೆಯಲ್ಲಿ ಪೌರಾಡಳಿತ ಇಲಾಖೆ ಅಧೀನದಲ್ಲಿ (Director of Municipal Administration) ರಾಜ್ಯದ ಎಲ್ಲಾ 213 ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶವನ್ನು ಸಿದ್ಧಪಡಿಸಿ, ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲಾಗಿದೆ. ಅದರಲ್ಲೂ ನರ್ಮ್ ಯೋಜನೆಯಡಿಯಲ್ಲಿ ಬರುವ 11 ಅಂಶದ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಈ ತಂತ್ರಾಂಶದ ವೆಚ್ಚವನ್ನು ಭರಿಸಲಾಗಿರುವುದಾಗಿ ಚರ್ಚೆಯಲ್ಲಿ ತಿಳಿಸಿರುತ್ತಾರೆ.

ಸದರಿ ಯೋಜನೆಯನ್ನು ಪಾಲಿಕೆಯಲ್ಲಿಯೂ ಸಹ ಅಳವಡಿಸಿಕೊಂಡಲ್ಲಿ ಪಾಲಿಕೆಯ ಲೆಕ್ಕಪತ್ರಗಳು ಪಾರದರ್ಶಕವಾಗಿ, ಸುಲಲಿತವಾಗಿ ನಿರ್ವಹಿಸಲು ಹಾಗೂ ದಿನವಹಿ ಆದಾಯ ಮತ್ತು ವೆಚ್ಚಗಳ ಬಗ್ಗೆ ನಿಖರತೆಯನ್ನು ಪಾಲಿಸಲು ಅನುಕೂಲವಾಗುವುದರಿಂದ ಪೌರಾಡಳಿತ ನಿರ್ದೇಶನಾಲಯದ ಅಡಿಯಲ್ಲಿರುವ ಎಂ.ಆರ್.ಸಿ. ತಂತ್ರಾಂಶವನ್ನು (ಅವಶ್ಯವಿದ್ದಲ್ಲಿ ಸೂಕ್ತ ತಿದ್ದುಪಡಿಗಳೊಂದಿಗೆ) ಪಾಲಿಕೆಯಲ್ಲಿ ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಅಳವಡಿಸಿಕೊಳ್ಳುವ ಬಗ್ಗೆ ತೀರ್ಮಾನಿಸುವುದು.

ಎ) ವಾರ್ಡ್ ಕಚೇರಿ ಹಂತದ ಸ್ವೀಕೃತಿ ಮತ್ತು ವೆಚ್ಚಗಳನ್ನು ದಾಖಲು ಮಾಡುವುದು

ಬಿ) ವಿಭಾಗದ ಕಚೇರಿ ಹಂತದ ಸ್ವೀಕೃತಿ ಮತ್ತು ವೆಚ್ಚಗಳನ್ನು ದಾಖಲು ಮಾಡುವುದು

ಸಿ) ವಲಯ ಮಟ್ಟದಲ್ಲಿ ಎ ಮತ್ತು ಬಿ ಹಂತದ ಮಾಹಿತಿಗಳನ್ನು ಕ್ರೋಢೀಕೃತವಾಗಿ ಕೇಂದ್ರ ಕಚೇರಿಯಲ್ಲಿ ಮಾಹಿತಿಗಳು ಸಿಗುವಂತೆ ಮಾಡುವುದು.

ಡಿ) ಈ ತಂತ್ರಾಂಶವನ್ನು ಶಾಶ್ವತವಾಗಿ ಕಾಪಾಡಲು, ಮೇಲ್ವಿಚಾರಣೆಯನ್ನು ಮಾಡಲು ಸರ್ಕಾರದ ಅಧೀನದಲ್ಲಿಯೇ ಇರುವ ಎಂ.ಆರ್.ಸಿ ರವರಿಗೆ ವಹಿಸುವುದು.

ಇ) ಈ ತಂತ್ರಾಂಶಕ್ಕೆ ಎಲ್ಲಾ ಇಲಾಖೆಯನ್ನು ಒಳಪಡಿಸುವುದು.

ಎಫ್) ನುರಿತ ಐ.ಟಿ. ತಂತ್ರಜ್ಞರ ಜೊತೆ ಅನುಭವಿ 4-5 ಚಾರ್ಟ್‌ಡ್‌ಗಳ ಒಂದು ತಂಡ ಇಡೀ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೆಕ್ಕಗಳ ಬಗ್ಗೆ ನಿಗಾವಹಿಸುವುದರ ಜೊತೆಗೆ ನಿಯಂತ್ರಣ ಮಾಡಲು ಕ್ರಮಕೈಗೊಳ್ಳುವುದು.

## ವಿಷಯ : 'ಡಿ'

ಪಾಲಿಕೆಯ ಲೆಕ್ಕಪತ್ರ ವಿಭಾಗ, ಕಾಮಗಾರಿ, ಆರೋಗ್ಯ, ಮಾರುಕಟ್ಟೆ, ಜಾಹೀರಾತು, ತೋಟಗಾರಿಕೆ ವಿದ್ಯಾ ಇಲಾಖೆ, ನಗರ ಯೋಜನೆ ಇತ್ಯಾದಿ ಕಚೇರಿಗಳ ಎಲ್ಲಾ ವ್ಯವಹಾರಗಳನ್ನು ಗಣಕೀಕರಣ ವ್ಯವಸ್ಥೆಯಡಿ ಜರುಗಿಸಲು

. . . . 4

ಸೂಕ್ತ ತಂತ್ರಾಂಶವನ್ನು ನಿಗಧಿತ ಅವಧಿಯಲ್ಲಿ ಸಿದ್ಧಪಡಿಸಿ ಸರ್ವರ್ ಸಿಸ್ಟಮ್‌ನಲ್ಲಿ ವಲಯ ಕಚೇರಿಯಿಂದ ಕೇಂದ್ರ ಕಚೇರಿಯಲ್ಲಿ ದೊರಕುವಂತೆ ಜಾರಿಗೆ ತರಲು ನಿಗಧಿತ ಅವಧಿಯಲ್ಲಿ ತಂತ್ರಜ್ಞಾನ ಸಿದ್ಧಪಡಿಸುವುದು.

## ವಿಷಯ : 'ಇ'

ಪಾಲಿಕೆಯು ವಾರ್ಷಿಕ ಸುಮಾರು 9 ರಿಂದ 10 ಸಾವಿರ ಕೋಟಿ ಆಯವ್ಯಯ ಮಂಡಿಸುತ್ತಿದ್ದು, ಈ ಆಯವ್ಯಯದಲ್ಲಿ ಬರುವ ಸ್ವೀಕೃತಿ ಮತ್ತು ವೆಚ್ಚದ ಬಾಬ್ತಿನ ಮೇಲೆ ನಿಗಾ ಇಡಲು ಹಿರಿಯ ಐ.ಎ.ಎಸ್. ಅಥವಾ ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ (ಐ.ಎ ಅಂಡ್ ಎ.ಎಸ್) ಶ್ರೇಣಿಯ ದಕ್ಷ ಅಧಿಕಾರಿಯನ್ನು ಪಾಲಿಕೆಗೆ ನಿಯೋಜಿಸಿಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯುವುದು.

## ವಿಷಯ : 'ಎಫ್'

ಪಾಲಿಕೆಯಲ್ಲಿ ಇಲ್ಲಿಯವರೆಗೂ ಮಹಾಲೇಖಪಾಲರು, ಆರ್ಥಿಕ ಇಲಾಖೆ, ಖಜಾನೆ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳು ಲೆಕ್ಕ ಪತ್ರ ಶಾಖೆಯ ವತಿಯಿಂದಲೇ ನಿರ್ವಹಿಸುತ್ತಿರುವುದರಿಂದ, ಆರ್ಥಿಕ ಪರಿಸ್ಥಿತಿಯ ಚಿತ್ರಣ ಸರಿಯಾಗಿ ದೊರಕದೇ ಇರುವುದರಿಂದ, ಸ್ವೀಕೃತಿ ಮತ್ತು ವೆಚ್ಚಗಳನ್ನು ಸರಿಯಾಗಿ ನಿಯಂತ್ರಿಸಲು, ಕರ್ನಾಟಕ ಸರ್ಕಾರದಲ್ಲಿ ಇರುವಂತೆ ಖಜಾನೆ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಿಕೊಂಡಲ್ಲಿ ಪಾಲಿಕೆಯಲ್ಲಿಯೂ ಸಹ ಖಜಾನೆ ಮಾದರಿಯಲ್ಲಿ ಲೆಕ್ಕ ಶೀರ್ಷಿಕೆವಾರು ಲೆಕ್ಕಪತ್ರಗಳನ್ನು ನಿರ್ವಹಿಸುವುದರಿಂದ ದಿನನಿತ್ಯದ ಆರ್ಥಿಕ ಪರಿಸ್ಥಿತಿಯು ಕರಾರುವಕ್ಕಾಗಿ ದೊರೆಯುತ್ತದೆ.

ಈಗ ಕಾರ್ಯನಿರ್ವಹಿಸುತ್ತಿರುವ ಲೆಕ್ಕಪತ್ರ ಶಾಖೆಯನ್ನು ವಿಕೇಂದ್ರಿಕರಣ ಮಾಡಿ ಆಯಾ ವಲಯದ ಸಹಾಯಕ ನಿಯಂತ್ರಕರು (ಹಣಕಾಸು) ರವರು ವಲಯಕ್ಕೆ ಸಂಬಂಧಪಟ್ಟ ಎಲ್ಲಾ ಕಾಮಗಾರಿ ಮತ್ತು ಇತರೆ ಬಿಲ್ಲುಗಳನ್ನು ಪ್ರೀ ಆಡಿಟ್ ಮಾಡಿ ಬಿಲ್ಲುಗಳನ್ನು ಸೂಕ್ತವಾಗಿ ದೃಢೀಕರಿಸಿ ಖಜಾನೆ ಶಾಖೆಗೆ ಕಳುಹಿಸುವಂತೆ ಹಾಗೂ ಈ ಎಲ್ಲಾ ಜವಾಬ್ದಾರಿಯನ್ನು ವಲಯ ಮಟ್ಟದ ಇಲಾಖಾ ಮುಖ್ಯಸ್ಥರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳುವುದು. ಮುಂದಿನ ದಿನಗಳಲ್ಲಿ ಎಲ್ಲಾ ವಹಿವಾಟುಗಳನ್ನು ಇ.ಸಿ.ಎಸ್. ಮುಖಾಂತರವೇ ಎಲ್ಲಾ ಲೆಕ್ಕಪತ್ರಗಳು ಕಂಪ್ಯೂಟರ್‌ನಲ್ಲಿ ನಿರ್ವಹಿಸುವುದು ಮತ್ತು ಚೆಕ್ಕುಗಳ ವ್ಯವಹಾರಗಳನ್ನು ಸ್ಥಗಿತಗೊಳಿಸುವ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ ಪಾಲಿಕೆಯ ಲೆಕ್ಕ ಶಾಖೆಯ ಕೆಲಸ ಕಾರ್ಯಗಳು ಸುಗಮವಾಗುವುದರಿಂದ, ಕೂಡಲೇ ಸರ್ಕಾರಕ್ಕೆ ಪತ್ರ ಬರೆದು ಖಜಾನೆ ಅಧಿಕಾರಿಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳಲು ಕ್ರಮ ಜರುಗಿಸುವುದು.

## ವಿಷಯ: 'ಜಿ' – ಆಯವ್ಯಯ ಮಂಡನೆ ಮತ್ತು ವಿನಿಯೋಗ

ವಿಶೇಷ ಆಯುಕ್ತರು (ಹಣಕಾಸು) ರವರು ಈ ಜವಾಬ್ದಾರಿಯನ್ನು ಹೊತ್ತಿದ್ದು, ಇವರ ಅಧೀನದಲ್ಲಿ ಆಯವ್ಯಯ ತಯಾರಿ ಮತ್ತು ಅನುದಾನ ಹಂಚಿಕೆ ನಡೆಯಬೇಕಾಗಿರುತ್ತದೆ (ಬಜೆಟ್ ಮ್ಯಾನುಯಲ್‌ನಂತೆ) ಈ ಕಾರ್ಯವನ್ನು ಕೈಗೊಳ್ಳಲು ಸರ್ಕಾರದ ಸಚಿವಾಲಯದ ಆಯವ್ಯಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಅನುಭವ ಇರುವ ಒಬ್ಬ ಅಧೀನ ಕಾರ್ಯದರ್ಶಿಯನ್ನು ನಿಯೋಜಿಸಿಕೊಂಡು ಇತರೆ ಸಿಬ್ಬಂದಿಯನ್ನು ಪಾಲಿಕೆಯಿಂದ ನಿಯೋಜಿಸಿಕೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸುವುದು ಹಾಗೂ ಇಲಾಖಾ ಮುಖ್ಯಸ್ಥರನ್ನು ನಿಯಂತ್ರಣಾಧಿಕಾರಿಗಳನ್ನಾಗಿಯೂ, ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸುವ ಬಟವಾಟೆ ಅಧಿಕಾರಿಗಳಿಗೆ ಆರ್ಥಿಕ ಜವಾಬ್ದಾರಿಯನ್ನು ನಿಗಧಿಪಡಿಸುವುದು.

## ವಿಷಯ : 'ಹೆಚ್'

ಪಾಲಿಕೆಯಲ್ಲಿ ಸುಮಾರು 668 ಬ್ಯಾಂಕ್ ಖಾತೆಗಳಿದ್ದು, ಸದರಿ ಖಾತೆಯಲ್ಲಿರುವ ಬ್ಯಾಲೆನ್ಸ್‌ಗಳ ಬಗ್ಗೆ ಲೆಕ್ಕಪತ್ರಗಳನ್ನು ನಿರ್ವಹಿಸದೇ ಹಾಗೂ ನಗದು ಪುಸ್ತಕವನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವ ಕಾರಣ ಪಾಲಿಕೆಯ ಹಣಕಾಸಿನ ವಹಿವಾಟಿನ ಬಗ್ಗೆ ಬ್ಯಾಲೆನ್ಸ್ ಶೀಟ್ ತಯಾರಿಸಲು ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯು ವಿಫಲವಾಗಿರುತ್ತದೆ. ಮಹಾನಗರವು ಐ.ಟಿ.ಬಿ.ಟಿ ಸಿಟಿಯೆಂದು ಹೆಗ್ಗಳಿಕೆಗೆ ಪಾತ್ರವಾಗಿದ್ದರೂ ಸಹ, ಇಷ್ಟೊಂದು ತಂತ್ರಜ್ಞಾನ ಮುಂದುವರೆದಿದ್ದರೂ ಇದನ್ನು ಬಳಕೆ ಮಾಡಿಕೊಳ್ಳಲು ಪಾಲಿಕೆಯು ವಿಫಲವಾಗಿರುತ್ತದೆ. ಪಾಲಿಕೆಯಲ್ಲಿ ವೈಯಕ್ತಿಕ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದಿರುವುದನ್ನು ಮಹಾಲೇಖಪಾಲರು ಮತ್ತು ಲೆಕ್ಕ ಪರಿಶೋಧಕರ ವರದಿಯಲ್ಲಿ ಅಕ್ಷೇಪಣೆಗಳನ್ನು ಪ್ರಸ್ತಾಪಿಸಲಾಗಿರುತ್ತದೆ. ಈಗಾಗಲೇ ಎಸ್.ಬಿ.ಎಂ, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್‌ಗಳ ವ್ಯವಸ್ಥಾಪಕರೊಂದಿಗೆ ಮಾತುಕತೆಯಾಗಿದ್ದು, ಉತ್ತಮ ಸೇವೆ ಮತ್ತು ಉತ್ತಮ ಸೌಲಭ್ಯಗಳನ್ನು ಒದಗಿಸುವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಿದೆ.

ಆದುದರಿಂದ, ಪಾಲಿಕೆಯಲ್ಲಿರುವ ಸುಮಾರು 600ಕ್ಕೂ ಹೆಚ್ಚು ಖಾತೆಗಳನ್ನು ಮುಚ್ಚಿ ಯಾವುದಾದರೂ ಒಂದು ರಾಷ್ಟ್ರೀಕೃತ ಬ್ಯಾಂಕ್‌ನೊಂದಿಗೆ ಒಪ್ಪಂದ ಮಾಡಿಕೊಂಡು ಆ ಬ್ಯಾಂಕಿನ ಶಾಖೆಯನ್ನು ಎಲ್ಲಾ ವಲಯದಲ್ಲಿಯೂ ವಿಸ್ತರಣಾ ಶಾಖೆ (Extension counter) ತೆರೆದು ಪಾಲಿಕೆಯ ಎಲ್ಲಾ ವ್ಯವಹಾರವು ಕರ್ನಾಟಕ ಬಜೆಟ್ ಕೈಪಿಡಿ ನಿಯಮ 375ರಲ್ಲಿ ವಿವರಿಸಿರುವಂತೆ 1 ಅಥವಾ 2 ಬ್ಯಾಂಕ್ ಮುಖಾಂತರ ನಡೆಯುವಂತೆ ಕ್ರಮಕೈಗೊಳ್ಳುವುದು.

## ವಿಷಯ : 'ಐ'

1) ಪಾಲಿಕೆಯ ವ್ಯಾಪ್ತಿಯು ದಿನೆ ದಿನೇ ಹೆಚ್ಚುತ್ತಿದ್ದು, ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಖರ್ಚಿನ ಭಾಗವನ್ನು ಸಹ ವಿಸ್ತಾರಗೊಳ್ಳುತ್ತಿರುವುದರಿಂದ ನಗರದ 198 ವಾರ್ಡಿನ ಎಲ್ಲಾ ಕಾಮಗಾರಿಗಳ ನಿರ್ವಹಣೆಗಳು ಸುಗಮವಾಗಿ ಇರುವಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಹಾಲಿ ಇರುವ ಟಿ.ವಿ.ಸಿ.ಸಿ ವಿಭಾಗವನ್ನು ಇನ್ನೂ ಬಲಗೊಳಿಸಿ, ಸದರಿ ವಿಭಾಗಕ್ಕೆ ಜಾಬ್ ಕೋಡ್ ನೀಡುವ ಜವಾಬ್ದಾರಿ ನೀಡುವುದು ಹಾಗೂ ಕೋಡ್ ನೀಡುವ ಸಮಯದಲ್ಲಿಯೇ ಟಿ.ವಿ.ಸಿ.ಸಿ. ಸಿಬ್ಬಂದಿಗಳು ಈ ಕೆಳಕಂಡ ಅಂಶಗಳು ಸರಿ ಇದೆಯೇ ಎಂಬ ಬಗ್ಗೆ ದೃಢೀಕರಿಸಿಕೊಂಡು ಜಾಬ್ ಕೋಡ್ ನೀಡಲು ತೀರ್ಮಾನಿಸುವುದು.

   ಎ) ಅಂದಾಜು ಪಟ್ಟಿ ಪರಿಶೀಲನೆ,
   ಬಿ) ಸ್ಥಳ ಪರಿಶೀಲನೆ,
   ಸಿ) ಅಂದಾಜು ಪಟ್ಟಿಯಲ್ಲಿರುವ ಷರತ್ತುಗಳು,
   ಡಿ) ಕಾಮಗಾರಿ ಸ್ಥಳ ಇತ್ಯಾದಿ

2) ಪಾಲಿಕೆಯಲ್ಲಿ ಜಾಬ್ ಕೋಡ್ ಪಡೆದು ಟೆಂಡರ್ ಕರೆಯುವ ಮುನ್ನ ಡಿಜಿಟೈಜೇಶನ್ ವ್ಯವಸ್ಥೆ ಜಾರಿಗೊಳಿಸಿ ಅದರಲ್ಲಿ ಈ ಕೆಳಕಂಡ ಷರತ್ತುಗಳನ್ನು ಅಳವಡಿಸುವುದು.

   ಎ) ಕಾಮಗಾರಿ ಪ್ರಾರಂಭ ದಿನಾಂಕ
   ಬಿ) ಮುಕ್ತಾಯ ದಿನಾಂಕ,
   ಸಿ) ಭೌತಿಕ ಪರಿಶೀಲನೆ,

. . . . 6

ಡಿ) ಗುಣಮಟ್ಟ ಪರಿಶೀಲನೆ,

ಇ) ಅಳತೆ ಪರಿಶೀಲನೆ, ಇತ್ಯಾದಿ ಅಂಶಗಳನ್ನು ಆಗಿಂದ್ದಾಗ್ಗೆ ಸಂಬಂಧಪಟ್ಟ ಅಭಿಯಂತರರು ಆನ್ ಲೈನ್ ಮುಖಾಂತರವೇ ದಾಖಲು ಮಾಡುವುದು.

ಎಫ್) ಪ್ರತಿ ರಸ್ತೆಗೆ ಐ.ಡಿ. ಸಂಖ್ಯೆ ನೀಡಿ ಸದರಿ ರಸ್ತೆಗೆ ಮುಂದಿನ 5 ವರ್ಷ ಕಾಮಗಾರಿ ಮರು ಪ್ರಾರಂಭವಾಗದಂತೆ ಕಂಪ್ಯೂಟರ್‌ನಲ್ಲಿ ಲಾಕ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುವುದು.

ಈ ಕಾರ್ಯಕ್ಕೆ ತಂತ್ರಾಂಶವನ್ನು ಸಿದ್ಧಪಡಿಸಲು ಅಥವಾ ಲೋಕೋಪಯೋಗಿ ಇಲಾಖೆಯಿಂದ ತಂತ್ರಾಂಶವನ್ನು ಪಡೆದು ಪಾಲಿಕೆಗೆ ಅನ್ವಯವಾಗುವಂತೆ ತಿದ್ದುಪಡಿ ಮಾಡಿಕೊಂಡು ಜಾರಿಗೆ ತರಲು ತೀರ್ಮಾನಿಸುವುದು.

3) ವಾರ್ಡ್ ಮಟ್ಟದ ಕಾಮಗಾರಿಗಳು, ಯೋಜನಾ ವಿಭಾಗದ ಕಾಮಗಾರಿಗಳು, ರಿಸರ್ವ್ ಫಂಡ್ ಅಡಿಯಲ್ಲಿ ನಡೆಯುವ ಕಾಮಗಾರಿಗಳು ಪಾರದರ್ಶಕವಾಗಿ ನಡೆಯುವ ಉದ್ದೇಶದಿಂದ ಈ ಎಲ್ಲಾ ಕಾಮಗಾರಿಗಳನ್ನು ವೆಬ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಅಡಿಯಲ್ಲಿ ತಂದು ಕಾಮಗಾರಿಯ ಪ್ರತಿ ಹಂತದ ಪ್ರಗತಿ ದಾಖಲಾಗುವಂತೆ ಕ್ರಮಕೈಗೊಳ್ಳಲು ಯಾವುದಾದರೊಂದು ಏಜೆನ್ಸಿಗೆ ನೀಡುವ ಬಗ್ಗೆ ತೀರ್ಮಾನಿಸುವುದು.

## <u>ವಿಷಯ : 'ಜಿ'</u>

ಪಾಲಿಕೆಯ ವತಿಯಿಂದ ನಿರ್ವಹಿಸಲು ಉದ್ದೇಶಿಸಿರುವ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ನಿಗಧಿತ ಅವಧಿಯಲ್ಲಿ ಜಾರಿಗೆ ತರಲು ಪಾಲಿಕೆ ಹಿರಿಯ ಅಧಿಕಾರಿಯ ನೇತೃತ್ವದಲ್ಲಿ ಮತ್ತು ಸಾಮಾಜಿಕ ಕಳಕಳಿ ಇಟ್ಟುಕೊಂಡು ಕೆಲಸ ನಿರ್ವಹಿಸುತ್ತಿರುವ, ಈ ಕೆಳಕಂಡ ಗಣ್ಯರ ಸಲಹಾ ತಂಡವನ್ನು ಲೆಕ್ಕಪತ್ರ ಸಮಿತಿಯು ಗುರುತಿಸಿದ್ದು, ಸದರಿ ತಂಡವು ಪಾಲಿಕೆಯಲ್ಲಿ ಆಡಳಿತಾತ್ಮಕವಾಗಿ ಕೈಗೊಳ್ಳಬೇಕಾಗಿರುವ ಕಾರ್ಯಗಳ ಉಸ್ತುವಾರಿಯನ್ನು ಗಮನಿಸಿ ವರದಿಯನ್ನು ಆಗಿಂದ್ದಾಗೆ ಆಯುಕ್ತರಿಗೆ ಸಲ್ಲಿಸುವ ಬಗ್ಗೆ ತೀರ್ಮಾನಿಸುವುದು.

| ಐ.ಐ.ಎಂ. ತಂಡ | ಚಾರ್ಟೆಡ್ ಅಕೌಂಟೆಂಟ್ ತಂಡ |
|---|---|
| ಪ್ರೋ.ಜಿ.ರಮೇಶ್ | ಶ್ರೀ. ಗುರುನಾಥ್ |
| ಕು॥ ಪ್ರತೀಕ್ಷಾ ಶೆಟ್ಟಿ | ಶ್ರೀ. ಕೃಷ್ಣ |
| ಶ್ರೀ.ಮುಕುಂದ ನರಹರಿ | ಶ್ರೀ. ಮುರುಳಿ ಮೂರ್ತಿ |
| | ಶ್ರೀ. ಚೇತನ್ |
| | ಶ್ರೀ. ಬಸವರಾಜ್ |
| | ಶ್ರೀ. ವಿಶ್ವನಾಥ್ |

. . . . 7

## ವಿಷಯ : 'ಕೆ'

ನಗರದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಮಾಹಿತಿಯಂತೆ ಸುಮಾರು 5 ಲಕ್ಷ ವ್ಯಾಪಾರಸ್ಥರು ಇದ್ದು, ಪಾಲಿಕೆಯಲ್ಲಿ ಇದುವರೆಗೂ ಸುಮಾರು 48,000 ಮಾತ್ರ ಟ್ರೇಡ್ ಲೈಸೆನ್ಸ್ ಅಡಿಯಲ್ಲಿ ಪರವಾನಗಿ ನೀಡಿರುವುದರಿಂದ ಪಾಲಿಕೆಗೆ ಸಾಕಷ್ಟು ಆರ್ಥಿಕ ನಷ್ಟ ಉಂಟಾಗುತ್ತಿರುವುದೇ ಅಲ್ಲದೆ ಪರವಾನಗಿ ಪಡೆಯುವ ಸಮಯದಲ್ಲಿ ಆರೋಗ್ಯ ಪರಿವೀಕ್ಷಕರು ಸಾಕಷ್ಟು ಅಸಹಕಾರ ಮತ್ತು ಗೊಂದಲ ನೀಡುವ ಮಾಹಿತಿಯು ಇರುವುದರಿಂದ, ಈಗಾಗಲೇ ಇದರ ಬಗ್ಗೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು, ಎಫ್.ಕೆ.ಸಿ.ಸಿ.ಐ. ಪ್ರತಿನಿಧಿಗಳು ಮತ್ತು ಎಲ್ಲಾ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆ ಮಾತುಕತೆಯು ಸಹ ಜರುಗಿಸಲಾಗಿರುವುದರಿಂದ ಈ ಕೆಳಕಂಡಂತೆ ಕ್ರಮಕೈಗೊಳ್ಳಬೇಕಾಗಿದೆ.

1) ಟ್ರೇಡ್ ಲೈಸೆನ್ಸ್ ಎಂಬ ಪದವನ್ನು ತಿದ್ದುಪಡಿ ಮಾಡಿ ವ್ಯಾಪಾರ ಅನುಮತಿ ಪತ್ರ ಎಂಬ ಪದವನ್ನು ಬಳಕೆಗೆ ತರುವುದು (ಅವಶ್ಯಕತೆ ಇದ್ದಲ್ಲಿ ಕಾಯ್ದೆಗೆ ತಿದ್ದುಪಡಿ ತಂದು)
2) ಎಲ್ಲಾ ಉದ್ದಿಮೆದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಅರ್ಜಿ ನಮೂನೆಗಳನ್ನು ಸರಳೀಕರಣಗೊಳಿಸಿ ಆನ್ ಲೈನ್ ಮುಖಾಂತರ, ಹೆಲ್ಪ್ ಲೈನ್ ಮುಖಾಂತರ, ಬೆಂಗಳೂರು ಒನ್ ಮುಖಾಂತರ ಅಥವಾ ಎಸ್.ಎ.ಎಸ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವುದು
3) ಉದ್ದಿಮೆದಾರರ ಇಚ್ಛೆಗೆ ಬಿಟ್ಟು ಒಂದು ವರ್ಷದಿಂದ 5 ವರ್ಷದವರೆಗೆ ಅನುಮತಿ ಪಡೆಯಲು ಅವಕಾಶ ಕಲ್ಪಿಸುವುದು. (ಕೆ.ಎಂ.ಸಿ. ಕಾಯ್ದೆ 1976ರ ಕಲಂ 353(6) ಅನ್ವಯ 5 ವರ್ಷಗಳಿಗೂ ಟ್ರೇಡ್ ಫೀಯನ್ನು ಪಡೆದು ಪರ್ಮಿಷನ್ ನೀಡಬಹುದಾಗಿದೆ)
4) ಸುವರ್ಣ ಪರವಾನಗಿ ಶೆಡ್ಯೂಲ್-10ರಲ್ಲಿ ಕೈಬಿಟ್ಟಿರುವ ಟ್ರೇಡ್‌ಗಳನ್ನು ಸೇರಿಸಲು ಕ್ರಮಕೈಗೊಳ್ಳುವುದು.
5) ನಿಗಧಿತವಾಗಿ ಬರುವ ಅಜಿಗಳಲ್ಲಿ ಶೇಕಡ 10 ರಷ್ಟನ್ನು ಪರಿಶೀಲಿಸುವುದು ಈ ಕಾರ್ಯಕ್ಕೆ ಸೂಕ್ತ ತಂತ್ರಜ್ಞಾನವನ್ನು ಕಾಲಮಿತಿಯಲ್ಲಿ ಸಿದ್ಧಪಡಿಸಿ ಅಳವಡಿಸಲು ಆಯುಕ್ತರಿಗೆ ಅಧಿಕಾರ ನೀಡುವ ಬಗ್ಗೆ ತೀರ್ಮಾನಿಸುವುದು.
6) ನಗರದಲ್ಲಿರುವ ಎಲ್ಲಾ ರೀತಿಯ ಟ್ರೇಡ್‌ದಾರರ ಭೌತಿಕ ಮಾಹಿತಿಯನ್ನು ಪಡೆದು ಬೇಡಿಕೆ ಪತ್ರ ಜಾರಿ ಮಾಡಿ ಉದ್ದಿಮೆ ಅನುಮತಿ ಫೀ ವಸೂಲಿ ಮಾಡುವುದು.
7) ಇಲ್ಲಿಯವರೆಗೂ ಸಂದಾಯ ಮಾಡದೇ ಇರುವ ವ್ಯಾಪಾರಸ್ಥರು ಕಂತಿನ ಮೂಲಕ ಪಾವತಿಸಲು ಅನುಕೂಲ ಕಲ್ಪಿಸುವುದು.
8) ವಾಣಿಜ್ಯ ತೆರಿಗೆ ಇಲಾಖೆ ಜೊತೆ ಎಂ.ಓ.ಯು ಮಾಡಿಕೊಳ್ಳುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಮಂಡಿಸಿರುವ ಹನ್ನೊಂದು (11) ವಿಷಯಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:22-10-2011 ರ ಟಿಪ್ಪಣಿಯಲ್ಲಿನ ವಿಷಯಗಳಲ್ಲಿ ಈ ಕೆಳಗೆ ನಮೂದಿಸಿರುವ ವಿಷಯಗಳನ್ನು ಕೈಬಿಡುವ ಮಾರ್ಪಡಿನೊಂದಿಗೆ ಒಪ್ಪುವುದು".

. . . . 8

1. ಟಿಪ್ಪಣಿಯ ವಿಷಯ 'ಬಿ' ಯಲ್ಲಿನ ಉಪ ಕಂಡಿಕೆ "ಬಿ" ಕೈಬಿಡುವುದು
2. ಟಿಪ್ಪಣಿಯ ವಿಷಯ 'ಐ' ಯಲ್ಲಿನ ಉಪ ಕಂಡಿಕೆ "1" ಹಾಗೂ ಉಪ ಕಂಡಿಕೆ '3" ರಲ್ಲಿ ಏಜೆನ್ಸಿಗೆ ವಹಿಸುವುದನ್ನು ಕೈಬಿಡುವುದು
3. ಟಿಪ್ಪಣಿಯ ವಿಷಯ 'ಜೆ' ಯನ್ನು ಕೈಬಿಡುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:22-10-2011ರ ಟಿಪ್ಪಣಿಯಲ್ಲಿನ ವಿಷಯಗಳಲ್ಲಿ ಈ ಕೆಳಗೆ ನಮೂದಿಸಿರುವ ವಿಷಯಗಳನ್ನು ಕೈಬಿಡುವ ಮಾರ್ಪಡಿನೊಂದಿಗೆ ಒಪ್ಪುವುದೆಂದು ತೀರ್ಮಾನಿಸಲಾಯಿತು".

1. ಟಿಪ್ಪಣಿಯ ವಿಷಯ 'ಬಿ' ಯಲ್ಲಿನ ಉಪ ಕಂಡಿಕೆ "ಬಿ" ಕೈಬಿಡುವುದು.
2. ಟಿಪ್ಪಣಿಯ ವಿಷಯ 'ಐ' ಯಲ್ಲಿನ ಉಪ ಕಂಡಿಕೆ "1" ಹಾಗೂ ಉಪ ಕಂಡಿಕೆ '3" ರಲ್ಲಿ ಏಜೆನ್ಸಿಗೆ ವಹಿಸುವುದನ್ನು ಕೈಬಿಡುವುದು.
3. ಟಿಪ್ಪಣಿಯ ವಿಷಯ 'ಜೆ' ಯನ್ನು ಕೈಬಿಡುವುದು.

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (196) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಎಂ. ಪ್ರಭಾಕರ, ನಿವೃತ್ತಿ ಕೆ.ಎ.ಎಸ್. ಅಧಿಕಾರಿ ಇವರನ್ನು ದಿನಾಂಕ:29-09-2007 ಹಾಗೂ 15-12-2008 ರ ಆದೇಶದಂತೆ ಪಾಲಿಕೆಯಲ್ಲಿ ವಿಶೇಷ ಅಧಿಕಾರಿ (ಹಣಕಾಸು) ಆಗಿ ಕಾರ್ಯನಿರ್ವಹಿಸಲು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲಾಗಿದ್ದು, ಸದರಿಯವರ ನಿಯೋಜನಾ ಅವಧಿಯ ದಿನಾಂಕ:28-09-2008ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿಯವರ ನಿಯೋಜನಾ ಅವಧಿಯು ದಿನಾಂಕ:28-09-2008 ರಂದು ಮುಗಿದ ನಂತರ ಪಾಲಿಕೆಯಲ್ಲಿ ಸದರಿಯವರನ್ನು ಮುಂದುವರೆಸಲು, ಸದರಿ ನಿವೃತ್ತ ಅಧಿಕಾರಿಯವರಾಗಲೀ ಅಥವಾ ಮುಖ್ಯ ಲೆಕ್ಕಾಧಿಕಾರಿಯವರಾಗಲೀ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸದೇ ಇದ್ದುದರಿಂದ ಈ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ಅಭಿಪ್ರಾಯ ಕೋರಲಾದಂತೆ ಸದರಿಯವರು ದಿನಾಂಕ:29-10-2010 ರಂದು ಅಭಿಪ್ರಾಯ ವರದಿ ಮಂಡಿಸಿ ಸದರಿಯವರನ್ನು ದಿನಾಂಕ:31-12-2012 ರವರೆಗೆ ಹಾಲಿ ಇರುವ ಷರತ್ತು ಹಾಗೂ ನಿಬಂಧನೆಗಳನ್ವಯ ಮುಂದುವರೆಸಬಹುದಾಗಿರುತ್ತದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದರೆ ಕೆ.ಸಿ.ಎಸ್.ಆರ್ ನಿಯಮ 313 (ಬಿ) (i) ರನ್ವಯ ಒಂದು ವರ್ಷ ಮೀರಿದ ನಂತರ ಇವರನ್ನೇ ಮುಂದುವರೆಸಬೇಕಾದರೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಬೇಕಾಗಿರುತ್ತದೆ. ಆದ್ದರಿಂದ, ಸದರಿಯವರನ್ನು ದಿನಾಂಕ:29-09-2008 ರಿಂದ ಅನ್ವಯವಾಗುವಂತೆ ಪಾಲಿಕೆಯಲ್ಲಿ ಮುಂದುವರೆಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ದಿನಾಂಕ:14-03-2011 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ: ತೆಆಸ್ಥಾಸ/267/2010-11 ರ ನಡವಳಿಯಲ್ಲಿ ದಿನಾಂಕ:24-02-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದ್ದು, ದಿನಾಂಕ:29-03-2011 ರಲ್ಲಿ ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 1 (272)/2010-11 ರಲ್ಲಿ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ದಿನಾಂಕ:28-05-2011 ಮತ್ತು ದಿನಾಂಕ:01-08-2011 ರಂದು ನಡೆದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಸಿಆಸುಸ್ಥಾಸ/01/2011 ರಲ್ಲಿ "ಧೀರ್ಘವಾದ ಚರ್ಚೆಯ ನಂತರ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಸಭೆಯಲ್ಲಿ ಮೇಲ್ಕಂಡ ನಿವೃತ್ತಿ ಅಧಿಕಾರಿಗಳ ಸೇವೆಯು ಪ್ರಸ್ತುತ ಪಾಲಿಕೆಯ ಕೆಲಸಕಾರ್ಯಗಳಿಗೆ ಅವಶ್ಯಕತೆ ಇರುವುದರಿಂದ, ದಿನಾಂಕ:31-03-2012ರವರೆವಿಗೆ ಮುಂದುವರೆಸಲು ಕೋರಿರುವ ಮೇರೆಗೆ, ದಿನಾಂಕ:31-03-2012ರವರೆಗೆ ಮುಂದುವರೆಸುವ ಮಾರ್ಪಾಡಿನೊಂದಿಗೆ ದಿನಾಂಕ:24-02-2011ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದ್ದು, ಈ ಹಿನ್ನಲೆಯಲ್ಲಿ ಪ್ರಸ್ತಾವನೆಯ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:16–09–2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (197) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿಮೀ. ನಿಂದ 800 ಚ.ಕಿಮೀ.ಗೆ ಭೌಗೋಳಿಕ ವಿಸ್ತಾರಗೊಂಡು, ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಲು ಹಾಗೂ ತೊಂದರೆಗೆ ಸಿಲುಕಿಕೊಂಡ ಕೋತಿ, ಹಾವು, ನಾಯಿ ಹಾಗೂ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಿ ಮತ್ತು ಮನುಷ್ಯರಿಂದಾಗಲಿ ಅಥವಾ ಪ್ರಾಣಿ ಪಕ್ಷಿಗಳಿಂದಾಗಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕಾರ್ಯನಿರ್ವಹಿಸಲು ಪರಿಸರ ಸಲಹೆಗಾರರ ತಂಡವಾಗಿ ಶ್ರೀ. ಶರತ್ ಬಾಬು, ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಆಗಸ್ಟ್ 2007ರಿಂದ ಮಾರ್ಚ್ 2011ರವರೆಗೆ ಪಾಲಿಕೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸದರಿ ವನ್ಯಜೀವಿ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012 ರವರೆಗೆ ಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಹಾಗೂ ಮಾಸಿಕ ವೇತನ ಪರಿಷ್ಕರಣೆ ಮಾಡಲು ಕೋರಿರುತ್ತಾರೆ. ಈಗಾಗಲೇ 2009-10ನೇ ಹಾಗೂ 2010-11ನೇ ಸಾಲಿನಲ್ಲಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆ ವತಿಯಿಂದ ನಿಶ್ಚಿತ ಮಾಸಿಕ ಸಂಭಾವನೆಯನ್ನು (ವೈದ್ಯಕೀಯ ವೆಚ್ಚ ಹಾಗೂ ಪೆಟ್ರೋಲ್ ವೆಚ್ಚವನ್ನೊಳಗೊಂಡಂತೆ) ಈ ಕೆಳಕಂಡಂತೆ ನೀಡಲಾಗಿರುತ್ತದೆ. ಸದರಿ ವನ್ಯ ಜೀವಿ ಸಂರಕ್ಷಣಾ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012ರವರೆಗೆ ಹೊರಗುತ್ತಿಗೆ ಅವಧಿಯನ್ನು ಮುಂದುವರೆಸಲು ಹಾಗೂ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಸಂಭಾವನೆಯಲ್ಲಿ ಪರಿಷ್ಕರಣೆ ಮಾಡಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ ವಲಯ) ರವರು ಸಹ ವನ್ಯಜೀವಿ ಸಂರಕ್ಷಣಾ ಸಲಹೆಗಾರರನ್ನು ಮುಂದುವರೆಸಲು ಹಾಗೂ ಮಾಸಿಕ ಸಂಭಾವನೆಗಳ ಬಗ್ಗೆ ವರದಿ ಸಲ್ಲಿಸಿ ಕೋರಿರುತ್ತಾರೆ.

| ಕ್ರ. ಸಂ. | ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ವಿವರ | 2009-10ನೇ ಸಾಲಿನಲ್ಲಿ (ರೂ.ಗಳಲ್ಲಿ) | 2010-11ನೇ ಸಾಲಿನಲ್ಲಿ (ರೂ.ಗಳಲ್ಲಿ) | 2011-12ನೇ ಸಾಲಿಗೆ ಪರಿಷ್ಕರಣೆಗೊಳಿಸುವಂತೆ ಕೋರಿರುವ ನಿಶ್ಚಿತ ಮಾಸಿಕ ಸಂಭಾವನೆ |
|---|---|---|---|---|
| 1 | ಶ್ರೀ ಶರತ್ ಬಾಬು (ಪರಿಸರ ಸಲಹೆಗಾರರು) | 14000/- | 13000/- | 16000/- |
| 2 | ಶ್ರೀ ಮಂಜುನಾಥ್ (ಪರಿಸರ ಸಹಾಯಕರು) | 5000/- | 5000/- + 1000/- | 9000/- |
| 3 | ಶ್ರೀ ಕುಮಾರ್ (ಪರಿಸರ ಸಹಾಯಕರು) | 5000/- | 5000/- + 1000/- | 9000/- |
| 4 | ಶ್ರೀ ಮೋಹನ್, ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |

| | | | | |
|---|---|---|---|---|
| 5 | ಮಹೇಶ್‌ಕುಮಾರ್ ಬಿ.ಆರ್. ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |
| 6 | ಶ್ರೀ ಶಿವರಾಜ್, ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |

ಏಪ್ರಿಲ್ 2011 ರಿಂದ ಮಾರ್ಚ್-2012 ರವರೆಗೆ ವನ್ಯಜೀವಿ ಸಲಹೆಗಾರರ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಮುಂದುವರೆಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಉತ್ತರ ವಲಯ ರವರು ಕೋರಿರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-08-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ಗೌರವಧನವನ್ನು ಪ್ರತಿಮಾಹೆ ನೀಡುವುದು ಎಂಬುದಾಗಿ ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ:30-08-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (198) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-05-2011 ರಲ್ಲಿ ಪಾಲಿಕೆಯ ವಿವಿಧ ಸಂಘದ ಪದಾಧಿಕಾರಿಗಳು ಸಲ್ಲಿಸಿರುವ ಮನವಿ ಪತ್ರದಲ್ಲಿ, ಸೇವಾವಧಿಯಲ್ಲಿ ಏಕೈಕ ಮುಂಬಡ್ತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳನ್ನು ದಿನಾಂಕ:23-07-2009ರ ಆದೇಶದಂತೆ ಆರೋಗ್ಯ ಇಲಾಖೆಯನ್ನು ಪುನರ್‌ವಿಂಗಡಿಸಿ, ಸಿವಿಲ್ ಕಾರ್ಯಗಳಿಗಾಗಿ ನೇಮಕಾತಿ ಹೊಂದಿದ್ದ ಸಹಾಯಕ ಅಭಿಯಂತರರುಗಳನ್ನು ಪರಿಸರ ಅಭಿಯಂತರರುಗಳನ್ನಾಗಿ ನೀಡಲಾಗಿರುತ್ತದೆ. ಕೆ.ಎಂ.ಸಿ ಕಾಯ್ದೆ ಪ್ರಕಾರ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆ, ಉದ್ದಿಮೆಗಳ ತಪಾಸಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನೆಚ್ಚರಿಕೆ, ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಾಂವಿಧಾನಿಕ ಜವಾಬ್ದಾರಿ ಹೊಂದಿರುತ್ತಾರೆ. ಆದರೆ, ಈ ಕಾರ್ಯಕ್ಕೆ ಪರಿಸರ ಅಧಿಕಾರಿಗಳಾಗಿ ಸಹಾಯಕ ಅಭಿಯಂತರರುಗಳನ್ನು ನಿಯೋಜಿಸಲಾಗಿರುತ್ತದೆ.

ಸಾಂವಿಧಾನಿಕ ಜವಾಬ್ದಾರಿ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸೇವಾವಧಿಯಲ್ಲಿ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನಲೆಯಲ್ಲಿ ಈ ನೌಕರರುಗಳಿಗೆ ಪತ್ರಾಂಕಿತ ಹುದ್ದೆಗೆ ಮುಂಬಡ್ತಿ ನೀಡಿ, ಉಪ ವಿಭಾಗವಾರು ಒಂದು ಹುದ್ದೆಯನ್ನು ಸೃಜಿಸಿ, ಈ ಇಲಾಖೆಯನ್ನು ಆರ್ಥಿಕವಾಗಿ ಬಲಪಡಿಸುವುದು ಸೂಕ್ತವಾಗಿರುತ್ತದೆಯೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ, ಮುಖ್ಯ ಆರೋಗ್ಯಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಆರೋಗ್ಯಾಧಿಕಾರಿಗಳು ದಿನಾಂಕ:09-06-2011 ರ ರೀತ್ಯಾ ನೀಡಿರುವ ಅಭಿಪ್ರಾಯ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

"ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದವರಿಂದ ಕಡ್ಡಾಯವಾಗಿ 10 ವರ್ಷಗಳ ಹಿರಿಯ ಆರೋಗ್ಯ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿದ್ದವರನ್ನು ಮತ್ತು ಸಂಬಂಧಿಸಿದ ಇಲಾಖಾ ಪರೀಕ್ಷೆಗಳನ್ನು ಪಾಸಾಗಿರುವ ಅಭ್ಯರ್ಥಿಗಳನ್ನು ಹೆಲ್ತ್ ಸೂಪರ್‌ವೈಸರ್ ಹುದ್ದೆಗೆ ಆಯ್ಕೆ ಮಾಡಬಹುದಾಗಿರುತ್ತದೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಹಿಂದೆ 27-ಆರೋಗ್ಯ ವೈದ್ಯಾಧಿಕಾರಿಗಳ ಹುದ್ದೆಯಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರನ್ನು ದಿನಾಂಕ:16-05-2011 ರ ಆದೇಶದ ರೀತ್ಯಾ ಆಸ್ಪತ್ರೆಯ ಕೆಲಸ ಕಾರ್ಯಗಳಿಗೆ ನಿಯೋಜಿಸಲಾಗಿರುತ್ತದೆ. ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವಂತೆ, 27 ವಿಧಾನಸಭಾ ಕ್ಷೇತ್ರವಾರು ಹೆಲ್ತ್ ಸೂಪರ್‌ವೈಸರ್‌ಗಳನ್ನು ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ನಿಯೋಜಿಸಬಹುದೆಂದು ತಿಳಿಸಿರುತ್ತಾರೆ."

ಪ್ರಸ್ತುತ ಪಾಲಿಕೆಯಲ್ಲಿ 'ಕಿರಿಯ ಆರೋಗ್ಯ ಪರಿವೀಕ್ಷಕರ' 282-ಮಂಜೂರಾತಿ ಹುದ್ದೆಯಿದ್ದು, 'ನಾಲ್ಕನೇ ದರ್ಜೆ ನೌಕರರ' ಮತ್ತು 'ಪೌರಕಾರ್ಮಿಕರ' ವೃಂದದಿಂದ ಈ ಕೆಳಕಂಡಂತೆ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ.

| ಕ್ರ.ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1 | ಕಿರಿಯ ಆರೋಗ್ಯ ಪರಿವೀಕ್ಷಕರು ರೂ.6250-12000 | 282 | • ಎಸ್.ಎಸ್.ಎಲ್.ಸಿ<br>• ಸ್ಯಾನಿಟರಿ ಇನ್ಸ್‌ಪೆಕ್ಟರ್ ಡಿಪ್ಲೊಮೋ ಪರೀಕ್ಷೆ<br>**ಇಲಾಖಾ ಪರೀಕ್ಷೆಗಳು:**<br>1. ಅಕೌಂಟ್ಸ್ ಹೈಯರ್<br>2. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ |

ಹಾಗೂ 'ಹಿರಿಯ ಆರೋಗ್ಯ ಪರಿವೀಕ್ಷಕರ' 130-ಮಂಜೂರಾತಿ ಹುದ್ದೆಯಿದ್ದು, 'ಕಿರಿಯ ಆರೋಗ್ಯ ಪರಿವೀಕ್ಷಕರು' ವೃಂದದಿಂದ ಈ ಕೆಳಕಂಡಂತೆ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ;

| ಕ್ರ.ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1 | ಹಿರಿಯ ಆರೋಗ್ಯ ಪರಿವೀಕ್ಷಕರು ರೂ.8000-14800 | 130 | ❖ 'ಹಿರಿಯ ಆರೋಗ್ಯ ಪರಿವೀಕ್ಷಕರ' ಹುದ್ದೆಗಳನ್ನು 'ಕಿರಿಯ ಅರೋಗ್ಯ ಪರಿವೀಕ್ಷಕರ ವೃಂದದಿಂದ ಶೇ.75ರಷ್ಟು ಹುದ್ದೆಯನ್ನು ಮುಂಬಡ್ತಿ ಮೂಲಕ ತುಂಬಲು ಮತ್ತು ಶೇ.25 ರಷ್ಟು ಹುದ್ದೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳಲು ಅವಕಾಶವಿರುತ್ತದೆ.<br>**ಇಲಾಖಾ ಪರೀಕ್ಷೆಗಳು:**<br>1. ಅಕೌಂಟ್ಸ್ ಹೈಯರ್<br>2. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್<br>3. ಜನರಲ್ ಲಾ ಭಾಗ-1 & 2<br>4 ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ವಿನಾಯ್ತಿ ಪಡೆದಿರಬೇಕು |

ಮುಂದುವರೆದು, ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಭಾಗ-2ರ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ/6/ಆರ್‌ಸಿಹೆಚ್/85, ದಿನಾಂಕ:29-01-1987ರಲ್ಲಿ ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಸದರಿ ಹುದ್ದೆಯ ವೇತನ ಶ್ರೇಣಿ ರೂ.8,825-16,000 ಗಳಾಗಿರುತ್ತದೆ.

ಆದರೆ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಆರೋಗ್ಯ ಇಲಾಖೆಯಲ್ಲಿ 'ಹಿರಿಯ ಆರೋಗ್ಯ ಪರಿವೀಕ್ಷಕರು' ವೃಂದದಿಂದ ಯಾವುದೇ ಹುದ್ದೆಗೆ ಮುಂಬಡ್ತಿಗಾಗಿ ಅವಕಾಶವಿರುವುದಿಲ್ಲ ಹಾಗೂ 'ಹಿರಿಯ ಆರೋಗ್ಯ ಪರಿವೀಕ್ಷಕರು' ಹುದ್ದೆಯಲ್ಲಿಯೇ ಸೇವೆಯು ಸ್ಥಗಿತಗೊಳ್ಳಲಿದ್ದು, 'ಹೆಲ್ತ್ ಸೂಪರ್‌ವೈಸರ್' ಹುದ್ದೆಗೆ ಯಾವುದೇ ಪ್ರಸ್ತಾಪವಿರುವುದಿಲ್ಲ.

ಈ ಹಿನ್ನಲೆಯಲ್ಲಿ, ದಿನಾಂಕ:16-05-2011ರ ಪ್ರಸ್ತಾವನೆಯಂತೆ, ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ 'ಹಿರಿಯ ಆರೋಗ್ಯ ಪರಿವೀಕ್ಷಕರು' ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27-ಹುದ್ದೆಗಳು ಹಾಗೂ 'ಲೀವ್ ರಿಸರ್ವ್'ಗಾಗಿ ಅಧಿಕ 03-ಹುದ್ದೆಗಳು ಸೇರಿದಂತೆ ಒಟ್ಟು 30-ಹುದ್ದೆಗಳನ್ನು 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿ, ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸಬೇಕಾಗಿರುತ್ತದೆ.

- ❖ Must have passed SSLC examination with 2 years Sanitary Inspector Training Course.
- ❖ Must have put in a service not less than 10 years in the cadre of Senior Health Inspector.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (199) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ನಗರವು ಮಹಾನಗರ ಪಾಲಿಕೆಯಾಗಿ ಪ್ರಸ್ತುತ ಸುಮಾರು 800.00 ಚ.ಕಿ.ಮೀ ವಿಸ್ತೀರ್ಣದಿಂದ ಕೂಡಿರುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯನ್ನು 5 ಹೊಸ ವಲಯಗಳಾದ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ, ಬ್ಯಾಟರಾಯನಪುರ, ದಾಸರಹಳ್ಳಿ ವಲಯಗಳಾಗಿ ಸೃಷ್ಟಿಸಿ ಸೇರ್ಪಡೆ ಮಾಡಲಾಗಿದ್ದು, ಹಾಲಿ 8 ವಲಯಗಳಾಗಿ ವಿಭಜಿಸಿ ಕಾರ್ಯನಿರ್ವಹಣೆ ಮಾಡಲಾಗಿರುತ್ತದೆ. ಬೆಂಗಳೂರು ನಗರದ ಜನಸಂಖ್ಯೆಯು 2001ರ ಜನಗಣತಿ ಪ್ರಕಾರ ಸುಮಾರು 60 ಲಕ್ಷವಿದ್ದು 2025ರ ವೇಳೆಗೆ ಜನಸಂಖ್ಯೆಯ ಪ್ರಮಾಣ ಸುಮಾರು 122 ಲಕ್ಷಗಳಷ್ಟು ಆಗಬಹುದೆಂದು ಅಂದಾಜಿಸಲಾಗಿದೆ. ವಾಹನಗಳ ಸಂಖ್ಯೆಯ ವಾರ್ಷಿಕ ಬೆಳವಣಿಗೆಯು ಪ್ರಸ್ತುತ 12% ರಿಂದ 14% ರಷ್ಟಿದ್ದು, ಒಟ್ಟು ವಾಹನ ಸಂಖ್ಯೆಯು 35 ರಿಂದ 38 ಲಕ್ಷಗಳಷ್ಟು ಇರುತ್ತದೆ.

ಬೆಂಗಳೂರು ಮಹಾನಗರವು ದಕ್ಷಿಣ ಭಾರತದಲ್ಲೇ ಒಂದು ಪ್ರಮುಖ ನಗರವಾಗಿ ಬೆಳವಣಿಗೆಯಾಗುತ್ತಿದ್ದು, ಆರ್ಥಿಕವಾಗಿ ವಾರ್ಷಿಕ ಸುಮಾರು 26000.00 ಕೋಟಿಗಳಷ್ಟು ವಹಿವಾಟು ನಡೆಸಲಾಗುತ್ತಿರುತ್ತದೆ ಎಂದು ಅಂದಾಜಿಸಲಾಗಿದೆ ಹಾಗೂ ಬೆಂಗಳೂರು ನಗರವು ಮಾಹಿತಿ ತಂತ್ರಜ್ಞಾನದಲ್ಲಿ ಪ್ರಪಂಚದಲ್ಲೇ ಒಂದು ಪ್ರಮುಖ ನಗರವಾಗಿ ಗುರುತಿಸಲ್ಪಟ್ಟಿದ್ದು ಹಾಗೂ ಇದು ಸಿಲಿಕಾನ್ ನಗರವೆಂದು ಪ್ರಸಿದ್ಧಿಯಾಗಿದೆ. ಈ ಎಲ್ಲಾ ಕಾರಣಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲಾಗುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಮುಖ್ಯ ಕಣಿವೆಗಳಾದ ವೃಷಭಾವತಿ, ಕೋರಮಂಗಲ, ಹೆಬ್ಬಾಳ, ಛಲ್ಲಘಟ್ಟ ನೀರುಗಾಲುವೆಗಳು ಹರಿಯುತ್ತಿರುತ್ತವೆ. ನಗರ ಪ್ರದೇಶದಲ್ಲಿ ಈಶಾನ್ಯ ಮತ್ತು ನೈರುತ್ಯ ಮುಂಗಾರು ಮಳೆಯಿಂದ ಒಟ್ಟು ಸುಮಾರು 800 ಮಿಲಿ ಮೀಟರ್‌ನಷ್ಟು ವಾರ್ಷಿಕ ಮಳೆಯಾಗುತ್ತಿರುತ್ತದೆ.

2011-12ನೇ ಸಾಲಿನಲ್ಲಿ ಮಹಾನಗರ ಪಾಲಿಕೆಯಿಂದ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ಅಡಿಯಲ್ಲಿ ಯೋಜನಾ ಶಾಖೆಯ ವತಿಯಿಂದ ಆರ್.ಓ.ಬಿ. / ಆರ್.ಯು.ಬಿ.ಗಳು. ಸುರಂಗಮಾರ್ಗಗಳು, ರಸ್ತೆಗೆ ಸಂಬಂಧಪಟ್ಟ ಕಾಮಗಾರಿಗಳು, ಮೂಲಭೂತ ಸೌಕರ್ಯಗಳ ಶಾಖೆಗೆ ಸಂಬಂಧಪಟ್ಟ ಕಾಮಗಾರಿಗಳು ಬೃಹತ್ ರಸ್ತೆಗಳು ವಿಭಾಗದ ಕಾಮಗಾರಿಗಳು, ಮಳೆನೀರಿನ ಚರಂಡಿಗಳ ಕಾಮಗಾರಿಗಳು, ಸಂಸ್ಕೃತಿ ಮತ್ತು ಕ್ರೀಡೆಗೆ ಸಂಬಂಧಪಟ್ಟಂತೆ ಕ್ರೀಡಾಂಗಣ-ಆಟದ ಮೈದಾನ ಮತ್ತು ಉದ್ಯಾನವನದ ಕಾಮಗಾರಿಗೆ ಒಟ್ಟು ರೂ.112636.38 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. ಇವುಗಳಲ್ಲಿ ಯೋಜನಾ ವಿಭಾಗದ ಕಾಮಗಾರಿಗಳ, ಜೆ.ಎನ್.ಎನ್.ಯು.ಆರ್.ಎಂ ಕಾಮಗಾರಿಗಳಿಗೆ ಹಾಗೂ ಮೆಗಾಸಿಟಿ ಯೋಜನೆಯ ಕಾಮಗಾರಿಗಳಿಗೆ ಸಾಲ ಪಡೆಯಲು 2011-12 ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.50000.00 ಲಕ್ಷಗಳನ್ನು ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

| ಆಯವ್ಯಯ ಪುಸ್ತಕದ ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆಯ ವಿವರ | ಆಯವ್ಯಯ ಪುಸ್ತಕದ ಪು.ಸಂ. | 2010-11ನೇ ಸಾಲಿಗೆ ಬೇಕಾಗುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 19 | ಕಾಮಗಾರಿ ಯೋಜನಾ ಶಾಖೆ | - | - |
| 1 | ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳು | 116-122 | 7639.62 |
| 2 | ಆರ್.ಓ.ಬಿ/ ಆರ್.ಯು.ಬಿ.ಗಳು | 122-124 | 8879.20 |
| 3 | ಕ್ರೀಡಾಂಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 125-126 | 4254.85 |
| 4 | ಸುರಂಗಮಾರ್ಗಗಳು | 126 | 587.28 |
| 5 | ಮೂಲಭೂತ ಸೌಕರ್ಯ ಕಾಮಗಾರಿಗಳು (ಕೆ.ಆರ್.ಪುರಂ ರುದ್ರಭೂಮಿ ಮತ್ತು ವಿದ್ಯುತ್ ಚಿತಾಗಾರ) | 121 | 1928.25 |
| 6 | ರಸ್ತೆಗೆ ಸಂಬಂಧಿಸಿದ ಕೆಲಸಗಳು (ರಸ್ತೆ ಮೇಲು ಸೇತುವೆ) | 127-128 | 6198.00 |
| 7 | ರಸ್ತೆಗೆ ಸಂಬಂಧಪಟ್ಟ ಕೆಲಸಗಳು | 116-122 | 7639.62 |
| 20 | ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | - | - |
| 1 | ಕೂಡು ರಸ್ತೆಗಳ ಅಭಿವೃದ್ಧಿ (ಬೃಹತ್ ರಸ್ತೆಗಳು) ರಸ್ತೆಗೆ ಸಂಬಂಧಪಟ್ಟ ಕೆಲಸಗಳು | 144-146 | 12453.38 |
| 2 | ರಸ್ತೆ ಅಗಲೀಕರಣ | 146-147 | 19294.52 |
| 21<br>1 | ಮಳೆನೀರಿನ ಚರಂಡಿಗಳ ಕಾಮಗಾರಿಗಳು (ಜೆ.ಎನ್.ಎನ್.ಯು.ಆರ್.ಎಂ.) | 150 | 21218.66 |
| 2 | ಇತರೆ ಕಾಮಗಾರಿಗಳು ಕೊಳಚೆ ಚರಂಡಿ ಮೋರಿಗಳ ಕಾಮಗಾರಿಗಳು | 152 | 13465.00 |
| 24 | ಸಂಸ್ಕೃತಿ ಮತ್ತು ಕ್ರೀಡೆ: ಮೂಲಭೂತ ಸೌಕರ್ಯಗಳು ಕ್ರೀಡಾಂಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 125 | 9078.00 |
| | | ಒಟ್ಟು | **112636.38** |

ಮೇಲ್ಕಂಡ ಲೆಕ್ಕಶೀರ್ಷಿಕೆಯಲ್ಲಿನ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಪಾಲಿಕೆಯ ಸಂಪಮ್ಮೂಲಗಳಿಂದ 2011-12ನೇ ಸಾಲಿನಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ, ಬ್ಯಾಂಕುಗಳಿಂದ ರೂ.500.00 ಕೋಟಿಗಳ ದೀರ್ಘಾವಧಿ ಸಾಲ ಪಡೆಯಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

. . . .3

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26–09–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (200) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ರೂ.1000-00 ಕೋಟಿ ಸಾಲ ಪಡೆಯಲು ದಿನಾಂಕ:16-09-2011 ರಂದು ಮಾನ್ಯ ಆಯುಕ್ತರವರು ಆದೇಶ ನೀಡಿರುವುದರಿಂದ, ಪಾಲಿಕೆಯ ದಿನನಿತ್ಯದ ವಹಿವಾಟುಗಳನ್ನು, ನಿರ್ವಹಣಾ ವೆಚ್ಚಗಳನ್ನು ಹಾಗೂ ತುರ್ತುಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಅಲ್ಲದೆ, ಅತಿಹೆಚ್ಚಿನ ಬಡ್ಡಿದರದ ಮೇಲೆ ಪಡೆಯಲಾಗಿರುವ ಸಾಲಗಳನ್ನು ಮರುಪಾವತಿ ಮಾಡಿದಲ್ಲಿ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಿದಂತಾಗುತ್ತದೆ.

ಈ ವಿಷಯದಲ್ಲಿ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (201) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:27-06-2011ರ ಸಭೆಯ ನಡವಳಿ ವಿಷಯದ ಸಂಖ್ಯೆ:ಸಿಆಸುಸ್ಥಾಸ/06/2011-12 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯು 1971ರಲ್ಲಿ ತಯಾರಿಸಿದ್ದು, ತಹಲ್‌ವರೆವಿಗೂ ಸದರಿ ನಿಯಮಾವಳಿಗಳ ಅನುಸಾರ ಆಡಳಿತಾತ್ಮಕ ಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದೆ. ಪ್ರಸ್ತುತ 7 ನಗರ ಸಭೆ ಮತ್ತು 110 ಪಂಚಾಯತಿಗಳನ್ನು ಸೇರ್ಪಡೆ ಮಾಡಿಕೊಂಡಿದ್ದು, ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಹಲವಾರು ಹುದ್ದೆಗಳನ್ನು ಸೇರ್ಪಡಿಸಿಕೊಂಡು, ಪಾಲಿಕೆಯ ಆಡಳಿತಾತ್ಮಕ ಕೆಲಸಕಾರ್ಯಗಳು ಸುಗಮವಾಗಿ ನಿರ್ವಹಿಸಲು ರೂಢಿಸಿಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಹೊಸದಾಗಿ ಹುದ್ದೆಗಳನ್ನು ಸೃಜಿಸಿಕೊಳ್ಳುವ ಸಲುವಾಗಿ ದಕ್ಷರಾದಂತಹ ಹಾಗೂ ಸೇವಾ ವಿಷಯಗಳಲ್ಲಿ ಪರಿಣಿತಿ ಹೊಂದಿದ ಅಧಿಕಾರಿಯೊಬ್ಬರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಹಾಗೂ ಹಾಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಪುನರ್ ಪರಿಷ್ಕರಿಸಿರುವ / ಪರಿಶೀಲನಾ ಸಮಿತಿ ರಚನೆಯಾಗಿದ್ದು, ಸದರಿ ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿರುವ ಸಹಾಯಕ ಆಯುಕ್ತರು (ಆಡಳಿತ-2) ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ. ಹರಿಣಿ ವನಜಕುಮಾರಿ, ಕೆ.ಎ.ಎಸ್. ರವರು ಇದೇ ತಿಂಗಳ 30 ರಂದು ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದುತ್ತಿದ್ದು, ಸದರಿಯವರು ಸೇವಾ ವಿಷಯಗಳಲ್ಲಿ ಹೆಚ್ಚಿನ ಅನುಭವ ಹೊಂದಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾರ್ಪಡಿಸಲು ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸೇವಾ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸುವ ಕಾರ್ಯವನ್ನು ನಿರ್ವಹಿಸುವ ಸಲುವಾಗಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000-00 ಗಳ ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಶ್ರೀಮತಿ. ಹರಿಣಿ ವನಜಕುಮಾರಿ, ಕೆ.ಎ.ಎಸ್. ರವರು ಸರ್ಕಾರದಿಂದ ಎರವಲು ಸೇವೆಯ ಮೇಲೆ ಪಾಲಿಕೆಯಲ್ಲಿ ಸಹಾಯಕ ಆಯುಕ್ತರು (ಆಡಳಿತ-2) ಹುದ್ದೆಯಲ್ಲಿ ಕಾರ್ಯನಿರ್ವಹಿಸಿ, ವಯೋಮಿತಿಗನುಗುಣವಾಗಿ ದಿನಾಂಕ:30-06-2011 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ / ಪರಿಷ್ಕರಿಸಿರುವ ವಿಷಯದಲ್ಲಿ ಸದರಿ ಅಧಿಕಾರಿಯ ಸೇವೆಯು ಅವಶ್ಯಕವಾಗಿರುತ್ತದೆ.

ನಿವೃತ್ತ ಸರ್ಕಾರಿ ಅಧಿಕಾರಿ / ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಸಂಬಂಧ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳ ನಿಯಮ-20ರಲ್ಲಿ ಈ ಕೆಳಕಂಡಂತೆ ಅವಕಾಶವಿರುತ್ತದೆ.

**20. Provision for appointment of retired persons and for appointment by contract:-**

Notwithstanding anything contained in rules the corporation may with prior approval of the Government if it considers necessary for reasons to be recorded in writing that it is in the public interest so to do.

. . . .2

(a) Appointment to any category of post any person who has retired from service of the Government on such terms and conditions and for such period as may be necessary and after consultation of the Commission when such consultation is necessary;

(b) Appoint on contract any person not being a retired person to any category of post, if in the opinion of the Commissioner such person is able to discharge the duties of such post. The period of such contract appointment shall not exceed five years and shall be on such terms and conditions as may be determined by the Commissioner.

ಈ ಹಿನ್ನಲೆಯಲ್ಲಿ, ಶ್ರೀಮತಿ. ಹರಿಣಿ ವನಜಕುಮಾರಿ, ಕೆ.ಎ.ಎಸ್. ನಿವೃತ್ತ ಅಧಿಕಾರಿಯವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000-00 ಗಳ ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮುಂಡಿಸಿರುವ ಆಯುಕ್ತರವರ ದಿನಾಂಕ:12-08-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (205) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಡುಗೋಡಿ ಭಾಗದಲ್ಲಿನ ಹೊಸೂರು-ಲಸ್ಕರ್ ರಸ್ತೆಯ ಅಗಲೀಕರಣ ಸಂಬಂಧ ಲಕ್ಕಸಂದ್ರ ವಾರ್ಡ್ ನಂ-146 (ಹಳೆ ವಾರ್ಡ್ ನಂ-63) ಮತ್ತು ಆಡುಗೋಡಿ ವಾರ್ಡ್ ನಂ-147 (ಹಳೆ ವಾರ್ಡ್ ನಂ-67) ರಲ್ಲಿನ ಸ್ವತ್ತುಗಳನ್ನು ಅಧಿಸೂಚನೆ ಸಂಖ್ಯೆ: JDTP/RW/Phase-1/Sector-1/C-2/PR-1/2004-05, dated:02-03-2005 ರನ್ವಯ ಟಿ.ಡಿ.ಆರ್ ಯೋಜನೆಯಡಿ ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದ್ದು, 4.30 ಕಿ.ಮೀ ಉದ್ದದ ರಸ್ತೆಯನ್ನು 30 ಮೀಟರ್‌ಗೆ ಅಗಲೀಕರಣಗೊಳಿಸುವ ಕಾಮಗಾರಿಯು ಆಡುಗೋಡಿ ಭಾಗದಲ್ಲಿ ಪ್ರಗತಿಯಲ್ಲಿರುತ್ತದೆ. ಆದರೆ, ಈ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವ ಸ್ವತ್ತುಗಳ ಪೈಕಿ 47 ಸ್ವತ್ತುಗಳ ಮಾಲೀಕರು ಟಿ.ಡಿ.ಆರ್ ಪಡೆಯಲು ಒಪ್ಪದೇ ಇದ್ದುದರಿಂದಲೂ, ದಿನಾಂಕ: 06-11-2010ರಂದು ಮಾನ್ಯ ಆಯುಕ್ತರು ಈ ರಸ್ತೆ ಅಗಲೀಕರಣ ಕಾಮಗಾರಿಯ ಪ್ರಗತಿ ಪರಿಶೀಲನೆಯನ್ನು ನಡೆಸಿದ್ದು, ಅವಶ್ಯವಿರುವ ಸ್ವತ್ತುಗಳಿಗೆ ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವುದರಿಂದಲೂ, ಸದರಿ ರಸ್ತೆಗೆ ಹೊಂದಿಕೊಂಡಿರುವ ಪ್ರಸ್ತಾಪಿತ 47 ಖಾಸಗಿ ಸ್ವತ್ತುಗಳ ಭಾಗಶಃ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆ ಅಗಲೀಕರಣ-3 ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ: 24-06-2011ರಂದು ರಸ್ತೆ ಅಗಲೀಕರಣ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಹಾಗೂ ಭೂಮಾಪಕರೊಂದಿಗೆ ರಸ್ತೆ ಅಗಲೀಕರಣಕ್ಕೆ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಸ್ಥಳ ತನಿಖೆ ಮಾಡಿರುತ್ತಾರೆ. ಸಿ.ಟಿ.ಎಸ್.ನಂ-522, 253, 524, 434 ಮತ್ತು 435ರ ಸ್ವತ್ತುಗಳ ಮಾಲೀಕರುಗಳು ಟಿ.ಡಿ.ಆರ್ ಪಡೆಯಲು ಒಪ್ಪದಿದ್ದಲ್ಲಿ, ಭೂಸ್ವಾಧೀನ ಪ್ರಸ್ತಾವನೆಗೆ ಸೇರಿಸಲು ಹಾಗೂ ಸಿ.ಟಿ.ಎಸ್.ನಂ-12 (ದೇವಸ್ಥಾನ), 13 (ಅಂಚೆ ಕಛೇರಿ) ಮತ್ತು 163 (ಬಿ.ಬಿ.ಎಂ.ಪಿ ಹಾಸ್ಪಿಟಲ್) ಸ್ವತ್ತುಗಳು ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳಾದ್ದರಿಂದ, ಇವುಗಳ ಮೌಲ್ಯವನ್ನು ಕೈಬಿಟ್ಟು ವಿಸ್ತೀರ್ಣವನ್ನು ಮಾತ್ರ ಭೂಸ್ವಾಧೀನ ಪ್ರಸ್ತಾವನೆಗೆ ಸೇರಿಸಲು ಸೂಚಿಸಿ, ಈ ಎಲ್ಲಾ ಸ್ವತ್ತುಗಳು ರಸ್ತೆ ಅಗಲೀಕರಣಕ್ಕೆ ಅವಶ್ಯವಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸಿ.ಟಿ.ಎಸ್ ನಂ-163, ಬಿ.ಬಿ.ಎಂ.ಪಿ ಆಡುಗೋಡಿ ಹಾಸ್ಪಿಟಲ್‌ನ ಸ್ವತ್ತು ಪಾಲಿಕೆಯದಾಗಿದ್ದು, ಸಿ.ಟಿ.ಎಸ್ ನಂ-12, ವೇಣುಗೋಪಾಲಸ್ವಾಮಿ ದೇವಸ್ಥಾನ ಸ್ವತ್ತಿನ ಮತ್ತು ಸಿ.ಟಿ.ಎಸ್ ನಂ-13, ಅಂಚೆ ಕಛೇರಿ ಸ್ವತ್ತುಗಳಲ್ಲಿನ ಭಾಗಶಃ ವಿಸ್ತೀರ್ಣ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿದ್ದು, ಈ ಸ್ವತ್ತುಗಳು ಸರ್ಕಾರ/ಬೆಂ.ಅ.ಪ್ರಾಧಿಕಾರದಿಂದ ಗುತ್ತಿಗೆ/ಕರಾರು ಮೂಲಕ ನೀಡಿರಬಹುದಾದ ಸ್ವತ್ತುಗಳಾಗಿರುವುದರಿಂದ, ಇವುಗಳ ಮೌಲ್ಯವನ್ನು ನಿಗಧಿಪಡಿಸಿರುವುದಿಲ್ಲ. ಇವುಗಳನ್ನು ಉಚಿತವಾಗಿ ಹಸ್ತಾಂತರಿಸಿಕೊಳ್ಳಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಪಾಲಿಕೆಯ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ಮೇಲ್ಕಂಡ ಪ್ರಸ್ತಾವನೆಯಂತೆ ಕ್ರಮವಹಿಸಲು ಅಗತ್ಯ ದಾಖಲೆಗಳೊಂದಿಗೆ ಶಿಫಾರಸ್ಸು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

. . . .2

| ಕ್ರ ಸಂ. | ಸಿ.ಟಿ.ಎಸ್ . ಸಂಖ್ಯೆ | ಪಿ.ಐ.ಡಿ ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ವಿಸ್ತೀರ್ಣ (ಚ.ಅ.ಗಳಲ್ಲಿ) | ಭೂಸ್ವಾಧೀನ ಪ್ರಸ್ತಾಪಿತ ವಿಸ್ತೀರ್ಣ(ಚ.ಅ.ಗಳಲ್ಲಿ) | | ಷರಾ |
|---|---|---|---|---|---|---|---|
| | | | | | ನಿವೇಶನ | ಕಟ್ಟಡ | |
| 1 | 2 | 3 | 4 | 5 | 6 | 7 | 8 |
| ಲಕ್ಕಸಂದ್ರ ವಾರ್ಡ್ ನಂ-146 | | | | | | | |
| 1 | 609 | 63-40-63 | ಲಕ್ಷ್ಮೀನರಸಮ್ಮ | 4160.75 | 360.30 | 360.30 | ಆರ್.ಸಿ.ಸಿ. ಕಟ್ಟಡ |
| 2 | 608 | 63-40-62/1-1 | ಎ.ಎನ್.ಹುಸೇನ್ | 154.4 | 80.0 | 80.00 | ಎ.ಸಿ.ಶೀಟ್ ಕಟ್ಟಡ |
| 3 | 608 | 63-40-62/1 | ಪ್ರಭಾಕರನ್ | 154.4 | 110.70 | 110.70 | ಎ.ಸಿ.ಶೀಟ್ ಕಟ್ಟಡ |
| 4 | 607 | 63-40-61/1 | ಎ.ಬಿ.ಮಂಜುಳ ರಾಧಾಕೃಷ್ಣ | 2250.0 | 180.9 | 166.32 | ಎ.ಸಿ.ಶೀಟ್ ಕಟ್ಟಡ |
| 5 | 607 | 63-40-61 | ನಾರಾಯಣಮ್ಮ | 414.33 | 240.4 | 240.4 | ಎ.ಸಿ.ಶೀಟ್ ಕಟ್ಟಡ |
| 6 | 606 | 63-40-60 | ಎಲ್.ಸುರೇಶ್ &ಎಸ್.ಪ್ರಭ | 6076.0 | 870.3 | 718.2 | ಎ.ಸಿ.ಶೀಟ್ ಕಟ್ಟಡ |
| 7 | 605 | 63-40-59/2 | ಸಂತೋಷ್‌ಕುಮಾರ್ ಮಿತ್ತಲ್ | 5306.12 | 810.2 | - | - |
| 8 | 604 | 63-40-58 | M/s. ಶ್ರೀವೆಂಕಟೇಶ್ವರ ಪ್ರಾಪರ್ಟೀಸ್ | 5863.0 | 920.9 | - | - |
| 9 | 603 | 63-40-57 | ವಿ.ಗಣೇಶನ್ | 2730.0 | 564.0 | 689.01 | ಆರ್.ಸಿ.ಸಿ. ಕಟ್ಟಡ |
| 10 | 603 | 63-40-57/1 | ವಿ.ಶರವಣನ್ | 2100.0 | 330.90 | 295.00 | ಆರ್.ಸಿ.ಸಿ. ಕಟ್ಟಡ |
| 11 | 601 | 63-40-55 | ವಿ.ಪದ್ಮನಾಭನಾಯ್ಡು | 3480.0 | 387.00 | - | - |
| 12 | 602 | 63-40-56 | ಲಕ್ಷ್ಮೀನರಸಮ್ಮ | 2328.25 | 387.00 | - | - |
| 13 | 600 | 63-40-54 | ಎನ್.ಸರೋಜಮ್ಮ | 6480.00 | 618.00 | - | - |
| 14 | 599 | 63-40-53/1 | ಆರ್.ಲೋಕೇಶ್ | 1000.0 | 260.0 | 163.55 | ಎ.ಸಿ.ಶೀಟ್ ಕಟ್ಟಡ |
| 15 | 598 | 63-40-53 | ನಂಜಮ್ಮ | 1950.0 | 380.2 | 853.64 | ಆರ್.ಸಿ.ಸಿ. ಕಟ್ಟಡ |
| 16 | 528 | 63-40-48-49 | ಆರ್.ವೆಂಕಟಸ್ವಾಮಿ ರೆಡ್ಡಿ | 3600.0 | 410.00 | - | - |
| 17 | 527 | 63-40-47 | ಡಾ.ಹೆಚ್.ಪಿ.ಪ್ರಕಾಶ್ | 1800.0 | 223.5 | 199.00 | ಆರ್.ಸಿ.ಸಿ. ಕಟ್ಟಡ |
| 18 | 526 | 63-40-46 | ಹೆಚ್.ಚಿಕ್ಕಣ್ಣ | 1800.0 | 270.0 | 806.19 | ಆರ್.ಸಿ.ಸಿ.ಕಟ್ಟಡ |
| 19 | 525 | 63-40-44-45 | ಟಿ.ಚಂದ್ರಶೇಖರಗೌಡ | 1350 | 230.25 | 455.5 | ಆರ್.ಸಿ.ಸಿ.ಕಟ್ಟಡ |

. . . .3

| | | | | | | | |
|---|---|---|---|---|---|---|---|
| 20 | 525 | 63-40-45/01 | ನರಸೇಗೌಡ | 1200.00 | 230.3 | 691.47 | ಆರ್.ಸಿ.ಸಿ.ಕಟ್ಟಡ |
| 21 | 522 | 63-40-39 | ಎ. ನಾಗಮಣಿ | 2400.00 | 344.00 | - | - |
| 22 | 523 | 63-40-41 | ಪಿ.ವೆಂಕಟಲಕ್ಷ್ಮಿ | - | 348.3 | - | - |
| 23 | 524 | 63-40-42 | ಗೋಪಾಲ್ ರೆಡ್ಡಿ | 1800.00 | 167.00 | - | - |
| 24 | 434 | 63-40-35 | ಬಿ.ಎನ್.ಯೋಗ ನರಸಿಂಹ ಮೂರ್ತಿ ಮತ್ತು ಸುಮನ್ ವಿಜಯ | 1200.00 | 183.00 | - | - |
| 25 | 435 | 63-40-61/4 | ಕೆ.ಜಯರಾಂ | 837.5 | 227.6 | - | - |
| | | | | ಒಟ್ಟು | **9134.75** | **5829.28** | |
| **ಆಡುಗೋಡಿ ವಾರ್ಡ್ ನಂ-147** | | | | | | | |
| 26 | 164 | 67-23-18/1-2 | ಹೆಚ್.ಜಯರಾಂ | 500.0 | 8.07 | 8.00 | ಎ.ಸಿ. ಶೀಟ್ ಕಟ್ಟಡ |
| 27 | 164 | 67-23-18/1 | ಕೆ.ನಾಗರಾಜ ಶೆಟ್ಟಿ | 500.0 | 20.4 | 20.4 | ಎ.ಸಿ. ಶೀಟ್ ಕಟ್ಟಡ |
| 28 | 164 | 67-23-18/1-1 | ಜಯಮ್ಮ | 294.5 | 40.1 | 40.00 | ಎ.ಸಿ. ಶೀಟ್ ಕಟ್ಟಡ |
| 29 | 167 | 67-23-19 | ಎಸ್.ಎಂ.ಅಬಿಬುಲ್ಲಾ | 1829.0 | 140.0 | 240.00 | ಆರ್.ಸಿ.ಸಿ.ಕಟ್ಟಡ |
| 30 | 168 | 67-23-20 | ಎ.ಎಂ.ಶ್ರೀಧರ್ | 2445.0 | 230.7 | 120.72 | ಎ.ಸಿ. ಶೀಟ್ ಕಟ್ಟಡ |
| 31 | 187 | 67-23-21 | ಸಿ.ಸತ್ಯನಾರಾಯಣ | 2619.0 | 350.5 | 350.5 | ಆರ್.ಸಿ.ಸಿ.ಕಟ್ಟಡ |
| 32 | 188 | 67-23-22 | ತೋಟಮ್ಮ | 8000.0 | 2300.00 | 1820.59 | ಎ.ಸಿ. ಶೀಟ್ ಕಟ್ಟಡ |
| 33 | 189 | 67-23-23/3 | ವಿ.ಪಾಪಣ್ಣ | 1050.0 | 360.4 | 592.25 | ಆರ್.ಸಿ.ಸಿ.ಕಟ್ಟಡ |
| 34 | 189 | 67-23-23 | ಲೀಲಾಬಾಯಿ | 1000.0 | 360.9 | 619.99 | ಆರ್.ಸಿ.ಸಿ.ಕಟ್ಟಡ |
| 35 | 190 | 67-23-23/1 | ಯು.ನಾರಾಯಣ ಫಣೀಕರ್ | 2400.0 | 670.7 | 1241.97 | ಆರ್.ಸಿ.ಸಿ.ಕಟ್ಟಡ |
| 36 | 191 | 67-23-24 | ಚಿನ್ನಸ್ವಾಮಿ | 1440.0 | 320.8 | - | - |
| 37 | 192 | 67-23-25 | ಎ.ಚಂದ್ರಶೇಖರ ರೆಡ್ಡಿ & ಬಿಜ್ಜುರಮಣ ರೆಡ್ಡಿ | 2052.0 | 190.4 | - | - |
| 38 | 193 | 67-23-26/1 | ಎ.ಜಿ.ಗೋವರ್ಧನ್ | 1647.0 | 220.5 | 220.5 | ಆರ್.ಸಿ.ಸಿ.ಕಟ್ಟಡ |
| 39 | 193 | 67-23-26 | ಎ.ಜಿ.ಮುಕುಂದ | 1593.0 | 320.2 | 141.6 | ಆರ್.ಸಿ.ಸಿ.ಕಟ್ಟಡ |
| 40 | 194 | 67-23-27/1 | ಕೆ.ವಿ.ಶ್ರೀನಿವಾಸಶೆಟ್ಟಿ | 600.0 | 480.0 | - | - |
| 41 | 194 | 67-23-27/2 | ಜಯಮ್ಮ | 1008.0 | 290.5 | 200.00 | ಆರ್.ಸಿ.ಸಿ.ಕಟ್ಟಡ |
| 42 | 194 | 67-23-27 | ಖೈನೇರಿಸಾ | 1647.0 | 320.0 | 220.6 | ಆರ್.ಸಿ.ಸಿ.ಕಟ್ಟಡ |
| 43 | 195 | 67-30-18/1 | ಜಿ.ನಾರಾಯಣಸ್ವಾಮಿ | 1031.0 | 140.0 | 990 | ಆರ್.ಸಿ.ಸಿ.ಕಟ್ಟಡ |
| 44 | 198 | 67-23-29/1 | M/s. ಸಮರ್ಥ ಎಂಟರ್‌ಪ್ರೈಸಸ್ (ಗುತ್ತಿಗೆದಾರರು) | 8000.0 | 3024.0 | - | - |
| | | | | ಒಟ್ಟು | **9788.17** | **6827.12** | |

. . . .4

| ಆಡುಗೋಡಿ ವಾರ್ಡ್ ನಂ–148 ರಲ್ಲಿನ ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳು | | | | | | | |
|---|---|---|---|---|---|---|---|
| 45 | 163 | 67–23 | ಬಿ.ಬಿ.ಎಂ.ಪಿ ಹಾಸ್ಪಿಟಲ್ (ಆಡುಗೋಡಿ) | 3762.00 | 240.00 | – | – |
| 46 | 12 | 67–23–14, 67–23–15 | The President of Gokulastamic Yadava Sangha & The President of Grama Abhyudaya Sangha (ವೇಣುಗೋಪಾಲ ಸ್ವಾಮಿ ದೇವಸ್ಥಾನ) | 1872.00 11,000.00 | 292.00 | – | – |
| 47 | 13 | 67–23–15 | The President of Grama Abhyudaya Sangha (ಅಂಚೆ ಕಛೇರಿ) | 11,000.00 | 62.00 | – | – |
| | | | | ಒಟ್ಟು | 594.00 | – | |

ಘೋಷ್ವಾರೆ

| ವಾರ್ಡ್ ಹೆಸರು ಮತ್ತು ನಂಬರ್ | ಖಾಸಗಿ ಸ್ವತ್ತುಗಳ ವಿಸ್ತೀರ್ಣ ಚ.ಅಡಿಗಳಲ್ಲಿ | | ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳ ವಿಸ್ತೀರ್ಣ ಚ.ಅಡಿ | | ಒಟ್ಟು ಚ.ಅಡಿ | |
|---|---|---|---|---|---|---|
| | ನಿವೇಶನ | ಕಟ್ಟಡ | ನಿವೇಶನ | ಕಟ್ಟಡ | ನಿವೇಶನ | ಕಟ್ಟಡ |
| ಲಕ್ಕಸಂದ್ರ–146 | 9134.75 | 5829.28 | – | – | 9134.75 | 5829.28 |
| ಆಡುಗೋಡಿ–147 | 9788.17 | 6827.12 | 594.00 | – | 10382.17 | 6827.12 |
| ಒಟ್ಟು | **18922.92** | **12656.4** | **594.00** | – | **19516.92** | **12656.4** |

ಮೇಲ್ಕಂಡಂತೆ 1894ರ ಭೂಸ್ವಾಧೀನ ಕಾಯ್ದೆಯನ್ವಯ ಸ್ವಾಧೀನಪಡಿಸಿಕೊಳ್ಳಲಾಗುತ್ತಿರುವ ಸ್ವತ್ತುಗಳು ಪಾಲಿಕೆಯ ವ್ಯಾಪ್ತಿಯ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿರುವುದರಿಂದ, ಇವುಗಳಿಗೆ ದಿನಾಂಕ:19–04–2007ರ ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ ಚ.ಅಡಿಗೆ ರೂ.3000/– ಗಳಂತೆ ನಿಗಧಿಪಡಿಸಿ, ಪಾವತಿಸಬೇಕಾದ ಪರಿಹಾರ ಹಾಗೂ ಇತರೆ ವೆಚ್ಚಗಳನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡಲಾಗಿದೆ.

"ಅ"-ಭೂ ಪರಿಹಾರ ವೆಚ್ಚ

| ಕ್ರ ಸಂ | ವಿವರಣೆ | ಮೊಬಲಗು (ರೂ.ಗಳಲ್ಲಿ) |
|---|---|---|
| 1 | ಎ). ಚ.ಅಡಿ ಒಂದಕ್ಕೆ ರೂ.3000/- ರಂತೆ **18922.92** ಚ.ಅಡಿ ನಿವೇಶನಗಳಿಗೆ ಮೌಲ್ಯ<br>ಬಿ). ಅಭಿಯಂತರರ ವರದಿಯಂತೆ ಸ್ವಾಧೀನಪಡಿಸಿಕೊಳ್ಳಲಾಗುವ ಕಟ್ಟಡದ ಮೌಲ್ಯ (ವಿಸ್ತೀರ್ಣ 12656.4 ಚ.ಅಡಿ) | 5,67,68,760/-<br>47,64,163/- |
| | ಒಟ್ಟು | 6,15,32,923/- |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 73,83,951/- |
| 3 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ23(2) ರ ಅನ್ವಯ ಶೇಕಡಾ 30 ರಂತೆ ಶಾಸನ ಬದ್ಧ ಭತ್ಯೆ | 1,84,59,876/- |
| | ಒಟ್ಟು (1+2+3) | 8,73,76,750/- |

"ಆ"- ಇತರೆ ವೆಚ್ಚ

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | - |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | - |
| 6 | ಪ್ರಕಟಣಾ ವೆಚ್ಚ (ಅಂದಾಜು) | **3,00,000** |
| | (ಅ+ಆ) ಒಟ್ಟು | **8,76,76,750/-** |

ಷರಾ: ದಿನಾಂಕ: 5-9-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ರೂ.ಎಂಟು ಕೋಟಿ ಎಪ್ಪತ್ತಾರು ಲಕ್ಷದ ಎಪ್ಪತ್ತಾರು ಸಾವಿರದ ಏಳು ನೂರ ಐವತ್ತು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. **8,76,76,750/- (ರೂ.ಎಂಟು ಕೋಟಿ ಎಪ್ಪತ್ತಾರು ಲಕ್ಷದ ಎಪ್ಪತ್ತಾರು ಸಾವಿರದ ಏಳು ನೂರ ಐವತ್ತು ಮಾತ್ರ)** ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-07-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

| | | | | | | | | |
|---|---|---|---|---|---|---|---|---|
| 5 | 3 | - | 4 | - | ಶ್ರೀಮತಿ.ಎಸ್.ಮುಬಾರಕ್ ಉನ್ನೀಸಾ ಕೋಂ ಸೈಯ್ಯದ್ ಬಹಾದೂರ್ ಪಾಷ | 12.25 | 132.00 | ಕ್ರಯ ಪತ್ರ ನಂ-2005, ದಿ:08-10-1998, ಶ್ಯಾಮಣ್ಣನಗರ ನಿವೇಶನ ನಂ-12 |
| 6 | 5 | - | 1 | - | ಸಿರಾಜ್ | 43.00 | 463.00 | ದಾಖಲೆ ಒದಗಿಸಿಲ್ಲ |
| 7 | 5 | - | 2 | - | ಮುಬಿನ್ ತಾಜ್ | 19.00 | 205.00 | ದಾಖಲೆ ಒದಗಿಸಿಲ್ಲ |
| 8 | 5 | - | 4 | 42-78-1 | ರಹಮತ್ ಉಲ್ಲಾಖಾನ್ @ ಮುನಾವರ್ ಬಿನ್ ಅಬ್ದುಲ್ ಬಬ್ಬರ್ ಖಾನ್ | 76.50 | 823.00 | 1. ಬಿ.ಎಂ.ಪಿ ನೋಟೀಸ್ ದಿ:30-11-99-ನಿವೇಶನ ನಂ-1<br>2. ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ-1 |
| 9 | 5 | - | 5 | 42-88-15 | ಚಾಂದ್ ಪಾಷ ಬಿನ್ ಸುಲೈಮಾನ್ ಷರೀಫ್ | 90.00 | 969.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ-15 |
| 10 | 682 | - | - | 43-97-21 | ಶ್ರೀಮತಿ.ಪಾರ್ವತಮ್ಮ ಕೋಂ ಸಂಜೀವಮೂರ್ತಿ | 93.25 | 1004.00 | ದಾಖಲೆ ಒದಗಿಸಿಲ್ಲ |
| 11 | 683/ಪೈ | II | 2 | - | ಖಲೀಮುಲ್ಲಾ ಬೇಗ್ ಬಿನ್ ಷಫೀಉಲ್ಲಾ ಬೇಗ್ | 55.25 | 595.00 | 1. ಬಿ.ಬಿ.ಎಂ.ಪಿ ಸೂಚನಾ ಪತ್ರ ದಿ:08-07-11 ಸ.ನಂ/ನಿವೇಶನ ನಂ-10<br>2. 2011-12ನೇ ತೆರಿಗೆ ಪಾವತಿ ರಸೀದಿ ದಿ:16-05-2011, ಸ.ನಂ-10 |
| 12 | 683/ಪೈ | II | 3 | - | ಇನಾಯಿತುಲ್ಲಾ | 84.50 | 910.00 | ದಾಖಲೆ ಒದಗಿಸಿಲ್ಲ |
| 13 | 683/ಪೈ | II | 5 | - | ಚಾಂದ್ ಪಾಷ (ಶಹಬಜ್ ಚಿಕನ್ ಅಂಗಡಿ) | 45.60 | 494.00 | ದಾಖಲೆ ಒದಗಿಸಿಲ್ಲ |

ಮೇಲ್ಕಂಡ ಸ್ವತ್ತುಗಳ ಪೈಕಿ ಬಿ-ಖಾತಾ ಪಡೆದಿರುವ ಹಾಗೂ ಖಾತಾ ಇಲ್ಲದಿರುವ ಸ್ವತ್ತುಗಳ ಸರ್ಕಾರಿ/ರೈಲ್ವೆ/ಕಂದಾಯ/ಬಿಡಿಎ/ಇತ್ಯಾದಿ ಸಂಸ್ಥೆಗಳ ಮಾಲೀಕತ್ವ ಇದ್ದಲ್ಲಿ ಪರಿಶೀಲಿಸಿ, 5(ಎ) ವಿಚಾರಣೆ ಹಂತದಲ್ಲಿ ನಿವೇಶನ ಮಾಲೀಕತ್ವ ಇದ್ದಲ್ಲಿ ಮೇಲ್ಕಂಡ ಖಾತೆದಾರರು/ಅನುಭವದಾರರಿಗೆ ಮಾತ್ರ ಭೂ ಪರಿಹಾರ ನೀಡುವ ಬಗ್ಗೆ ಪರಿಗಣಿಸುವ ಷರತ್ತಿಗೆ ಒಳಪಡಿಸಲಾಗಿದೆ.

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಪ್ರದೇಶವು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ಅಧಿಸೂಚನೆಯ ದಿನಾಂಕ:19-04-2007ರಂತೆ ಪ್ರಸ್ತಾಪಿತ ಪರಿಷ್ಕೃತ ದರವು ಪ್ರತಿ ಚದರ ಅಡಿ 1ಕ್ಕೆ ರೂ.900/-ಗಳಾಗಿರುತ್ತದೆ. ಈ ದರವನ್ನು ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣಕ್ಕೆ ಅಳವಡಿಸಿದಾಗ, ಪರಿಹಾರದ ಮೊಬಲಗು ಈ ಕೆಳಕಂಡಂತೆ ಆಗುತ್ತದೆ.

. . . 3

"ಅ" – ಭೂ ಪರಿಹಾರ ವೆಚ್ಚ

| ಕ್ರ.ಸಂ. | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ: 19-04-2007 ರ ಸರ್ಕಾರದ ಮಾರ್ಗಸೂಚಿ ದರದಂತೆ,<br>1. ಚ.ಅಡಿ ಒಂದಕ್ಕೆ ರೂ.900/- ರಂತೆ 7982 ಚದರ ಅಡಿಗಳಿಗೆ<br>2. ಕಟ್ಟಡಗಳ ಮೌಲ್ಯ (ಇಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುವ ಲೆಕ್ಕಚಾರ ವ್ಯಾಲ್ಯುಯೇಷನ್ ತಃಖ್ತೆಯಂತೆ | 71,83,800/-<br>46,41,397/- |
| | ಒಟ್ಟು | 1,18,25,197/- |
| 2 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡ 30 ರಂತೆ ಶಾಸನ ಬದ್ಧ ಭತ್ಯೆ | 35,47,559/- |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 14,19,023/- |
| | ಒಟ್ಟು (1+2+3) | 1,67,91,779/- |

"ಆ" – ಇತರೆ ವೆಚ್ಚ

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡ 10 ರಷ್ಟು | - |
| 5 | ಆಡಿಟ್ ವೆಚ್ಚ ಶೇಕಡ 1 ರಷ್ಟು | - |
| 6 | ಪ್ರಕಟಣಾ ವೆಚ್ಚ (ಅಂದಾಜು) | 2,00,000/- |
| | ಒಟ್ಟು (1+2+3+6) | 1,69,91,779/- |

ಷರಾ: ದಿನಾಂಕ: 5-09-1063 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಅ+ಆ) ಒಟ್ಟು**

**(ರೂ. ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಏಳು ನೂರ ಎಪ್ಪತ್ತೊಂಭತ್ತು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ, 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.1,69,91,779/- (ರೂ. ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಏಳು ನೂರ ಎಪ್ಪತ್ತೊಂಭತ್ತು ಮಾತ್ರ) ಗಳಾಗಲಿದ್ದು, ಈ ಹಿನ್ನಲೆಯಲ್ಲಿ, ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ

. . . .4

ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (207) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು ರಸ್ತೆಯ ನಂ.133 ಹಂಪಿನಗರ ವಾರ್ಡ್‌ನಲ್ಲಿರುವ ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಮೇಲುಸೇತುವೆ ನಿರ್ಮಾಣ ಮತ್ತು ರಸ್ತೆ/ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಾಗಿ ಶ್ರೀಮತಿ.ಡಿ.ಸುಭದ್ರಮ್ಮ ಕೋಂ ಲೇ. ಡಿ.ಎನ್.ಗೋವಿಂದರಾಜು ರವರ 34.00 ಚ.ಮೀ ಅಳತೆಯ ನಿವೇಶನದಲ್ಲಿ 16.91 ಚ.ಮೀ. (182.ಚ.ಅಡಿ) ವಿಸ್ತೀರ್ಣದ ಜಾಗ ಮತ್ತು ಅದರಲ್ಲಿರುವ ಕಟ್ಟಡವನ್ನು ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ಮೂಲ ಭೂತ ಸೌಕರ್ಯ-2, ರವರು ದಿನಾಂಕ: 16-06-2011 ರಂದು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನ ಪ್ರಸ್ತಾಪಿತ ಸ್ವತ್ತಿನ ವಿವರವನ್ನು ಸಹಾಯಕ ಕಂದಾಯ ಅಧಿಕಾರಿಗಳು, ಗಾಳಿ ಆಂಜನೇಯ ದೇವಸ್ಥಾನ ವಲಯ ಹಾಗೂ ಕಾರ್ಯಪಾಲಕ ಅಭಿಯಂತರರು, ಮೂಲಭೂತ ಸೌಕರ್ಯ-2, ಬಿ.ಬಿ.ಎಂ.ಪಿ. ರವರು ನೀಡಿದ್ದು, ಅವರ ವರದಿಯನ್ವಯ ಸ್ವತ್ತಿನ ವಿವರ ಈ ಕೆಳಕಂಡಂತಿರುತ್ತವೆ;

| ಮೋಜಣಿದಾರರ ನಕ್ಷೆಯಂತೆ | | | | | | | | |
|---|---|---|---|---|---|---|---|---|
| ಕ್ರ ಸಂ. | ಸಿ.ಟಿ.ಎಸ್. ನಂ | ಸರ್ವೆ ನಂ | ನಿವೇಶನ ನಂ. | ಪಿ.ಐ.ಡಿ. ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ಭೂಸ್ವಾಧೀನಪಡಿಸಿ-ಕೊಳ್ಳುವ ವಿಸ್ತೀರ್ಣ | | ಆಸ್ತಿದಾರರು ನೀಡಿರುವ ದಾಖಲೆ ಹಾಗೂ ಆಸ್ತಿ ವಿವರ |
| 1 | 2 | 3 | 4 | 6 | 7 | 8 ಚ.ಮೀ. | 9 ಚ.ಅಡಿ | 10 |
| 1 | 943 | ದೀವಟಿಗೆ ರಾಮನಹಳ್ಳಿ ಸ.ನಂ.14 | 373 | 42-111-373/23 | ಶ್ರೀಮತಿ.ಡಿ.ಸುಭದ್ರಮ್ಮ ಕೋಂ ಲೇ.ಡಿ.ಎನ್.ಗೋವಿಂದರಾಜು | 16-.91 | 182 | ಜಿ.ಪಿ.ಎ ನಂ-642/ 15-12-1997, ನಿ.ನಂ.14/373 |

ಶ್ರೀಮತಿ.ಡಿ.ಸುಭದ್ರಮ್ಮ ರವರು ಸಲ್ಲಿಸಿರುವ ದಾಖಲಾತಿಗಳಂತೆ, ಮೇಲ್ಕಾಣಿಸಿದ ಸ್ವತ್ತು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೀವಟಿಗೆ ರಾಮನಹಳ್ಳಿ ಗ್ರಾಮದ ಸರ್ವೆ ನಂ-14ರಲ್ಲಿ ಕವಿಕಾ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ ಆಪರೇಟೀವ್ ಸೊಸೈಟಿಯವರು ರಚಿಸಿರುವ ನಿವೇಶನ ಸಂಖ್ಯೆ: 373 ಆಗಿದ್ದು, ಅಳತೆ 30x20 ಚ.ಅಡಿಗಳಾಗಿದ್ದು, ಇದನ್ನು 15-06-1995ರಲ್ಲಿ ಶ್ರೀ.ಎನ್.ಅಶೋಕ್ ರಾವ್ ಬಿನ್ ಲೇ.ಎನ್.ಎಸ್.ಎನ್.ರಾವ್ ರವರಿಗೆ ಮಂಜೂರಾಗಿರುತ್ತದೆ. ಇದನ್ನು ಅಶೋಕ್ ರಾವ್‌ರವರು ದಿನಾಂಕ:15-12-1997ರಲ್ಲಿ ಶ್ರೀ.ಡಿ.ಎನ್.ಗೋವಿಂದರಾವ್ ರವರಿಗೆ ಜಿ.ಪಿ.ಎ ಮೂಲಕ ವರ್ಗಾಯಿಸಿರುತ್ತಾರೆ. ಈ ಬಗ್ಗೆ ಅಫಿಡವಿಟ್ ಕೂಡ ಸಲ್ಲಿಸಿರುತ್ತಾರೆ. ಆದರೆ, ಕವಿಕಾ ಲೇಔಟ್ ಸೊಸೈಟಿಯಿಂದ ಶ್ರೀ.ಅಶೋಕ್‌ರವರಿಗೆ ಬಂದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಈ ಸ್ವತ್ತಿನ ಮಾಲೀಕತ್ವದ ಬಗ್ಗೆ 5(ಎ) ವಿಚಾರಣೆಯಲ್ಲಿ ಹಕ್ಕು ದಾಖಲೆಗಳನ್ನು ಪರಿಶೀಲಿಸಿ, ಭೂಪರಿಹಾರ ಪಾವತಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ಷರತ್ತಿಗೊಳಪಟ್ಟು, ಈ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಬಹುದೆಂದು ಅಭಿಪ್ರಾಯಪಡಲಾಗಿದೆ.

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಚಿಸಿರುವ ಸ್ವತ್ತು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿರುವ ವಸತಿ ಪ್ರದೇಶದಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ದಿನಾಂಕ: 19-04-2007 ರ ಅಧಿಸೂಚನೆಯಂತೆ ಪ್ರದೇಶದಲ್ಲಿನ ವಸತಿ ನಿವೇಶನಗಳ ದರವು ಪ್ರತಿ ಚ.ಅಡಿ 1 ಕ್ಕೆ ರೂ.800/-ಗಳಾಗಿರುತ್ತದೆ. ಈ ದರವನ್ನು ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣಕ್ಕೆ ಅಳವಡಿಸಿದಾಗ, ಪರಿಹಾರದ ಮೊಬಲಗು ಈ ಕೆಳಕಂಡಂತೆ ಆಗುತ್ತದೆ.

**"ಅ"-ಭೂ ಪರಿಹಾರ ವೆಚ್ಚ**

| ಕ್ರ ಸಂ | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ: 19-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ,<br>1. ಚ.ಅಡಿ ಒಂದಕ್ಕೆ ರೂ. 800/- ರಂತೆ 182 ಚ.ಅಡಿಗಳಿಗೆ | **1,45,600/-** |
| | 2. ಕಟ್ಟಡಗಳ ಮೌಲ್ಯ (ಇಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುವ ವ್ಯಾಲ್ಯುವೇಷನ್ ತಃಖ್ತೆಯಂತೆ) | **2,49,175/-** |
| | ಒಟ್ಟು | **3,94,775/-** |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2)ರ ಅನ್ವಯ ಶೇಕಡಾ 30 ರಂತೆ ಶಾಸನ ಬದ್ಧ ಭತ್ಯೆ | **1,18,433/-** |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ)ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **47,469/-** |
| | **ಒಟ್ಟು (1+2+3)** | **5,69,581/-** |

**"ಆ"- ಇತರೆ ವೆಚ್ಚ**

| | | |
|---|---|---|
| **4** | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | - |
| **5** | ಆಡಿಟ್ ವೆಚ್ಚ ಶೇಕಡಾ 1 ರಷ್ಟು | - |
| **6** | ಪ್ರಕಟಣಾ ವೆಚ್ಚ (ಅಂದಾಜು) | **1,00,000/-** |
| | **ಒಟ್ಟು (1+2+3+6)** | **6,60,581/-** |

ಷರಾ: ದಿನಾಂಕ: 5-9-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಅ+ಆ) ಒಟ್ಟು**

**(ರೂ.ಆರು ಲಕ್ಷದ ಅರವತ್ತು ಸಾವಿರದ ಐದು ನೂರ ಎಂಭತ್ತೊಂದು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. **6,60,581/- (ರೂ.ಆರು ಲಕ್ಷದ ಅರವತ್ತು ಸಾವಿರದ ಐದು ನೂರ ಎಂಭತ್ತೊಂದು ಮಾತ್ರ)** ಗಳನ್ನು ಪಾಲಿಕೆಯ 2011-12ನೇ ಸಾಲಿನ

ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 34 (209) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:07-12-2010 ರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿಯಲ್ಲಿ, ದಿನಾಂಕ:21-10-2010 ರಂದು ಘನ ಉಚ್ಚನ್ಯಾಯಲಯವು ಈಗಾಗಲೇ ಆರ್ಥಿಕ ಬಿಡ್‌ಗಳನ್ನು ತೆರವುಗೊಳಿಸಿರುವ 13 ಸಂಖ್ಯೆ ಪಾದಚಾರಿ ಮೇಲುಸೇತುವೆಗಳಿಗೆ ಈ ಹಿಂದೆ ನೀಡಿದ್ದ ತಡೆಯಾಜ್ಞೆಯನ್ನು ಹಿಂಪಡೆದಿರುತ್ತದೆ. ಅದರಂತೆ, ದಿನಾಂಕ:12-11-2010 ರಂದು ಒಟ್ಟು 13 ಸಂಖ್ಯೆಗಳ ಮೇಲು ಸೇತುವೆಗಳನ್ನು 20 ವರ್ಷಗಳ ಕಾಲಾವಧಿಗೆ ವಹಿಸಿಕೊಡಲು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಹಾಗೂ ಈ 13 ಸಂಖ್ಯೆ ಪಾದಚಾರಿ ಮೇಲು ಸೇತುವೆಗೆ ರೂ.3,15,59,717/- ಗಳ ವಾರ್ಷಿಕ ಲೈಸನ್ಸ್ ಶುಲ್ಕ ನಿರೀಕ್ಷಿಸಿ, ಕೆಲಸ ಪೂರ್ಣಗೊಂಡ ನಂತರ ಲಭ್ಯವಾಗುವ ಜಾಹೀರಾತು ವಿಸ್ತೀರ್ಣವನ್ನು ನಿಗಧಿಪಡಿಸಿ ಜಾಹೀರಾತು ತೆರಿಗೆ ವಿಧಿಸಲಾಗುವುದು ಎಂಬ ವಿಷಯವನ್ನು ಮಾಹಿತಿ ಹಾಗೂ ಮುಂದಿನ ಆದೇಶಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿತ್ತು.

ದಿನಾಂಕ:25-01-2011 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ: ನ.ಯೋ.ಅ.ಸ್ಥಾ.ಸ/40/10-11 ರಲ್ಲಿ ದಿನಾಂಕ:15-12-2010 ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಬೆಂಗಳೂರು ಸೌಂದರ್ಯವನ್ನು ಕಾಪಾಡುವ ಮತ್ತು ಸಾರ್ವಜನಿಕರಿಗೆ ಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಒಟ್ಟು 6 ಸ್ಥಳಗಳಲ್ಲಿ ಮಾತ್ರ (13 ಸಂಖ್ಯೆಗಳ ಬದಲು) ನಿಯಮಾನುಸಾರ ಪಾದಚಾರಿ ಮೆಲುಸೇತುವೆಗಳನ್ನು 20 ವರ್ಷಗಳ ಕಾಲಾವಧಿಗೆ ಜಾಹೀರಾತು ಹಕ್ಕುಗಳ ಎದುರು ನಿರ್ಮಿಸಲು ಕೆಲವೊಂದು ಷರತ್ತುಗಳೊಂದಿಗೆ ಅನುಮೋದನೆಯನ್ನು ದಿನಾಂಕ:25-01-2011 ರಲ್ಲಿ ನೀಡಲಾಗಿರುತ್ತದೆ.

ದಿನಾಂಕ:08-04-2011 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯ ಸಂಖ್ಯೆ: ತೆ.ಆ.ಸ್ಥಾ..ಸ/264/2010-11ರಲ್ಲಿ ದಿನಾಂಕ:15-12-2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಲಾಗಿರುತ್ತದೆ.

ಈ ಸಂಬಂಧ, ದಿನಾಂಕ: 28-06-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ "ಸದರಿ ಪ್ರಸ್ತಾವನೆಯನ್ನು ಹರಾಜು ಪ್ರಕ್ರಿಯೆ ಮೂಲಕ ಇತ್ಯರ್ಥಪಡಿಸುವುದೆಂದು" ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, DBOOT ಆಧಾರದ ಮೇಲೆ ಈಗಾಗಲೇ ಕೈಗೊಂಡ ಟೆಂಡರ್ ಪ್ರಕ್ರಿಯೆಯು ಸಹ ಒಂದು ರೀತಿ ಹರಾಜು ಪ್ರಕ್ರಿಯೆ ಆಗಿದ್ದು, ಸದರಿ ಪ್ರಕ್ರಿಯೆಯಲ್ಲಿ ಹೆಚ್ಚು ಮೊತ್ತ ನಮೂದಿಸಿರುವ ಸಂಸ್ಥೆಗಳನ್ನು ಪರಿಗಣಿಸಲಾಗಿದ್ದು, 6 ಸ್ಥಳಗಳಲ್ಲಿ ಈಗಾಗಲೇ Town Planning Committee ಹಾಗೂ Taxation and Finance Committee ಯು ನಿರ್ಣಯಿಸಿದಂತೆ ಪಾಲಿಕೆಯ ಸಭೆಯ ಮುಂದೆ ಮುನರ್

ಮಂಡಿಸಿ, ಸದರಿ ಪ್ರಸ್ಥಾವನೆಯು ಸಹ ಒಂದು ರೀತಿಯ ಹರಾಜು ಪ್ರಕ್ರಿಯೆ ಎಂದು ಪರಿಗಣಿಸಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಪುನರ್ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈಬಿಡಲಾಗಿದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 35 (152) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಹೊಸದಾಗಿ ಸ್ವಚ್ಚತಾ ನಿರ್ವಹಣೆಗೆ ಟೆಂಡರ್ ಕರೆದಿದ್ದು, ಈ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವೊಂದು ತಿದ್ದುಪಡಿ ಮಾಡಲು ಕೋರಿ ಶ್ರೀ. ಕೆ.ಹೆಚ್.ಎನ್. ಸಿಂಹ, ಮಾಜಿ ಮಹಾಪೌರರು ಮತ್ತು ಅಧ್ಯಕ್ಷರು, ಬಿಬಿಎಂಪಿ ಪೌರಕಾರ್ಮಿಕರು ಮತ್ತು 4ನೇ ದರ್ಜೆ ನೌಕರರ ಸಂಘ ರವರು ಪತ್ರದ ಮುಖಾಂತರ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಹಾಲಿ ಇರುವ ಷರತ್ತು | ಸಡಿಲಗೊಳಿಸಲು ಕೋರಿರುವ ಷರತ್ತು |
|---|---|---|
| 1 | 15000 ರಿಂದ 20000 ಮನೆ ಅಥವಾ ವಾಣಿಜ್ಯ ಮಳಿಗೆಗಳಿಂದ ಕಸ ಶೇಖರಣೆ ಮಾಡಬೇಕು ಮತ್ತು 100 ರಿಂದ 250 ಕಿ.ಮೀ ವರೆಗೆ ಪ್ರತಿನಿತ್ಯ ಕಸ ಗುಡಿಸಿರಬೇಕು, 2005-06 ಇಸವಿಯ ಈಚೆಗೆ 24 ತಿಂಗಳ ಕಾರ್ಯನಿರ್ವಹಿಸಿರಬೇಕು. | ಯಾವುದಾದರೂ ಅವಧಿಯಲ್ಲಿ 6 ತಿಂಗಳ ಕಾಲ ರಸ್ತೆ ಸ್ವಚ್ಚಗೊಳಿಸುವುದಾಗಲೀ ಅಥವಾ ಕಸ ಸಾಗಿಸುವುದಾಗಲೀ ಅಥವಾ ಮನೆ ಮನೆಯಿಂದ ಕಸ ಸಂಗ್ರಹಣೆ ಮಾಡಿರುವುದು ಅನುಭವ ಹೊಂದಿರಬೇಕು |
| 2 | ನೋಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘ ಸಂಸ್ಥೆಗಳು ಇ.ಎಂ.ಡಿ ಮೊತ್ತ ಶೇಕಡ 10% ಮತ್ತು ಬ್ಯಾಂಕ್ ಗ್ಯಾರಂಟಿ ಶೇಕಡ 10% ಪಾವತಿಸಬೇಕು. | ನೋಂದಾಯಿತ ಸಂಘ ಸಂಸ್ಥೆಗಳ ಬದಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವ್ಯಕ್ತಿಗಳಿಂದ ಶೇಕಡ 10% ಇ.ಎಂ.ಡಿ ಮತ್ತು ಶೇಕಡ 10% ಬ್ಯಾಂಕ್ ಗ್ಯಾರಂಟಿ ಪಾವತಿಸಲು ತಿದ್ದುಪಡಿ ಮಾಡುವುದು. |
| 3 | ಆಟೋ ಅಥವಾ ಲಾರಿ ಕ್ರಮವಾಗಿ 2010-11 ನೇ ಇಸವಿ ಮತ್ತು ಲಾರಿ 2005-06 ಇಸವಿಯ ಸಾಲಿನದಾಗಿರಬೇಕು. | ಆಟೋ ಅಥವಾ ಲಾರಿ ಯಾವುದೇ ವರ್ಷದ್ದು ಹೊಂದಿದ್ದು, ಟೆಂಡರ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಬಾಡಿಗೆಗೆ, ಲೀಸ್, ಅಗ್ರಿಮೆಂಟ್ ಆಧಾರದ ಮೇಲೆ 3 ವರ್ಷಕ್ಕೆ ಪಡೆದಿರಬೇಕೆಂದು ತಿದ್ದುಪಡಿ ಮಾಡುವುದು |

ಸದರಿ ವಿಷಯದ ಬಗ್ಗೆ ಚರ್ಚಿಸಿದಂತೆ ಈ ಕೆಳಕಂಡಂತೆ ನಿಬಂಧನೆಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮಾರ್ಪಾಡುಗೊಳಿಸಬೇಕಾಗಿರುತ್ತದೆ.

1. ಕಳೆದ 5 ವರ್ಷದ ಅವಧಿಯಲ್ಲಿ 6 ತಿಂಗಳ ಕಾಲ ರಸ್ತೆ ಸ್ವಚ್ಚಗೊಳಿಸುವುದಾಗಲೀ ಅಥವಾ ಕಸ ಸಾಗಿಸುವುದಾಗಲೀ ಅಥವಾ ಮನೆ ಮನೆಯಿಂದ ಕಸ ಸಂಗ್ರಹಣೆ ಮಾಡಿರುವುದು ಅನುಭವ ಹೊಂದಿರಬೇಕು.
2. ನೊಂದಾಯಿತ ಸಂಘ ಸಂಸ್ಥೆಗಳ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವ್ಯಕ್ತಿಗಳಿಂದ ಶೇಕಡ 10% ಇ.ಎಂ.ಡಿ ಮತ್ತು ಶೇಕಡ 10% ಬ್ಯಾಂಕ್ ಗ್ಯಾರಂಟಿ ಪಾವತಿಸಲು ತಿದ್ದುಪಡಿ ಮಾಡುವುದು.
3. ಟೆಂಡರ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಬಾಡಿಗೆಗೆ, ಲೀಸ್ ಮೂಲಕ 2001ನೇ ಇಸವಿಯ ಮೇಲ್ಪಟ್ಟ ಟಿಪ್ಪರ್ ಲಾರಿಗಳು ಮತ್ತು ಕಾಂಪ್ಯಾಕ್ಟರ್ ವಾಹನಗಳನ್ನು ಅಗ್ರಿಮೆಂಟ್ ಆಧಾರದ ಮೇಲೆ 3 ವರ್ಷಕ್ಕೆ ಪಡೆದಿರಬೇಕೆಂದು ತಿದ್ದುಪಡಿ ಮಾಡುವುದು.

ಮೇಲೆ ತಿಳಿಸಿರುವ ನಿಬಂಧನೆಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮಾರ್ಪಾಡುಗೊಳಿಸಲು ಸೂಕ್ತ ತೀರ್ಮಾನಕ್ಕಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 28-07-2011 ರ ಟಿಪ್ಪಣಿ ಹಾಗೂ ದಿನಾಂಕ:28-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ಹಾಲಿ ಟೆಂಡರ್ ಷರತ್ತುಗಳನ್ನು ಸಡಿಲಗೊಳಿಸಲು ನಮೂದಿಸಿರುವ ಷರತ್ತುಗಳನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:06-08-2011 ರ ನಿರ್ಣಯ ಹಾಗೂ ದಿನಾಂಕ:28-07-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈಬಿಡಲಾಗಿದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು
4.8.11

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (211)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಗುವ ದೈನಂದಿನ ಘನತ್ಯಾಜ್ಯವನ್ನು MSW 2000 Rules ನ ಅನುಸಾರ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಈ ಕುರಿತು ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು, ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು ಅಳವಡಿಸಿಕೊಳ್ಳಲಾಗಿದೆ. ಇಂತಹ ಯೋಜನೆಗಳ ಪೈಕಿ ಈಗಾಗಲೇ ಮಂಡೂರಿನ ಸರ್ವೆ ನಂ.155 ರಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಮೆ॥ ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿ. ಸಂಸ್ಥೆ ರವರು ತ್ಯಾಜ್ಯದಿಂದ 8 ಮೆಘಾ ವ್ಯಾಟ್ ವಿದ್ಯುತ್ ಅನ್ನು ಉತ್ಪಾದಿಸುವ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ.

ಹಾಲಿ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 3000 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಈ ಪ್ರಮಾಣವು ಮುಂಬರುವ ದಿನಗಳಲ್ಲಿ 5000 ಮೆಟ್ರಿಕ್ ಟನ್ ತಲುಪುವ ಸಾಧ್ಯತೆ ಇದ್ದು, ಸದರಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಾದ ಅವಶ್ಯಕತೆಯಿರುತ್ತದೆ.

ಈ ನಿಟ್ಟಿನಲ್ಲಿ ಮತ್ತೊಂದು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಅವಶ್ಯಕತೆಯಿರುತ್ತದೆ. ಆದಕಾರಣ, ಸರ್ವೆ ನಂ.96 ಬಗ್ಗನದೊಡ್ಡಿ ಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಸದರಿ ಘಟಕವು DBOT ಆಧಾರದ ಯೋಜನೆಯಾಗಿದ್ದು, ಸದರಿ ಘಟಕ ಸ್ಥಾಪಿಸಲು ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ, ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು ಲೀಸ್ ಆಧಾರದ ಮೇರೆಗೆ ನೀಡಬೇಕಾಗಿರುತ್ತದೆ.

ಸದರಿ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಅವಶ್ಯವಿರುವ ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ॥ಐಡೆಕ್ ಸಂಸ್ಥೆಯವರು ಒಪ್ಪಿದ್ದು, ಈ ಕಾರ್ಯಕ್ಕಾಗಿ ರೂ.4.95 ಲಕ್ಷ ಪಾವತಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

- ಸರ್ವೆ ನಂ.96 ಬಗ್ಗನದೊಡ್ಡಿ ಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ 1000 MTPD ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಟೆಂಡರ್ ಕರೆಯಲು ಅನುಮೋದನೆ.

. . . .2

- ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ॥ಐಡೆಕ್ ಸಂಸ್ಥೆರವರಿಗೆ ರೂ.4.95 ಲಕ್ಷ ಪಾವತಿಸಲು ಅನುಮೋದನೆ.
- ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು 20 ವರ್ಷ ಲೀಸ್ ಆಧಾರದ ಮೇರೆಗೆ ನೀಡಲು ಹಾಗೂ ಟೆಂಡರ್‌ನಲ್ಲಿ ಷರತ್ತನ್ನು ಅಳವಡಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:05-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:05-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:05-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 40 (212)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಗಜೀವನರಾಮ್‌ನಗರ ವಲಯದ ವ್ಯಾಪ್ತಿಯಲ್ಲಿನ ವಾರ್ಡ್ ನಂ.138 ರಲ್ಲಿ ಬರುವ ಚೆಲುವಾದಿಪಾಳ್ಯದ "ಜೈಭೀಮ್‌ನಗರ" ಕೊಳಚೆ ಪ್ರದೇಶವು ನಗರ ಪಾಲಿಕೆ ವ್ಯಾಪ್ತಿಗೆ ಸೇರಿದ್ದು, ಇಲ್ಲಿನ ಫಲಾನುಭವಿಗಳು ಸುಮಾರು 30 ರಿಂದ 40 ವರ್ಷಗಳಿಂದಲೂ ವಾಸವಾಗಿರುತ್ತಾರೆ. ಈ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಸಹ ಒದಗಿಸಲಾಗಿರುತ್ತದೆ. ಈ ಪ್ರದೇಶವನ್ನು ದಿನಾಂಕ:11-12-1974 ರಂದು ಕೊಳಚೆ ಪ್ರದೇಶವೆಂದು ಘೋಷಿಸಿದ್ದು, ಕರ್ನಾಟಕ ಗೆಜೆಟ್ ನೋಟೀಫಿಕೇಷನ್ ಆಗಿರುವುದು ಕಂಡು ಬಂದಿರುತ್ತದೆ. ಆದುದರಿಂದ, ಈ ಹಿಂದೆ 1994 ರಲ್ಲಿ ಅಂದಿನ ನಗರ ಪಾಲಿಕೆ ಅಧಿಕಾರಿಗಳು-ನಗರಸಭಾ ಸದಸ್ಯರು ಸೇರಿ ಹಿಂದೆ ಇದ್ದ 27ನೇ ವಿಭಾಗಕ್ಕೆ (ಚಿಕ್ಕಪೇಟೆ ವಲಯ) ಸಂಬಂಧಿಸಿದ ಫ್ಲವರ್ ಗಾರ್ಡನ್, ದೊರೈಸ್ವಾಮಿನಗರ, ಭಂಗಿ ಕಾಲೋನಿ ಮತ್ತು ಜೈಭೀಮ್‌ನಗರದಲ್ಲಿನ ಸುಮಾರು 25 ಮಂದಿ ಆರ್ಥಿಕವಾಗಿ ಹಿಂದುಳಿದವರು ಹಾಗೂ ಬಡ ಕುಟುಂಬಕ್ಕೆ ಸೇರಿದ ಫಲಾನುಭವಿಗಳಿಗೆ ದಿನಾಂಕ:24-09-1994 ರಲ್ಲಿ ನಗರ ಪಾಲಿಕೆ ವತಿಯಿಂದ ಸ್ವಾಧೀನ ಪತ್ರಗಳನ್ನು ಹಂಚಿಕೆ ಮಾಡಲಾಗಿದೆ (ಈ ಎಲ್ಲಾ ಪ್ರದೇಶವು ಹಾಲಿ ವಾರ್ಡ್ ನಂ.138, ಚೆಲುವಾದಿಪಾಳ್ಯ ವ್ಯಾಪ್ತಿಗೆ ಸೇರುತ್ತದೆ). ಈ ಪೈಕಿ ಫ್ಲವರ್ ಗಾರ್ಡನ್‌ನಲ್ಲಿನ ಫಲಾನುಭವಿಗಳಿಗೆ ಸ್ವಾಧೀನ ಪತ್ರಗಳನ್ನು ನೀಡಿ, ನಂತರ ಸರ್ಕಾರದ ಆದೇಶದ ಸಂಖ್ಯೆ: ನಅಇ 20 ಎಂಎನ್‌ಜಿ 99, ದಿನಾಂಕ:17-02-2004 ರಂತೆ ಗುತ್ತಿಗೆ-ಕಂ-ಮಾರಾಟದ ಕರಾರು ಪತ್ರವನ್ನು ಹಲವಾರು ಮಂದಿಗೆ ನೋಂದಾಯಿಸಿ ನೀಡಲಾಗಿರುತ್ತದೆ.

ಸುಮಾರು 30-40 ವರ್ಷಗಳಿಂದ ವಾಸವಾಗಿರುವ ಆರ್ಥಿಕವಾಗಿ ಹಿಂದುಳಿದವರು, ಬಡ ಕುಟುಂಬದರಾಗಿರುವ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶೀಷ್ಟ ವರ್ಗ ಜನಾಂಗಕ್ಕೆ ಸೇರಿವರಾಗಿರುವ ಜೈಭೀಮನಗರದ 27 ಫಲಾನುಭವಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನಅಇ 36 ಎಂಎನ್‌ಯು 09 ದಿನಾಂಕ:20-02-2009 ರಂತೆ ಚದರ ಮೀಟರ್ ಒಂದಕ್ಕೆ ರೂ.200/- ರಂತೆ ನಿಗಧಿಪಡಿಸಿ, ಗುತ್ತಿಗೆ ಮತ್ತು ಮಾರಾಟ ಕರಾರು ಒಪ್ಪಂದದ ಹಕ್ಕುಪತ್ರವನ್ನು ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-05-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-07-2011ರ ನಿರ್ಣಯ ಹಾಗೂ ದಿನಾಂಕ:05-07-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಇತ್ತೀಚಿನ ಆದೇಶದ ಪ್ರಕಾರ ದರವನ್ನು ನಿಗಧಿಪಡಿಸಿ ಹಕ್ಕು ಪತ್ರವನ್ನು ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:09–09–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 42 (214)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 63 (ಹಳೆ ವಾರ್ಡ್ ಸಂಖ್ಯೆ-78) ರ ವ್ಯಾಪ್ತಿಯಲ್ಲಿನ ಹಳೆ ಸಿಮೆಂಟ್ರಿ ರಸ್ತೆಯಲ್ಲಿರುವ ಪಾಲಿಕೆಯ 1 ಎಕರೆ 15 ಗುಂಟೆ ಜಾಗವನ್ನು ಅನಾಥಾಶ್ರಮಕ್ಕೆ ಗುತ್ತಿಗೆಗೆ ನೀಡಲಾಗಿರುತ್ತದೆ. ಅನಾಥಾಶ್ರಮದ ಸುತ್ತಮುತ್ತಲಿನ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ಸುಮಾರು 25 ವರ್ಷಗಳಿಂದ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ನೀಡುವ ಸಂಬಂಧ ಈ ಹಿಂದೆ ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರ ಆದೇಶದ ಮೇರೆಗೆ, ಸದರಿ ಜಾಗವನ್ನು ಕಂದಾಯ ಇಲಾಖೆ ಮತ್ತು ಕಾಮಗಾರಿ ಇಲಾಖೆಯವರು ಜಂಟಿಯಾಗಿ ಸ್ಥಳ ಪರಿಶೀಲಿಸಿ 64 ಫಲಾನುಭವಿಗಳ ಪಟ್ಟಿ ಮತ್ತು ನಕ್ಷೆ ಮಾಡಲಾಗಿರುತ್ತದೆ. ಪುನರ್ ಪರಿಶೀಲನಾ ಸಂದರ್ಭದಲ್ಲಿ ಪ್ರಸ್ತುತ ಸ್ಥಳದಲ್ಲಿ 67 ಫಲಾನುಭವಿಗಳಿದ್ದು, ಫಲಾನುಭವಿಗಳ ಪಟ್ಟಿಯ ಕ್ರಮ ಸಂಖ್ಯೆ 1 ರಿಂದ 57 ಮನೆಗಳಲ್ಲಿ ವಾಸವಿದ್ದು, ಕ್ರಮ ಸಂಖ್ಯೆ 58 ರಿಂದ 67 ರವರೆಗೆ ಖಾಲಿ ನಿವೇಶನಗಳಾಗಿರುತ್ತವೆ.

ಸದರಿ ಸ್ಥಳದಲ್ಲಿ ಮನೆ ನಿರ್ಮಿಸಿ ವಾಸವಾಗಿರುವ ಫಲಾನುಭವಿಗಳಿಂದ ಪಡಿತರ ಚೀಟಿ ಪ್ರತಿ, ಮತದಾರರ ಗುರುತಿನ ಚೀಟಿಗಳನ್ನು ಪಡೆಯಲಾಗಿದ್ದು, ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡಲು ಕೋರಿರುತ್ತಾರೆ.

ಈ ಪ್ರದೇಶವು ಕೊಳಚೆ ಪ್ರದೇಶವೆಂದು ಘೋಷಣೆಯಾಗದ ಕಾರಣ, ಪ್ರಸಕ್ತ ಮಾರುಕಟ್ಟೆ ದರಗಳನ್ವಯ ಹಕ್ಕು ಪತ್ರಗಳನ್ನು ವಿತರಿಸಲು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.22.75% ರ ಅನುದಾನದಲ್ಲಿ ಪಾಲಿಕೆ ವತಿಯಿಂದಲೇ ಭರಿಸಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-02-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2011 ರ ನಿರ್ಣಯ ಹಾಗೂ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 19(98)/2011-12 ರಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಪಾಲಿಕೆ ಸಭೆಯ ನಿರ್ಣಯ ಹಾಗೂ ದಿನಾಂಕ:28-07-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಪರಿಶೀಲಿಸಿದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:17-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:17-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:17-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 43 (26)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸ್ವತ್ತಿನ ಸಂಖ್ಯೆ.67/6, 7ನೇ ಡಿ ಮುಖ್ಯ ರಸ್ತೆ, ಬಿ.ಸಿ.ಸಿ. ಕಾಲೋನಿ, 4ನೇ 'ಟಿ' ಬ್ಲಾಕ್, ಜಯನಗರ ವಿಳಾಸದಲ್ಲಿ 60x40 ಅಡಿಗಳ ನಿವೇಶನವನ್ನು ದಿನಾಂಕ:13-09-1978 ರಿಂದ 30 ವರ್ಷಗಳ ಅವಧಿಗೆ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ನಿರ್ಮಾಣಕ್ಕಾಗಿ ಗುತ್ತಿಗೆ ನೀಡಿದ್ದು, ದಿನಾಂಕ:12-09-2008ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುತ್ತದೆ.

ಸದರಿ ಸಂಸ್ಥೆಯು ಈ ಸ್ಥಳದಲ್ಲಿ ಕೇಂದ್ರ / ರಾಜ್ಯ ಸರ್ಕಾರ ಹಾಗೂ ಸಂಸ್ಥೆಯ ಹಣದಿಂದ ಕಟ್ಟಡ ನಿರ್ಮಿಸಿ, 30 ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಇದರ ಜೊತೆಯಲ್ಲಿ ಹಲವು ಶೈಕ್ಷಣಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ಸಾರ್ವಜನಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿದ್ದು, 30 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.

ಸದರಿ ಸಂಸ್ಥೆಯವರು ಸ್ಥಳದಲ್ಲಿ ವಸತಿ ನಿಲಯ ನಿರ್ಮಿಸಿ, ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆ ಮಾಡಿರುವುದಿಲ್ಲ ಹಾಗೂ ಮಹಿಳೆಯರ ಶ್ರೇಯೋಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿರುವುದು ತಿಳಿದು ಬಂದಿರುತ್ತದೆ. ಈ ಹಿನ್ನಲೆಯಲ್ಲಿ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 30 ವರ್ಷಗಳ ಅವಧಿಗೆ ಮಾಹೆಯಾನ ರೂ.1000/- ನಿಗಧಿಪಡಿಸಿ, ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007 ರ ಸರ್ಕಾರದ ಮಾರ್ಗಸೂಚಿಯಂತೆ, ಚದರ ಅಡಿ ಒಂದಕ್ಕೆ ರೂ.2,500/- ಗಳಿದ್ದು, ಅರ್ಜಿದಾರರು ಕೋರಿರುವ 60x40 ಅಡಿಗಳ ಜಾಗವು ಒಟ್ಟು 2400 ಚ.ಅಡಿಗಳಾಗುತ್ತದೆ. ಇದರಂತೆ 2400x2500=60,00,000/- ಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಹಣ ರೂ.6,00,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಹಣ ರೂ.50,000/- ಗಳಾಗುತ್ತದೆ.

ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ನಿರ್ಧರಿಸಲಾಗಿದ್ದು, ಈ ಸಂಸ್ಥೆಗೆ ಮಾಸಿಕ ಗುತ್ತಿಗೆ ಹಣ ರೂ.1000/- ನಿಗಧಿಪಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ರವರಿಗೆ ನೀಡಿರುವ ಗುತ್ತಿಗೆ ಜಾಗದ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-12-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:23-12-2010 ರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ಅವಧಿಯನ್ನು (5) ಐದು ವರ್ಷಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ

ನಿರ್ಣಯ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು, ದಿನಾಂಕ:23-12-2010 ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ಅವಧಿಯನ್ನು ಐದು ವರ್ಷಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ಹಣ ರೂ.1000/- (ಒಂದು ಸಾವಿರ ಮಾತ್ರ) ಗಳನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಗುತ್ತಿಗೆ ಅವಧಿ ಮುಗಿದಿರುವುದರಿಂದ ಪ್ರಸ್ತಾವನೆಯನ್ನು ಕೈಬಿಟ್ಟು ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ಪಡೆಯುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಗುತ್ತಿಗೆ ಅವಧಿ ಮುಗಿದಿರುವುದರಿಂದ ಪ್ರಸ್ತಾವನೆಯನ್ನು ಕೈಬಿಟ್ಟು ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ಪಡೆಯುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 45 (143)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಎಸ್.ಪ್ರಕಾಶ್ ಬಿನ್ ಸಂಜೀವಿ ಇವರಿಗೆ ರಿಟ್ ಅರ್ಜಿ ಸಂಖ್ಯೆ:14170/2008 ರನ್ವಯ ಬದಲೀ ನಿವೇಶನ ನೀಡಲು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಖಾಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ದಿನಾಂಕ:28-06-2011 ರಂದು ನಡೆದ ವಿಷಯದ ಸಂಖ್ಯೆ: 36(58)/2011-12 ರಲ್ಲಿ ತೀರ್ಮಾನಿಸಿದಂತೆ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ, ಸಭೆಯು ಮುಂದೆ ಮರು ಮಂಡಿಸಲು ಕಾನೂನು ಕೋಶಕ್ಕೆ ಕಳುಹಿಸುವುದೆಂದು ತೀರ್ಮಾನಿಸಲಾಗಿರುತ್ತದೆ.

ಈ ಮೇರೆಗೆ, ಸಹಾಯಕ ಕಾನೂನು ಅಧಿಕಾರಿ (ಪೂರ್ವ) ರವರ ವರದಿಯಲ್ಲಿ ಉಚ್ಛನ್ಯಾಯಾಲಯಕ್ಕೆ ದಿನಾಂಕ:15-07-2009 ರಲ್ಲಿ ಮಾನ್ಯ ಆಯುಕ್ತರು ಬದಲೀ ನಿವೇಶನ ನೀಡುವುದಾಗಿ ಪ್ರಮಾಣಪತ್ರ ಸಲ್ಲಿಸಿರುವುದಾಗಿ ಸದರಿ ನಿವೇಶನದ ಅಳತೆ, ಗುತ್ತಿಗೆ ದರ/ಬಾಡಿಗೆ ವಿವರಗಳನ್ನು ಪ್ರಮಾಣಪತ್ರದಲ್ಲಿ ವಿವರಿಸಿರುವುದಿಲ್ಲವೆಂದು ಹಾಗೂ ನಿವೇಶನದ ಅಳತೆ ಹಾಗೂ ಬಾಡಿಗೆ/ಗುತ್ತಿಗೆ ದರಗಳ ವಿಷಯದಲ್ಲಿ ನ್ಯಾಯಾಲಯದ ಆದೇಶಗಳ ನಂತರದಲ್ಲಿ ನಿಗಧಿಪಡಿಸಿರುವುದು ಕಂಡು ಬರುವುದಾಗಿ ತಿಳಿಸುತ್ತಾ, ಪ್ರಸ್ತಾಪಿತ ವಿಷಯದಲ್ಲಿ ದಿನಾಂಕ:15-07-2009ರಲ್ಲಿ ಉಚ್ಛನ್ಯಾಯಾಲಯಕ್ಕೆ ಪ್ರಮಾಣಪತ್ರಗಳನ್ನು ಸಲ್ಲಿಸಿರುವಂತೆ ಆದ್ಯತೆ ಮೇರೆಗೆ ಅರ್ಜಿದಾರರಿಗೆ ಸೂಕ್ತ ನಿವೇಶನವನ್ನು ನೀಡಲು ಕ್ರಮ ತೆಗೆದುಕೊಳ್ಳುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಸ್ತಾವನೆ ಕುರಿತು ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 20-08-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-08-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:20-08-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 46 (215)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯವರು ಪಾಲಿಕೆ ವ್ಯಾಪ್ತಿಯ ನಾಗಪುರ ವಾರ್ಡ್ ಪ್ರದೇಶದಲ್ಲಿ ನಂದಿನಿ ಮಳಿಗೆ ತೆರೆಯಲು 10 ಸಿ.ಎ. ಜಾಗಗಳನ್ನು ಮಂಜೂರು ಮಾಡುವಂತೆ ಕೋರಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪ ವಿಭಾಗದವರು 5 ಸ್ಥಳಗಳನ್ನು ಗುರುತಿಸಿ, ನಕ್ಷೆ ತಯಾರಿಸಿ, ಅಳತೆಯನ್ನು ನಮೂದಿಸಿ ಈ ಸ್ಥಳದಲ್ಲಿ ಸದರಿ ಮಳಿಗೆಗಳನ್ನು ತೆರೆದರೆ ಸಾರ್ವಜನಿಕರಿಗೆ ಯಾವುದೇ ತರಹ ಅಡಚಣೆ ಉಂಟಾಗುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಮಾನ್ಯ ಉಪ ಮಹಪೌರರು ಇದೇ ವಾರ್ಡ್ ನಂ.67ರ ನಗರಸಭಾ ಸದಸ್ಯರಾಗಿದ್ದು, ಸಂಬಂಧಪಟ್ಟ ಕಾಮಗಾರಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಪ್ರದೇಶದಲ್ಲಿ ನಂದಿನಿ ಮಳಿಗೆ ತೆರೆಯುವುದು ಅವಶ್ಯಕತೆ ಇದೆ ಎಂದು ತಿಳಿಸಿ ಆದಷ್ಟು ಬೇಗ ಮುಂದಿನ ಕ್ರಮಕ್ಕೈಗೊಳ್ಳುವಂತೆ ಮೌಖಿಕ ಆದೇಶ ನೀಡಿರುವುದರಿಂದ, ಸದರಿ ಸ್ಥಳಗಳಲ್ಲಿ ನಂದಿನಿ ಮಳಿಗೆ ತೆರೆಯುವುದರಿಂದ ಯಾವುದೇ ಅಡಚಣೆ ಉಂಟಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಕಾಮಗಾರಿ ಇಲಾಖೆಯವರು ನೀಡಿರುತ್ತಾರೆ.

ಗುರುತಿಸಿರುವ 5 ಸ್ಥಳಗಳಲ್ಲಿ ಒಂದು ಸ್ಥಳವು ಸಾರ್ವಜನಿಕ ಉದ್ಯಾನವನದಲ್ಲಿರುವುದರಿಂದ ಈ ಸ್ಥಳ ಹೊರತುಪಡಿಸಿ ಉಳಿದ 4 ಸ್ಥಳಗಳಲ್ಲಿ ಲಭ್ಯವಿರುವ ವಿವಿಧ ಅಳತೆಗಳಲ್ಲಿ ನಂದಿನಿ ಮಳಿಗೆ ತೆರೆಯಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯವರಿಗೆ ಜಾಗವನ್ನು ನೀಡಲು ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ. ಈ ಎಲ್ಲಾ ಸ್ಥಳಗಳು ಪಾಲಿಕೆಯ ನಾಗಪುರ ವಾರ್ಡ್ ಸಂಖ್ಯೆ 67ರ ವ್ಯಾಪ್ತಿಯಲ್ಲಿ ಬರಲಿದ್ದು, ಸದರಿ ಸ್ಥಳದಲ್ಲಿ ಸರ್ಕಾರದ ಮಾರ್ಗಸೂಚಿ ದರದನ್ವಯ ರೂ.1,600/- ದರ ನಿಗಧಿಪಡಿಸಲು ಉಲ್ಲೇಖಿಸಿದ್ದು, ಸ್ಥಳಗಳ ಅಳತೆಗಳಿಗೆ ಅನುಗುಣವಾಗಿ ಮಾಸಿಕ ಗುತ್ತಿಗೆ ದರ ನಿಗಧಿಗೊಳಿಸಿರುವುದನ್ನು ಪಾಲಿಕೆಯ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.

**ಕ್ರಸಂ.1:** ಪಶ್ಚಿಮ ಕಾರ್ಡ್ ರಸ್ತೆ, 2ನೇ ಹಂತ, 6ನೇ ಮುಖ್ಯ ರಸ್ತೆಯಲ್ಲಿರುವ (ನಂದಿನಿ ಚಿತ್ರ ಮಂದಿರದ ಎದುರು) ಖಾಲಿ ಜಾಗದ ಅಳತೆ 8x10=80 ಚದರ ಅಡಿಗಳಾಗಿದ್ದು, ಸರ್ಕಾರದ ಮಾರ್ಗಸೂಚಿ ದರ ರೂ.1,600/- ಇದ್ದು, ವಸತಿಯೇತರಕ್ಕೆ ಶೇಕಡ 40 ರಷ್ಟು ಹೆಚ್ಚಿಸಿದಲ್ಲಿ 2240x80=ರೂ.1,79,000 ಗಳಾಗುತ್ತದೆ. ಇದರಲ್ಲಿ ಶೇಕಡ 10 ರಷ್ಟು ನಿಗಧಿಪಡಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.17,920/- ಗಳಾಗಲಿದ್ದು, ಮಾಸಿಕ ರೂ.1,493/- ಆಗುತ್ತದೆ.

**ಕ್ರಸಂ.2:** ಮಹಾಲಕ್ಷ್ಮೀ ಬಡಾವಣೆ, 12ನೇ ಅಡ್ಡರಸ್ತೆ, ಹಾಪ್‌ಕಾಮ್ಸ್ ಪಕ್ಕದಲ್ಲಿರುವ ಖಾಲಿ ಜಾಗ ಅಳತೆ 10x10=100 ಚದರ ಅಡಿಗಳಾಗಿದ್ದು, ಸರ್ಕಾರದ ಮಾರ್ಗಸೂಚಿ ದರ ರೂ.1,600/- ಇದ್ದು, ವಸತಿಯೇತರಕ್ಕೆ ಶೇಕಡ 40 ರಷ್ಟು ಹೆಚ್ಚಿಸಿದಲ್ಲಿ 2240x100= ರೂ.2,24,000/- ಆಗುತ್ತದೆ. ಇದರಲ್ಲಿ ಶೇಕಡ 10% ರಲ್ಲಿ ನಿಗಧಿಪಡಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.22,400/- ಗಳಾಗಲಿದ್ದು, ಮಾಸಿಕ ರೂ.1,867/- ಗಳಾಗುತ್ತದೆ.

..2

ಕ್ರ.ಸಂ.3: ಮಹಾಲಕ್ಷ್ಮೀ ಬಡಾವಣೆ ಕಮಲಮ್ಮನಗುಂಡಿ ಹತ್ತಿರವಿರುವ ಹಾಪ್‌ಕಾಮ್ಸ್ ಪಕ್ಕದಲ್ಲಿರುವ ಖಾಲಿ ಜಾಗದ ಅಳತೆ 10x10=100 ಚದರ ಅಡಿಗಳಾಗಿದ್ದು, ಸರ್ಕಾರದ ಮಾರ್ಗಸೂಚಿ ದರ ರೂ.1,600/- ಇದ್ದು, ವಸತಿಯೇತರಕ್ಕೆ ಶೇಕಡ 40 ಹೆಚ್ಚಿಸಿದಲ್ಲಿ 2240x100=2,24,000/- ಗಳಾಗುತ್ತದೆ. ಇದರಲ್ಲಿ ಶೇಕಡ 10 ರಷ್ಟು ನಿಗಧಿಪಡಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.22,400/- ಗಳಾಗಲಿದ್ದು, ಮಾಸಿಕ ರೂ. 1,867/- ಆಗುತ್ತದೆ.

ಕ್ರ.ಸಂ.4: 12ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಪಕ್ಕ 4ನೇ ಮುಖ್ಯರಸ್ತೆ ಪಶ್ಚಿಮ ಕಾರ್ಡ್ ರಸ್ತೆ, 2ನೇ ಹಂತದಲ್ಲಿರುವ ಖಾಲಿ ಜಾಗ ಅಳತೆ 9x10=90 ಚದರ ಅಡಿಗಳಾಗಿದ್ದು, ಸರ್ಕಾರದ ಮಾರ್ಗಸೂಚಿ ದರ ರೂ.1,600/- ಇದ್ದು ವಸತಿಯೇತರಕ್ಕೆ ಶೇಕಡ 40% ಹೆಚ್ಚಿಸಿದಲ್ಲಿ 2240x90=2,01,600/- ಗಳಾಗುತ್ತದೆ. ಇದರಲ್ಲಿ ಶೇಕಡ 10 ರಷ್ಟು ನಿಗಧಿಪಡಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.20,160/- ಗಳಾಗಲಿದ್ದು, ಮಾಸಿಕ ರೂ.1,680/- ಆಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129 ಟಿಎಂಡಿ 2002, ದಿನಾಂಕ:02-05-2003 ರ ಸುತ್ತೋಲೆಯಂತೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿರುತ್ತದೆ.

ಮೇಲ್ಕಂಡ 4 ಸ್ಥಳಗಳಲ್ಲಿ ನಂದಿನಿ ಮಳಿಗೆ ಸ್ಥಾಪಿಸುವ ಸಲುವಾಗಿ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಗೆ ಸರ್ಕಾರದ ಮಾರ್ಗಸೂಚಿ ದರದಲ್ಲಿ ಮೇಲೆ ತಿಳಿಸಿರುವಂತೆ, ಸ್ಥಳದ ಲಭ್ಯತೆಗೆ ಅನುಗುಣವಾಗಿ ನಿಗಧಿಪಡಿಸಿರುವ ದರದಲ್ಲಿ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಪ್ರಸ್ತಾವನೆಯನ್ನು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-08-2011 ರ ಟಿಪ್ಪಣಿ ಹಾಗೂ ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗಧಿಪಡಿಸುವ ಷರತ್ತಿನೊಂದಿಗೆ 4 ಸ್ಥಳಗಳಲ್ಲಿ ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ:27-08-2011 ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಒಪ್ಪುತ್ತಾ, 4 ಸ್ಥಳಗಳ ಬದಲಾಗಿ ನಾಗಪುರ ವಾರ್ಡ್ ಪ್ರದೇಶದಲ್ಲಿ 10 ಸ್ಥಳಗಳಲ್ಲಿ ನಂದಿನಿ ಮಳಿಗೆಗಳನ್ನು ತೆರೆಯಲು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುತ್ತಾ, 4 ಸ್ಥಳಗಳ ಬದಲಾಗಿ ನಾಗಪುರ ವಾರ್ಡ್ ಪ್ರದೇಶದಲ್ಲಿ 10 ಸ್ಥಳಗಳಲ್ಲಿ ನಂದಿನಿ ಮಳಿಗೆಗಳನ್ನು ತೆರೆಯಲು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 47 (216)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬಸವನಗುಡಿ ವಾರ್ಡ್ ಸಂಖ್ಯೆ:51/154, ಮಾಡೆಲ್ ಹೌಸ್ ರಸ್ತೆಯಲ್ಲಿರುವ ಶ್ರೀ. ರಾಘವೇಂದ್ರಸ್ವಾಮಿ ದೇವಸ್ಥಾನದ ಉತ್ತರ ಭಾಗದಲ್ಲಿರುವ ಕನ್ಸರ್‌ವೆನ್ಸಿ ಖಾಲಿ ಜಾಗದ ವಿಸ್ತೀರ್ಣ 133'.6'X16' ಅಡಿಗಳ ಜಾಗವನ್ನು ಪಾಲಿಕೆ ವತಿಯಿಂದ 1949ರಲ್ಲಿ ಶ್ರೀ ಗುರುರಾಜ ಅಸೋಸಿಯೇಷನ್‌ರವರಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ನಂತರ, ದಿನಾಂಕ:19-11-1982ರಲ್ಲಿ ಸದರಿ ಜಾಗವನ್ನು 99-ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ನಗರಪಾಲಿಕೆ ಸಭೆ ನಿರ್ಣಯಿಸಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದ ಸಂದರ್ಭದಲ್ಲಿ ಸರ್ಕಾರವು ತನ್ನ ದಿನಾಂಕ:24-10-1985ರ ಆದೇಶದಲ್ಲಿ ಸದರಿ ಜಾಗವನ್ನು ಸಂಸ್ಥೆಗೆ ಅಂದಿನ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.275/- ರಂತೆ ಕ್ರಯಕ್ಕೆ ನೀಡಲು ಆದೇಶಿಸಿದ್ದು, ಇದರಂತೆ, ಅರ್ಜಿದಾರರ ಸಂಸ್ಥೆಯು ಸ್ವತ್ತಿನ ಮೌಲ್ಯ ರೂ.29,429/- ಗಳನ್ನು ದಿನಾಂಕ:06-12-1985ರಲ್ಲಿ ಪಾವತಿಸಿರುತ್ತಾರೆ. ಇದರ ವಿರುದ್ಧವಾಗಿ ಶ್ರೀ. ರಾಮು ಮತ್ತು ಶ್ರೀಮತಿ. ಶಾಂತಬಾಯಿ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:11113-11114/1987 ಅನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:11-08-1998ರಲ್ಲಿ ಆದೇಶ ನೀಡಿ, ಗುತ್ತಿಗೆದಾರರು ಗುತ್ತಿಗೆ ನವೀಕರಿಸಲು ಕೋರಿದ್ದು, ಅವರು ಕ್ರಯಕ್ಕೆ ಮಾರಾಟ ಮಾಡಲು ಕೋರಿಕೆ ಸಲ್ಲಿಸದಿರುವ ಕಾರಣ, ಸರ್ಕಾರವು ಕ್ರಯಕ್ಕೆ ಮಾರಾಟ ಮಾಡಲು ನೀಡಿರುವ ಆದೇಶವನ್ನು ರದ್ದುಪಡಿಸಿರುತ್ತದೆ. ಈ ಆದೇಶದ ವಿರುದ್ಧ ಪಾಲಿಕೆ ಸಲ್ಲಿಸಿದ್ದ ರಿಟ್ ಮೇಲ್ಮನವಿ ಸಂಖ್ಯೆ:4403/98, 5115/98, 2444/99 ಮತ್ತು 2498/99 ರ ಮೇಲ್ಮನವಿಗಳು ದಿನಾಂಕ:19-01-2004 ರಂದು ತಿರಸ್ಕೃತಗೊಂಡಿರುತ್ತದೆ.

ಸದರಿ ಸಂಸ್ಥೆಯು ದಿನಾಂಕ:12-10-2006 ರಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿ, ತಾವು ಈಗಾಗಲೇ ಕ್ರಯದ ಮೊತ್ತ ಪಾವತಿಸಿದ್ದು, ಕ್ರಯಪತ್ರ ನೀಡಲು ಕೋರಿರುತ್ತಾರೆ. ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರಗಳ ಅನ್ವಯ ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ.3,220/-ಗಳಾಗಿದ್ದು, ಅದರಂತೆ ಸ್ವತ್ತಿಗೆ ಒಟ್ಟು ಮೌಲ್ಯ ರೂ.68,83,072/- ಗಳಾಗುತ್ತದೆ. ಸದರಿ ಜಾಗಕ್ಕೆ ಅರ್ಜಿದಾರ ಸಂಸ್ಥೆಯು ರೂ.29,429/- ಗಳನ್ನು ಈಗಾಗಲೇ ಪಾವತಿಸಿರುವುದರಿಂದ, ಪ್ರಸಕ್ತ ಸಾಲಿನ ಮಾರುಕಟ್ಟೆ ದರದಲ್ಲಿ ಶೇಕಡ 50ಕ್ಕೆ ಕ್ರಯಕ್ಕೆ ನೀಡುವ ಬಗ್ಗೆ ಮಾನ್ಯ ಆಡಳಿತಗಾರರು ದಿನಾಂಕ:02-07-2007 ರಲ್ಲಿ ಸರ್ಕಾರದ ಅನುಮೋದನೆ ಮೇರೆಗೆ ಪ್ರಸಕ್ತ ಮಾರುಕಟ್ಟೆ ದರದ ಶೇ.50% ರಷ್ಟು ದರಕ್ಕೆ ಕ್ರಯಕ್ಕೆ ನೀಡಲು ನಿರ್ಣಯಿಸಲಾಗಿದ್ದು, ಆದರೆ, ಈ ನಿರ್ಣಯವನ್ನು ಸರ್ಕಾರವು ದಿನಾಂಕ:27-05-2008ರ ಪತ್ರದಲ್ಲಿ ತಿರಸ್ಕರಿಸಿರುತ್ತದೆ. ನಂತರ, ಸರ್ಕಾರವು ಕನ್ಸರ್‌ವೆನ್ಸಿ ಜಾಗವನ್ನು ಅರ್ಜಿದಾರ ಸಂಸ್ಥೆಗೆ ಪ್ರಸಕ್ತ ಮಾರ್ಗಸೂಚಿ ಬೆಲೆ ನಿಗಧಿಪಡಿಸಿ ದಿನಾಂಕ:02-07-2009ರಲ್ಲಿ ಮಾರಾಟ ಮಾಡಲು ಮಂಜೂರಾತಿ ನೀಡಿರುತ್ತದೆ.

ಸರ್ಕಾರದ ಈ ಆದೇಶವನ್ನು ಶ್ರೀಮತಿ. ಹೆಚ್.ಎನ್.ಪದ್ಮಜಾ ರಾವ್ ಮತ್ತಿತರರು ಮಾನ್ಯ ಉಚ್ಚ ನ್ಯಾಯಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:25716/2009 ಮತ್ತು 25774/09 ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗಳು ದಿನಾಂಕ:13-09-2010 ರಲ್ಲಿ ತೀರ್ಮಾನವಾಗಿರುತ್ತದೆ. ಅರ್ಜಿದಾರರ ಸಂಸ್ಥೆಗೆ ಗುತ್ತಿಗೆ ನೀಡಿರುವ ಜಾಗವನ್ನು ಕ್ರಯಕ್ಕೆ ನೀಡಿರುವ ಬಗ್ಗೆ ನಡೆದಿರುವ ಆಡಳಿತಗಾರರ ನಿರ್ಣಯ ಹಾಗೂ ಸರ್ಕಾರದ ದಿನಾಂಕ:02-07-2009ರ ಆದೇಶಗಳನ್ನು ರದ್ದುಪಡಿಸಿ, ಮಾನ್ಯ ನ್ಯಾಯಾಲಯವು ತೀರ್ಪು ನೀಡಿರುತ್ತದೆ. ಆದರೆ, ಹಿಂದೆ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:11113-11114/87, ರಿಟ್ ಮೇಲ್ಮನವಿ 4403/98 ಹಾಗೂ ಇತರೇ ಪ್ರಕರಣಗಳು ಮತ್ತು ರಿಟ್ ಅರ್ಜಿ ಸಂಖ್ಯೆ:11042/09 ಗಳಲ್ಲಿ ನೀಡಿರುವ ಆದೇಶಗಳ ಹಿನ್ನಲೆಯಲ್ಲಿ, ಅರ್ಜಿದಾರ ಸಂಸ್ಥೆಯು ಹಾಗೂ ರಿಟ್ ಅರ್ಜಿದಾರರುಗಳು ಮನವಿಗಳನ್ನು ಪರಿಶೀಲಿಸುವಂತೆ, ನಿರ್ದೇಶನ ನೀಡಿ, ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ದಿನಾಂಕ:13-09-2010 ರಿಂದ ಮೂರು ತಿಂಗಳ ಕಾಲಾವಕಾಶ ನೀಡಿರುತ್ತದೆ. ಅಲ್ಲಿಯವರೆಗೆ

ಪ್ರಶ್ನಿತ ಜಾಗಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ (STATUS-QUO) ಕಾಪಾಡಲು ಮಾನ್ಯ ಉಚ್ಚ ನ್ಯಾಯಾಲಯವು ನಿರ್ದೇಶಿಸಿರುತ್ತದೆ.

ಮುಂದುವರೆದು, ದಿನಾಂಕ:13-09-2010ರ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಮೂರು ತಿಂಗಳ ಅವಧಿಯೊಳಗೆ ಮೇಲ್ಮನವಿದಾರರಾದ ಶ್ರೀಮತಿ.ಹೆಚ್.ಎನ್.ಪದ್ಮಜಾರಾವ್ ಮತ್ತು ಶ್ರೀಧರ್ ಬಲ್ಲಾಳ, ಎದುರುದಾರರಾದ ಶ್ರೀ. ಗುರುರಾಜ ಅಸೋಸಿಯೇಷನ್‌ರವರು ಈ ಜಾಗವನ್ನು ಪಡೆಯುವ ಅರ್ಹತೆ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡದೇ ಇರುವುದನ್ನು ನ್ಯಾಯಾಲಯವು ಗಮನಿಸಿ ಉಭಯತ್ರರರ ಬೇಡಿಕೆ ಬಗ್ಗೆ WP.NO.11113-11114/2009, WA.NO.4403/98, 5115/98, 2444/99, 4298 ಮತ್ತು WP.NO.11042/2009 ರಲ್ಲಿ ನೀಡಲಾಗಿರುವ ಆದೇಶಗಳ Letter ಮತ್ತು Spirit ಹಿನ್ನಲೆಯಲ್ಲಿ ಪರಾಮರ್ಶಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅದರ ಅನುಮತಿಯನ್ನು ಪಡೆಯುವುದೆಂದು ಆದೇಶಿಸಲಾಗಿರುತ್ತದೆ.

ಜಂಟಿ ಆಯುಕ್ತರು (ದಕ್ಷಿಣ) ವಲಯ ರವರು ಪ್ರಕರಣಕ್ಕೆ ಸಂಬಂಧಿಸಿದಂತೆ, ಉಭಯತ್ರರಿಗೆ ವಿಚಾರಣಾ ತಿಳುವಳಿಕೆ ಪತ್ರ ನೀಡಿ ವಿಚಾರಣೆ ನಡೆಸಿ, ಅವಶ್ಯ ದಾಖಲಾತಿಗಳೊಂದಿಗೆ ತಮ್ಮ ವಿವರವಾದ ವರದಿಯನ್ನು ಸಲ್ಲಿಸಿದ್ದು, ಇದರ ಸಂಕ್ಷಿಪ್ತ ವರದಿ ಈ ಕೆಳಕಂಡಂತೆ ಇದೆ.

ಅರ್ಜಿದಾರರ ಸಂಸ್ಥೆಯು ದಿನಾಂಕ:06-12-1985ರಲ್ಲಿ ಸರ್ಕಾರದ ಆದೇಶದನ್ವಯ ಮಾರುಕಟ್ಟೆ ಮಾರ್ಗಸೂಚಿ ದರದಂತೆ, ರೂ.24,429/- ಗಳ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿರುತ್ತಾರೆ. ಈಗಾಗಲೇ ಸದರಿ ಸಂಸ್ಥೆಯು ಸ್ವತ್ತಿನ ಸ್ವಾಧೀನಾನುಭವದಲ್ಲಿ, ಮಠದ ಭಕ್ತಾಧಿಗಳಿಗೆ ಸೂಕ್ತ ರೀತಿಯಲ್ಲಿ ಉಪಯೋಗಿಸುತ್ತದ್ದು, ಸದರಿ ಖಾಲಿ ಜಾಗವನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ತಕರಾರುದಾರರು ಮುಖ್ಯವಾಗಿ ಪ್ರಸ್ತುತ ಸ್ವತ್ತಿನಲ್ಲಿ ನೀರು ಮತ್ತು ಒಳಚರಂಡಿ ಪೈಪುಗಳು ಹಾದು ಹೋಗಿದ್ದು, ಅಕ್ಕಪಕ್ಕದ ನಿವಾಸಿಗಳ ಅನುಕೂಲಕ್ಕಾಗಿ ಪಾಲಿಕೆಯು ಈ ಆಸ್ತಿಯನ್ನು ರಕ್ಷಿಸಿ ಉಳಿಸಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ.

ವಿಚಾರಣೆಯಾಗಿ ಜಂಟಿ ಆಯುಕ್ತರು (ದಕ್ಷಿಣ) ರವರು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿದ್ದು, ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

1) ಪ್ರಸ್ತುತ ಸ್ವತ್ತಿನ ವಿಸ್ತೀರ್ಣ ಕೇವಲ 2137.6' ಚದರ ಅಡಿ ಇದ್ದು, ಇದರಲ್ಲಿ ಉದ್ಯಾನವನ/ಗಿಡ ನೆಡುವುದು ಸಾಧ್ಯವಾಗುವುದಿಲ್ಲ ಹಾಗೂ ಪ್ರಸ್ತುತ ಜಾಗವು ನಗರ ಪಾಲಿಕೆಗೆ ಉಪಯೋಗಕ್ಕೆ ಬರುವುದಿಲ್ಲ. ಅರ್ಜಿದಾರ ಸಂಸ್ಥೆಯು ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ಜಾಗದ ಸ್ವಾಧೀನಾನುಭವದಲ್ಲಿದ್ದು, ಇದನ್ನು ಸಮರ್ಪಕವಾಗಿ ಉಪಯೋಗಿಸುತ್ತಿದ್ದು, ಯಾವುದೇ ಮೂರನೇ ವ್ಯಕ್ತಿಗೆ ಪರಭಾರೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

2) ಒಂದು ವೇಳೆ ಈ ಸ್ಥಳವನ್ನು ಹಾಗೆ ಬಿಟ್ಟಲ್ಲಿ ದುರುಪಯೋಗ ಆಗುವ ಸಾಧ್ಯತೆಗಳೇ ಹೆಚ್ಚಾಗಿದ್ದು, ಈ ಜಾಗವನ್ನು ಗುತ್ತಿಗೆದಾರರ ಸಂಸ್ಥೆ ಕೋರಿರುವಂತೆ ಪ್ರಸಕ್ತ ಮಾರುಕಟ್ಟೆ ಬೆಲೆ ನಿಗಧಿಪಡಿಸಿ ಸರ್ಕಾರದ ಮಂಜೂರಾತಿಯನ್ವಯ ಮಾರಾಟ ಮಾಡುವುದು ಸಮಂಜಸವಾಗಿರುತ್ತದೆಯೆಂದು ಜಂಟಿ ಆಯುಕ್ತರು(ದಕ್ಷಿಣ)ರವರು ವರದಿ ನೀಡಿರುತ್ತಾರೆ.

ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಜಾಗವು ಈಗಾಗಲೇ ಶ್ರೀ. ರಾಘವೇಂದ್ರಸ್ವಾಮಿ ಮಠದವರ ವಶದಲ್ಲಿದ್ದು, ನೀರಿನ ನಲ್ಲಿಗಳು ಹಾಗೂ ಸೌದೆ ಇತ್ಯಾದಿ ಸಂಗ್ರಹ ಮಾಡಿರುತ್ತಾರೆ. ಎರಡೂ ದಿಕ್ಕಿನಲ್ಲಿ ಗೋಡೆಯಿಂದ ಜಾಗ

ಮುಚ್ಚಲಾಗಿದ್ದು, ಈ ಜಾಗದ ಪಕ್ಕದ ಜಾಗವನ್ನು ಸಹ ರಾಮಮಂದಿರ ದೇವಸ್ಥಾನದವರು ಕಟ್ಟಡ ನಿರ್ಮಿಸಿಕೊಂಡು ಬಳಸುತ್ತಿದ್ದಾರೆ. ಇದರಿಂದಾಗಿ, ಈ ಜಾಗ ಸಾರ್ವಜನಿಕ ಉದ್ದೇಶಕ್ಕೆ ಅನುಪಯುಕ್ತವಾಗಿರುತ್ತದೆ.

ಎದುರುದಾರರು ಈ ಜಾಗದಲ್ಲಿ ನೀರಿನ ಪೈಪು ಮತ್ತು ಒಳಚರಂಡಿ ಪೈಪುಗಳು ಕನ್ಸರ್‌ವೆನ್ಸಿ ಲೈನಿನಲ್ಲಿ ಹಾಯ್ದು ಹೋಗಿವೆ ಎಂಬುದಾಗಿ ತಿಳಿಸಿರುತ್ತಾರೆ. ಈ ಸಮಸ್ಯೆ ಕನ್ಸರ್‌ವೆನ್ಸಿಯಲ್ಲಿ ಜಾಗ ಪಡೆದಿರುವ ಪಕ್ಕದ ಇತರೆ ಕಟ್ಟಡಗಳ ಮಾಲೀಕರಿಂದ ಆಗುವುದು ಸಹಜ. ಈ ಪೈಪು ಲೈನ್‌ಗಳನ್ನು ದುರಸ್ಥಿಪಡಿಸುವುದಾಗಲೀ ಅಥವಾ ಬದಲಾಯಿಸುವ ಕಾರ್ಯಗಳಿಗೆ ಯಾವುದೇ ರೀತಿಯ ತೊಂದರೆಯನ್ನು ನೀಡದೇ, ಈ ಜಾಗದಲ್ಲಿ ಶಾಶ್ವತವಾಗಿ ಯಾವುದೇ ಪಕ್ಕಾ ಕಟ್ಟಡ ನಿರ್ಮಿಸದಿರುವ ಷರತ್ತನ್ನು ವಿಧಿಸಿ, ಈಗಾಗಲೇ ಸಂದಾಯ ಮಾಡಿರುವ ಹಣವನ್ನು ಅಂದಿನ ಮಾರುಕಟ್ಟೆ ದರದಂತೆ ಆಗಿದ್ದು, ಈಗಿನ ಮಾರುಕಟ್ಟೆ ಬೆಲೆ ಪ್ರಕಾರ ಹಣ ಕಟ್ಟಿಸಿಕೊಳ್ಳುವ ನಿಬಂಧನೆಗೊಳಪಟ್ಟು ಕ್ರಯಕ್ಕೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, 5 ವರ್ಷಗಳ ಅವಧಿಗೆ ಜಾಗವನ್ನು ಗುತ್ತಿಗೆ ನೀಡಿ ಕರಾರು ಪತ್ರ ನೊಂದಾಯಿಸಿಕೊಂಡ ನಂತರ ಮುಂದಿನ ಅವಧಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, 5 ವರ್ಷಗಳ ಅವಧಿಗೆ ಜಾಗವನ್ನು ಗುತ್ತಿಗೆ ನೀಡಿ ಕರಾರು ಪತ್ರ ನೊಂದಾಯಿಸಿಕೊಂಡ ನಂತರ ಮುಂದಿನ ಅವಧಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 48 (217)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.49/142, ಸುಂಕೇನಹಳ್ಳಿ ಬುಲ್ ಟೆಂಪಲ್ ರಸ್ತೆಯಲ್ಲಿರುವ ಉದಯಭಾನು ಕಲಾಸಂಘ ಆಟದ ಮೈದಾನವು ಪಾಲಿಕೆಯ ಸ್ವತ್ತಾಗಿದ್ದು, ಇಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೆಲ ಅಂತಸ್ತು ಮತ್ತು 1ನೇ ಅಂತಸ್ತಿನ ಎರಡು ಕ್ರೀಡಾ ಕೊಠಡಿಗಳನ್ನು ನಿರ್ಮಿಸಲಾಗಿದ್ದು, ಕಾಮಧೇನು ಯೂತ್ ಕ್ಲಬ್ (ರಿ) ರವರು ಕ್ರೀಡಾ ಹಾಗೂ ಸಾಂಸ್ಕೃತಿಕ, ಸಮಾಜ ಸೇವಾ ಚಟುವಟಿಕೆ ನಡೆಸಲು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಉಚಿತವಾಗಿ ನೀಡಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿಯಲ್ಲಿ ಸದರಿ ಕಟ್ಟಡದ ಅಳತೆ ಪೂರ್ವ-ಪಶ್ಚಿಮ 33 ಅಡಿಗಳು, ಉತ್ತರ-ದಕ್ಷಿಣ 25 ಅಡಿಗಳಿದ್ದು, ಇದರಲ್ಲಿ ನೆಲ ಅಂತಸ್ತು ಮತ್ತು ಒಂದನೇ ಅಂತಸ್ತಿನ ಕಟ್ಟಡವಿದ್ದು, ಈ ಕಟ್ಟಡವನ್ನು ಈಗಾಗಲೇ ಕಾಮಧೇನು ಯೂತ್ ಕ್ಲಬ್ ರವರು ಕ್ರೀಡಾ ಚಟುವಟಿಕೆಗಾಗಿ ಉಪಯೋಗಿಸುತ್ತಿದ್ದು, ಗುತ್ತಿಗೆಗೆ ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ದಿನಾಂಕ:01-03-2002ರ ಆಯುಕ್ತರ ಸುತ್ತೋಲೆ ಕಲಂ(1)ರಲ್ಲಿ 12 ತಿಂಗಳಿಗೆ ಮೀರದ ಅವಧಿಗೆ ಗುತ್ತಿಗೆ ನೀಡುವ ಅಧಿಕಾರವು ಆಯುಕ್ತರಿಗಿದ್ದು, ಸ್ಥಾಯಿ ಸಮಿತಿಗಳಿಗೆ 3-ವರ್ಷ, ಪಾಲಿಕೆ ಸಭೆಗೆ 5 ವರ್ಷ ಹಾಗೂ 5 ವರ್ಷಗಳಿಗೆ ಮೇಲ್ಪಟ್ಟ ಅವಧಿಗೆ ಗುತ್ತಿಗೆಗೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದೆ ಹಾಗೂ ಕಲಂ-7(4) ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10% ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ.

ಈ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡದ ಬೆಲೆಯ ಸರ್ಕಾರದ ಮಾರ್ಗಸೂಚಿಯಂತೆ ಚದರಡಿ 1ಕ್ಕೆ ರೂ.600/- ಗಳಿದ್ದು ಈ ಪ್ರಕಾರ ರೂ.4,95,000/- ಗಳಾಗಿದ್ದು, ಶೇಕಡ 1% ರಂತೆ ಸವಕಳಿ ಮೊತ್ತ ರೂ.19,500 ಗಳನ್ನು ಕಳೆದು ರೂ.4,75,497/- ಗಳಾಗುತ್ತದೆ. ಈ ರೀತಿ ನಿವೇಶನ ಹಾಗೂ ಕಟ್ಟಡದ ಬೆಲೆ ಒಟ್ಟು ರೂ.17,95,497/- ಗಳಾಗುತ್ತದೆ. ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10% ರಷ್ಟು ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ರೂ.1,38,0000/- ಗಳಾಗುತ್ತದೆ. ಶೇಕಡ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಗಳನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿನಾಂಕ:02-06-2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸಂಘದವರಿಗೆ ಪಾಲಿಕೆ ಕಟ್ಟಡವನ್ನು ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಸಂಸ್ಥೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ, ಉಳಿದ ಅವಧಿಗೆ

ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/- (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 49 (218)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ:168, ಸ್ವತ್ತಿನ ಸಂಖ್ಯೆ:1, 20ನೇ ಅಡ್ಡರಸ್ತೆ, ಮಾರೇನಹಳ್ಳಿ ಕೆರೆ ಅಂಗಳದ 16x25 ಅಡಿಗಳ ಸ್ವತ್ತಿನ ಖಾತೆದಾರರಾದ ಶ್ರೀಮತಿ ಕಾಮಾಕ್ಷಿ ರವರು ಈ ಸ್ವತ್ತಿನ ಅಂಚಿನ ಭಾಗದ ಅಳತೆ 14x25 ಅಡಿಗಳನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ವಲಯದ ಕಾಮಗಾರಿ ಇಲಾಖೆಯವರು ನಕ್ಷೆ ತಯಾರಿಸಿದ್ದು, ಕಂದಾಯ ಇಲಾಖೆಯವರು ವರದಿಯಲ್ಲಿ ಶ್ರೀಮತಿ ಕಾಮಾಕ್ಷಿಯವರ ಹಕ್ಕಿನಲ್ಲಿರುವ ಸ್ವತ್ತಿಗೆ ಹೊಂದಿಕೊಂಡಂತಿರುವ ಜಾಗ ಕ್ರಯಕ್ಕೆ ನೀಡಲು ಕೋರಿದ್ದು, ಕೋರಿರುವ ಜಾಗ ಹೊರತುಪಡಿಸಿ, ಈ ಸ್ವತ್ತಿನ ಪೂರ್ವ-ದಕ್ಷಿಣಕ್ಕೆ ಪಾಲಿಕೆ ವತಿಯಿಂದ ತಂತಿ-ಬೇಲಿ ನಿರ್ಮಿಸಲಾಗಿದ್ದು, ಸದರಿ ಅರ್ಜಿದಾರರು ಕೋರಿರುವ ಜಾಗದಲ್ಲಿ ಈಗಾಗಲೇ ಕಟ್ಟಡವನ್ನು ನಿರ್ಮಿಸಿ ವಾಸವಾಗಿರುತ್ತಾರೆ. ಆದುದರಿಂದ, ಸರ್ಕಾರ ಆದೇಶದಂತೆ ಮಾರುಕಟ್ಟೆ ದರಕ್ಕೆ ಶೇ:20%ರಷ್ಟು ಹೆಚ್ಚಿಸಿ ಕ್ರಯಕ್ಕೆ ನೀಡುವ ಬಗ್ಗೆ ಮುಂದಿನ ಆದೇಶ ಕೋರಿ ಕಡತ ಕಳುಹಿಸಿರುತ್ತಾರೆ.

ಮಾರೇನಹಳ್ಳಿ ಕೆರೆ ಅಂಗಳ ರಿಂಗ್ ರಸ್ತೆಗೆ ಲಗತ್ತಾಗಿರುವ ಉದ್ಯಾನವನಕ್ಕೆ ಸೇರಿದ ಜಾಗದಲ್ಲಿ ಈ ಒತ್ತುವರಿಯಿಂದ ನಿರ್ಮಾಣದ ಮನೆಯಾಗಿರುತ್ತದೆ. ಉದ್ಯಾನವನದ ಉಳಿದ ಸಂಪೂರ್ಣ ಜಾಗಕ್ಕೆ ತಂತಿ ಬೇಲಿ ಹಾಕಿ ಅಭಿವೃದ್ಧಿಪಡಿಸಲಾಗಿರುತ್ತದೆ. ಈ ಉದ್ಯಾನವನದ ಪ್ರದೇಶ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುವುದಾಗಿ ತಿಳಿಸಿ, ಸಮಾಜ ಕಲ್ಯಾಣ ಇಲಾಖೆಯ ಜಾಗ ಎಷ್ಟು ಎಂಬುದಾಗಿ ಸ್ಪಷ್ಟವಾಗಿ ವಿವರಿಸದೇ ಉದ್ಯಾನವನದಲ್ಲಿ ಒತ್ತುವರಿಯಾಗಿರುವ ಜಾಗಕ್ಕೆ ಸಹಾಯಕ ಕಂದಾಯ ಅಧಿಕಾರಿ(ಜಯನಗರ) ಮತ್ತು ಕಂದಾಯ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುವುದರಿಂದ, ಅಪರ ಆಯುಕ್ತರು (ದಕ್ಷಿಣ)ರವರು ಪರಿಶೀಲನೆಯಿಂದ ಸ್ಪಷ್ಟ ಅಭಿಪ್ರಾಯಯೊಂದಿಗೆ ವರದಿ ಸಲ್ಲಿಸಲು ಕೋರಲಾಗಿತ್ತು.

ಈ ಬಗ್ಗೆ ಸ್ಥಳೀಯ ವಲಯಾಧಿಕಾರಿಗಳು ಈ ನಗರಪಾಲಿಕೆ ಸ್ವತ್ತನ್ನು ಟ್ರೀಪ್ಲಾಂಟ್ ಮುಖಾಂತರ ಅಭಿವೃದ್ಧಿಪಡಿಸಲಾಗಿದ್ದು, ಸಮಾಜ ಕಲ್ಯಾಣ ಇಲಾಖೆಗೆ ಗುತ್ತಿಗೆ ನೀಡಲಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02-06-2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಕ್ರಯಕ್ಕೆ ನೀಡುವುದಾದಲ್ಲಿ ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.3000/-ಗಳಿದ್ದು, ಅರ್ಜಿದಾರರು ಕೋರಿರುವ 14x25 ಅಡಿಗಳ ಜಾಗವು 350 ಚ.ಅಡಿಗಳಾಗುತ್ತದೆ. ಇದರಂತೆ 350x3000 = 10,50,000 ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಮಾರುಕಟ್ಟೆ ದರ ಶೇಕಡ 20%ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ.12,60,000/-ಗಳಾಗುತ್ತದೆ. ಅರ್ಜಿದಾರರ ಕೋರಿಕೆಯನ್ನು ಪರಿಗಣಿಸುವಲ್ಲಿ ಅಪೀಲು ಸ್ಥಾಯಿ ಸಮಿತಿಯ ಸೂಕ್ತ

ನಿರ್ಣಯಕ್ಕಾಗಿ ಮಂಡಿಸಲಾದ ದಿನಾಂಕ:05-04-2011 ರ ಟಿಪ್ಪಣಿಯನ್ನು ಅಪೀಲು ಸ್ಥಾಯಿ ಸಮಿತಿಯು ಒಪ್ಪುವುದೆಂದು ನಿರ್ಣಯಿಸಿದೆ.

ಪ್ರಸ್ತುತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ-1985ರನ್ವಯ ಸರ್ಕಾರವು ಹೊರಡಿಸಿರುವ ಅಧಿಸೂಚನೆ ದಿ:28-04-2011 ರ ಪುಟ ಸಂಖ್ಯೆ-474 ಕ್ರ.ಸಂ-180 ರಲ್ಲಿ ಪ್ರಕಟಗೊಂಡಿರುತ್ತದೆ. ಈ ಕಾಯ್ದೆಯ ಕಲಂ(6)ರ ಅನುಸಾರ ಈ ಅಧಿಸೂಚನೆಯಲ್ಲಿ ಪ್ರಕಟಗೊಂಡಿರುವ ಪ್ರದೇಶವನ್ನು ನಿರ್ಧಿಷ್ಟ ಪ್ರದೇಶಕ್ಕೆ ಹೊರತುಪಡಿಸಿ, ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ. ಹಾಗೂ ಕಲಂ-8(2)ರ ಅನುಸಾರ ಈ ಪ್ರದೇಶವನ್ನು ಬೇರೆ ಉದ್ದೇಶಕ್ಕೆ ಪರಬಾರೆ, ಕ್ರಯ, ಗುತ್ತಿಗೆ ಅಥವಾ ಪರವಾನಗಿ ನೀಡುವುದು, ಅನೂರ್ಜಿತ ಮತ್ತು ಪರಿಣಾಮ ಶೂನ್ಯ (NULL AND VOID) ಎಂದು ಸ್ಪಷ್ಟಪಡಿಸಲಾಗಿರುತ್ತದೆ ಹಾಗೂ ಕಲಂ(11)ರ ಪ್ರಕಾರ ಕಲಂ(6) ಮತ್ತು (8)ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗೆ ಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸುವ ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಮೇಲ್ಕಂಡ ಸರ್ಕಾರಿ ನಿಯಮಗಳ ಹಿನ್ನೆಲೆಯಲ್ಲಿ ಶ್ರೀಮತಿ.ಕಾಮಾಕ್ಷಿರವರು ಕೋರಿರುವಂತೆ ಅವರು ವಾಸಿಸುತ್ತಿರುವ ಸ್ವತ್ತಿನ ಪಕ್ಕದ ಜಾಗ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-07-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:09-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಸದರಿ ಪ್ರದೇಶದ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯಂತೆ ಚದರಡಿ ಒಂದಕ್ಕೆ ರೂ.2000/- ಗಳಿದ್ದು, ನಿಯಮಾನುಸಾರ ಲೆಕ್ಕಾಚಾರ ಮಾಡಿ ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 50 (219)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಕರ್ನಾಟಕ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ರವರು ತಮ್ಮ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ವಾರ್ಡ್ ನಂ.141ರ ಅಜಾದ್‌ನಗರದಲ್ಲಿ ಇರುವ ನಗರ ಪಾಲಿಕೆಗೆ ಸೇರಿದ 30x43 ಅಡಿಗಳ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುರ್ತಿಸಿದ್ದು, ಈ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ತಿಳಿಸಿರುವ ಸಂಘವು ಗುರ್ತಿಸಿರುವ ಖಾಲಿ ಜಾಗವು ನಗರ ಪಾಲಿಕೆಗೆ ಸೇರಿದ್ದು, ಇದರಲ್ಲಿ ಯಾವುದೇ ಕಾಮಗಾರಿಯನ್ನು ಪ್ರಸ್ತಾಪಿಸಿರುವುದಿಲ್ಲವೆಂದು ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದು, ಸದರಿ ಸಂಘಕ್ಕೆ ಅವರು ಕೋರಿರುವಂತೆ 30x43 ಅಡಿ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದೆಂದು ಜಂಟಿ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಜಾಗದ ನಕ್ಷೆ ಸಮೇತ ವರದಿ ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ ಹಾಗೂ ಸ್ಥಾಯಿ ಸಮಿತಿಗಳ ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆಯ ಅವಶ್ಯವಿರುತ್ತದೆ.

ಸದರಿ ಸಂಘಕ್ಕೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಒಟ್ಟು ವಿಸ್ತೀರ್ಣ 30x43=1290 ಚದರ ಅಡಿಗಳಾಗಿದ್ದು, ಸರ್ಕಾರವು ಪ್ರಕಟಗೊಳಿಸಿರುವ 2007ರ ಮಾರ್ಗಸೂಚಿ ದರದಂತೆ ಈ ಪ್ರದೇಶದಲ್ಲಿ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ1000/-ಇರುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ ರೂ.12,90,000/- ಗಳಾಗಲಿದ್ದು, ಶೇ. 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ.1,29,000/- ಆಗುತ್ತದೆ ಹಾಗೂ ಮಾಸಿಕವಾಗಿ ರೂ.10,750/-/ ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003 ರ ಸುತ್ತೋಲೆ ಪ್ರಕಾರ ಇನ್ನುಳಿದ ಎಲ್ಲಾ ಪ್ರಕರಣಗಳಲ್ಲೂ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯ ಸ್ವತ್ತನ್ನು ಪ್ರಸ್ತಾಪಿತ ಸಂಸ್ಥೆಗೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ, ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ನೀಡುವ ಬಗ್ಗೆ ಸೂಕ್ತ

. . . .2

ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-07-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-07-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆ ಮೊತ್ತ ವಾರ್ಷಿಕ ರೂ.9,600/- (ಒಂಭತ್ತು ಸಾವಿರದ ಆರು ನೂರು ಮಾತ್ರ) ಗಳನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 51 (220)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಪ್ಯಾಲೇಸ್ ಗುಟ್ಟಹಳ್ಳಿ ವೃತ್ತದ ಬಳಿ ವಾರ್ಡ್ ನಂ.64ಕ್ಕೆ ಸೇರಿದ ನಗರ ಪಾಲಿಕೆಯ ಆಸ್ಪತ್ರೆಯ ಆವರಣದಲ್ಲಿ ಮೊದಲನೆ ಅಂತಸ್ತಿನಲ್ಲಿ 2475 ಚದರ ಅಡಿಗಳ ಕಟ್ಟಡವನ್ನು ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಬೆಂಗಳೂರು ವಲಯ ಇವರಿಗೆ ಗುತ್ತಿಗೆಯ ಮೊತ್ತದಲ್ಲಿ ಶೇಕಡ 50% ರಷ್ಟು ರಿಯಾಯಿತಿ ನೀಡಿ ಗುತ್ತಿಗೆ ಹಣ ಮಾಸಿಕ ರೂ.6,912/-ಗಳಿಗೆ ನಿಗಧಿಪಡಿಸಿ 5 ವರ್ಷಗಳ ಅವಧಿಗೆ 22-12-2001 ರಂದು ನೀಡಿದ್ದು, ಇದರ ಗುತ್ತಿಗೆ ಅವಧಿಯು 21-12-2005ಕ್ಕೆ ಮುಗಿದಿದ್ದು, ಇದರ ನಂತರ ಸದರಿ ಸಂಸ್ಥೆಯವರು ಮನವಿ ನೀಡಿ, ತಮ್ಮ ಸಂಸ್ಥೆಯು ತರಬೇತಿ ಕೇಂದ್ರ ಮತ್ತು ಇನ್ನಿತರ ಚಟುವಟಿಕೆಗಳನ್ನು ಮುಂದುವರೆಸಿದ್ದು, ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗುವುದರಿಂದ ಸದರಿ ಗುತ್ತಿಗೆಯ ಅವಧಿಯನ್ನು 35 ವರ್ಷಗಳವರೆಗೆ ಮುಂದುವರೆಸಲು ಕೋರಿರುತ್ತಾರೆ.

ಸದರಿ ಕಟ್ಟಡವು ಈಗಾಗಲೇ ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ರವರ ಉಪಯೋಗದಲ್ಲಿದ್ದು, ನೆಲ ಮಹಡಿಯೂ ಸಹ ಕುಟುಂಬ ಕಲ್ಯಾಣ ಚಟುವಟಿಕೆಗಳಿಗಾಗಿ ಉಪಯೋಗಿಸಲು ನೀಡುವುದು ಸೂಕ್ತವಾಗಿರುತ್ತದೆಂದು ಹಾಗೂ ಈಗಾಗಲೇ ಸಂಸ್ಥೆಯು ತಿಂಗಳಿಗೆ ರೂ.6,912/- ಗಳನ್ನು ತಹಲ್‌ವರೆವಿಗೆ ಪಾವತಿ ಮಾಡಿರುವುದೆಂದು ಸ್ಥಳೀಯ ಅಧಿಕಾರಿಗಳು ವರದಿ ನೀಡಿರುತ್ತಾರೆ.

ಸದರಿ ಕಟ್ಟಡಕ್ಕೆ ಈಗಿನ ದರದಲ್ಲಿ ತಿಂಗಳ ಬಾಡಿಗೆಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ. ಸ್ಥಿರಾಸ್ತಿಗಳಿಗೆ ಸರ್ಕಾರದ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರಗಳಂತೆ ಚದರ ಅಡಿಗೆ ರೂ.3,000/- ಗಳಿದ್ದು, ಶೇಕಡ 40% ವಸತಿಯೇತರ ಸೇರಿಸಲಾಗಿ ರೂ.3,400/- ಗಳಾಗುತ್ತದೆ. ಅದರಂತೆ, ಒಟ್ಟು ಚದರ ಅಡಿ 2475ಕ್ಕೆ ರೂ.84,15,000/- ಗಳಾಗಲಿದ್ದು, ಇದಕ್ಕೆ ಶೇಕಡ 10% ರಂತೆ ವಾರ್ಷಿಕ ಬಾಡಿಗೆಯ ರೂ.8,41,500/- ಹಾಗೂ ಮಾಸಿಕ ಬಾಡಿಗೆ ರೂ.70,125/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸದರಿ ಸಂಸ್ಥೆಯು ಮೇಲೆ ತಿಳಿಸಿದ ಕಟ್ಟಡವನ್ನು ಉಚಿತವಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಕೋರಿರುತ್ತಾರೆ. ಈ ಹಿಂದೆ ಮೊದಲನೇ ಅಂತಸ್ತಿನ ಮಾಸಿಕ ಗುತ್ತಿಗೆ ಮೊತ್ತ ರೂ.6,912/- ರಂತೆ ನಿಗಧಿಪಡಿಸಿರುವುದರಿಂದ ಇದೇ ರೀತಿ ನೆಲ ಅಂತಸ್ತಿನ ಕಟ್ಟಡಕ್ಕೂ ಸಹಾ ಮಾಸಿಕ ಗುತ್ತಿಗೆ ರೂ.6,912/- ನಿಗಧಿಪಡಿಸಬಹುದಾಗಿದೆ. ನೆಲ ಅಂತಸ್ತು ಹಾಗೂ ಮೊದಲನೆ ಅಂತಸ್ತು ಇವೆರಡರ ಮಾಸಿಕ ಬಾಡಿಗೆಯು ಒಟ್ಟು ರೂ.13,824/-ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸಂಸ್ಥೆಗೆ ಮಾಸಿಕ ರೂ.13,824/- ರಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು

ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (206) / 2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಿಜಯನಗರ ಉಪವಲಯದ, ಆರ್.ಪಿ.ಸಿ ಲೇಔಟ್ ವಾರ್ಡ್ ನಂ. 134 ರಲ್ಲಿ ಎಲ್.ಸಿ-4ರ ರೈಲ್ವೆ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ 7982 ಚ.ಅಡಿ (741.33 ಚ.ಮೀ) ಪ್ರದೇಶವನ್ನು ದಿನಾಂಕ:13-10-2010 ರಂದು ಶ್ರೀ.ರವೀಂದ್ರ, ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ, ದಿನಾಂಕ:20-04-2011 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೇಂದ್ರ ರೈಲ್ವೆ ರಾಜ್ಯ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯ ನಡವಳಿ ಹಾಗೂ ದಿನಾಂಕ:03-05-2011 ರಂದು ಮಾನ್ಯ ಕಂದಾಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನೆ ಸಭೆಯ ಆದೇಶದನ್ವಯ ಭೂಸ್ವಾಧೀನ ಮಾಡಿಕೊಳ್ಳಲು ಕಾರ್ಯಪಾಲಕ ಅಭಿಯಂತರರು ROB-RUB ವಿಭಾಗ ಹಾಗೂ ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರುಗಳು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದ ವಿವರವನ್ನು ಸಹಾಯಕ ಕಂದಾಯ ಅಧಿಕಾರಿಗಳು, ವಿಜಯನಗರ ಉಪವಲಯ (ಆರ್.ಪಿ.ಸಿ.ಲೇಔಟ್) ಇವರ ಹಾಗೂ ಕಾರ್ಯಪಾಲಕ ಅಭಿಯಂತರರವರ ವರದಿಯನ್ವಯ ಈ ಕೆಳಗೆ ನಮೂದಿಸಿರುವಂತೆ ಇರುತ್ತದೆ.

| ಮೋಜಣಿದಾರರ ನಕ್ಷೆಯಂತೆ | | | | | | | | |
|---|---|---|---|---|---|---|---|---|
| ಕ್ರ ಸಂ. | ಸಿ.ಟಿ.ಎಸ್. ನಂ. | ಬ್ಲಾಕ್ ನಂ. | ಆಸ್ತಿ ಸಂಖ್ಯೆ | ಪಿ.ಐ.ಡಿ ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ಭೂಸ್ವಾಧೀನಪಡಿಸಿ-ಕೊಳ್ಳುವ ವಿಸ್ತೀರ್ಣ | | ಆಸ್ತಿದಾರರು ನೀಡಿರುವ ದಾಖಲೆ ಹಾಗೂ ಆಸ್ತಿ ವಿವರ |
| 1 | 2 | 3 | 4 | 5 | 6 | 7<br>ಚ.ಮೀ | 8<br>ಚ.ಅಡಿ | 9 |
| 1 | 1 | - | - | 42-81-1/1 | ಪಿ.ಮುನಿಪೂಜಪ್ಪ | 08.00 | 86.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ-1/1 |
| 2 | 2 | - | - | 42-94-1 | ಶ್ರೀಮತಿ.ಪಾರ್ವತಮ್ಮ ಕೋಂ ಸಂಜೀವಮೂರ್ತಿ | 132.30 | 1424.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ-1 |
| 3 | 3 | - | 1 | 42-92-1ಎ | ಚಾಂದ್ ಸುಲೆಮಾನ್ ಷರೀಫ್ | 19.00 | 205.00 | ದಾಖಲೆ ಒದಗಿಸಿಲ್ಲ |
| 4 | 3 | - | 3 | - | ಗಫೂರ್ ಬೇಗ್ ಬಿನ್ ಖಾಸಿಂ ಬೇಗ್ | 62.68 | 675.00 | 1. ಜಿ.ಪಿ.ಎ ದಿ:06-02-87-ಕೆಂಪಾಪುರ ಅಗ್ರಹಾರ ಸರ್ವೆ ನಂ-174/1<br>2. ಕ್ರಯಪತ್ರ ನಂ-1591/3-7-03 ಕೆಂಪಾಪುರ ಅಗ್ರಹಾರ ಸರ್ವೆ ನಂ-174/1 ಹಾಗೂ ಮುನಿಸಿಪಲ್ ನಿವೇಶನ ನಂ-17/ಎ<br>3. ತೆರಿಗೆ ಪಾವತಿ ರಸೀದಿ ನಂ-7622, ದಿ:11-07-11, ಸ.ನಂ-17/ಎ<br>4. ತೆರಿಗೆ ರಸೀದಿ ನಂ-7623, ದಿ:11-07-11, ಸ.ನಂ-173/17 |

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 52 (221)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ.30, ಶ್ರೀ. ಕೃಷ್ಣರಾಜೇಂದ್ರ ಮಾರುಕಟ್ಟೆ ಮುಂಭಾಗದಲ್ಲಿರುವ ಸಬ್‌ವೇ ಮುಖ್ಯದ್ವಾರದ ಬಳಿ ಇರುವ 18.9x9 ಅಡಿಗಳ ಜಾಗವನ್ನು ಮೆ|| ಪಿಕಾಕ್ ಎಂಟರ್‌ಪ್ರೈಸಸ್ ಪ್ರೊಪರೈಟರ್ ಆದ ಗೌಸ್ ಮೊಹಿಯುದ್ದೀನ್ ಬಿನ್ ಜಾಫರ್ ಎಂಬುವವರಿಗೆ ನಗರ ಪಾಲಿಕೆ ವತಿಯಿಂದ ಮಾಸಿಕ ರೂ.169-00 ಗಳ ಗುತ್ತಿಗೆ ಹಣದ ಆಧಾರದ ಮೇಲೆ ದಿನಾಂಕ:23-05-1977 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:22-05-2007ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಮಧ್ಯೆ ಅರ್ಜಿದಾರರು ಮಾಜಿ ಶಿಕ್ಷಣ ಸಚಿವರಾದ ಶ್ರೀ. ರಾಮಲಿಂಗರೆಡ್ಡಿಯವರಿಗೆ ಅರ್ಜಿಯನ್ನು ಸಲ್ಲಿಸಿ, ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬದಲು ಇಂದಿನ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡಬೇಕೆಂದು ಕೋರಿರುತ್ತಾರೆ. ಆದರೆ, ಅಂದಿನ ಆಯುಕ್ತರು ಮಾರುಕಟ್ಟೆ ಸಂಕೀರ್ಣದಲ್ಲಿ ಯಾವ ಭಾಗವನ್ನು ಮಾರಾಟ ಮಾಡುವ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಬಾರದೆಂದು ಆದೇಶ ನೀಡಿರುವ ಹಿನ್ನಲೆಯಲ್ಲಿ ಗುತ್ತಿಗೆದಾರರಿಗೆ ಅಂತಿಮ ಹಿಂಬರಹವನ್ನು ಜಾರಿ ಮಾಡಲಾಗಿರುತ್ತದೆ.

ತದನಂತರ ಅರ್ಜಿಯನ್ನು ಪುನರ್ ಪರಿಶೀಲಿಸಲಾಗಿ, ಸದರಿ ಗುತ್ತಿಗೆ ಅವಧಿಯನ್ನು ವಿಸ್ತರಿಸುವುದು ಸೂಕ್ತವಾಗಿರುವುದರಿಂದ ಪ್ರಕರಣವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ:15-05-2006 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:7/06-07 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಪಾದಚಾರಿ ರಸ್ತೆಗೆ ಯಾವುದೇ ಅಡಚಣೆಯಾಗದಂತೆ ಮುಂದಿನ 3 ವರ್ಷಗಳಿಗೆ ಮಾಹೆಯಾನ ರೂ.11,900/- ಗಳ ಗುತ್ತಿಗೆ ದರದಂತೆ ನವೀಕರಿಸಲು ತೀರ್ಮಾನಿಸಲಾಗಿರುತ್ತದೆ.

ಗುತ್ತಿಗೆ ಅವಧಿ ಮುಗಿದಿರುವ ಹಿನ್ನಲೆಯಲ್ಲಿ, ಶ್ರೀ. ಗೌಸ್ ಮೊಹಿಯುದ್ದೀನ್ ರವರು ದಿನಾಂಕ:04-04-2007 ರಂದು ಗುತ್ತಿಗೆ ನವೀಕರಣ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಸ್ವತ್ತು ಪಾದಚಾರಿಗಳ ಸುರಂಗಮಾರ್ಗದ ಪ್ರವೇಶದ್ವಾರದ ಹಿಂಭಾಗಕ್ಕೆ ಇರುವುದರಿಂದ ಪಾದಚಾರಿಗಳ ಸಂಚಾರಕ್ಕೆ ಯಾವುದೇ ತೊಂದರೆಯಾಗುವುದಿಲ್ಲವೆಂಬ ಬಗ್ಗೆ ಸಬ್ ಇನ್ಸ್‌ಪೆಕ್ಟರ್ಸ್ ಆಫ್ ಪೊಲೀಸ್ (ಟ್ರಾಫಿಕ್) ರವರಿಂದ ವರದಿ ಪಡೆಯಲಾಗಿರುತ್ತದೆ.

ಸದರಿ ಅಜಿದಾರರು ಗುತ್ತಿಗೆ ಮೊತ್ತವು ಅಧಿಕವಾಗಿದ್ದು, ಇದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:18824/10 ಅನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:13-08-2010 ರಲ್ಲಿ ರಿಟ್ ಅರ್ಜಿಯನ್ನು ವಿಲೇ ಮಾಡಿ ಅರ್ಜಿದಾರನಿಗೆ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿ ಮಾಡಿ, ನಂತರ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸುವಂತೆ ಹಾಗೂ ನಗರ ಪಾಲಿಕೆಯು ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿರುತ್ತದೆ.

ಅರ್ಜಿದಾರರು ಇದರಂತೆ ಬಾಕಿ ಇರುವ ಬಾಡಿಗೆ ಹಣವನ್ನು ಪಾವತಿಸಿದ್ದು, ಈಗ ಮಾಸಿಕ ಬಾಡಿಗೆ ಹಣವನ್ನು ಕಡಿಮೆಗೊಳಿಸಿ ದಿನಾಂಕ:23-05-2010 ರಿಂದ 5 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು

. . . .2

ವಿಸ್ತರಿಸಬೇಕೆಂದು ಕೋರಿರುತ್ತಾರೆ. ವಲಯ ಅಧಿಕಾರಿಗಳು ಹಾಲಿ ಇರುವ ಮಾಸಿಕ ಬಾಡಿಗೆ ರೂ.11,900/- ಗಳನ್ನು ರೂ.12,100/- ಗಳಿಗೆ ಹೆಚ್ಚಿಸಿ 3 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ತಮ್ಮ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರ ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ ಹಾಗೂ ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯುವುದು ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿ.ಎಂ.ಡಿ 2002, ದಿನಾಂಕ:02-06-2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಅಕಂ/ಪಿಆರ್/115/01-02, ದಿನಾಂಕ:01-03-2002 ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.

ಸದರಿ ಸ್ಥಳದ ಪ್ರಸಕ್ತ ಸಾಲಿನ ಮಾರುಕಟ್ಟೆ ದರವು ಸರ್ಕಾರದ ದಿನಾಂಕ:17-04-2007ರ ಮಾರ್ಗಸೂಚಿಯಂತೆ ಚದರ ಅಡಿ ಒಂದಕ್ಕೆ ವಾಣಿಜ್ಯಕ್ಕೆ ರೂ.8400/- ಗಳಿದ್ದು, ಅರ್ಜಿದಾರರಿಗೆ ನೀಡಿರುವ ಸ್ವತ್ತಿನ ಅಳತೆ 170.1 ಚದರ ಅಡಿಗಳಾಗಿರುತ್ತದೆ. ಇದರಂತೆ 170.1x8400=ರೂ.14,28,840-00 ಗಳಾಗುತ್ತದೆ. ಶೇ.10 ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ಮೊತ್ತವು ರೂ.1,42,884/- ಗಳಾಗುತ್ತದೆ ಹಾಗೂ ಮಾಸಿಕ ಗುತ್ತಿಗೆ ಹಣವು ರೂ.11,907/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೆ॥ ಪಿಕಾಕ್ ಎಂಟರ್‌ಪ್ರೈಸಸ್ ರವರಿಗೆ ಮಾಸಿಕ ಗುತ್ತಿಗೆ ಮೊತ್ತ ರೂ.12,000/- ಗಳಂತೆ ಗುತ್ತಿಗೆ ಹಣವನ್ನು ನಿಗಧಿಪಡಿಸಿ ಕರಾರು ನೊಂದಾಯಿಸಿರುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09-03-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಯ ಮುಂದೆ ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ಸಭೆಯ ನಿರ್ಣಯ ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ:09-03-2011 ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

. . . .3

"ಪ್ರಸ್ತಾಪಿತ ಸ್ಥಳವನ್ನು ಪಾಲಿಕೆಯ ಆಸ್ತಿ ಸಂರಕ್ಷಣೆಯ ಹಿತದೃಷ್ಟಿಯಿಂದ ಪಾಲಿಕೆ ವಶಕ್ಕೆ ತೆಗೆದುಕೊಳ್ಳುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾಪಿತ ಸ್ಥಳವನ್ನು ಪಾಲಿಕೆಯ ಆಸ್ತಿ ಸಂರಕ್ಷಣೆಯ ಹಿತದೃಷ್ಟಿಯಿಂದ ಪಾಲಿಕೆ ವಶಕ್ಕೆ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 53 (222)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:06-04-1967 ರಲ್ಲಿ ವ್ಯಾಯಾಮ ಶಾಲೆಗಾಗಿ ಫಿಜಿಕಲ್ ಕಲ್ಚರ್ ಇನ್ಸ್‌ಟಿಟ್ಯೂಟ್ ಸಂಸ್ಥೆಗೆ ಶಿವಾಜಿನಗರದ ಸ್ಲಾಟರ್ ಹೌಸ್ ರಸ್ತೆಯಲ್ಲಿನ ಇರುವ 622.2/3 ಚದರ ಗಜಗಳ ಜಾಗವನ್ನು ಮಾಹೆಯಾನ ರೂ.2/- ರಂತೆ 3 ವರ್ಷದ ಅವಧಿಗೆ (06-04-1967 ರಲ್ಲಿ) ಗುತ್ತಿಗೆ ನೀಡಲಾಗಿರುತ್ತದೆ.

ದಿನಾಂಕ:21-09-2010 ರಂದು ಸದರಿ ಸಂಸ್ಥೆಯವರು ಅರ್ಜಿ ಸಲ್ಲಿಸಿ, ವ್ಯಾಯಾಮ ಮಾಡುತ್ತಿದ್ದ ಪ್ರದೇಶದ ಪಕ್ಕದಲ್ಲಿ ಖಾಲಿ ಜಾಗವಿದ್ದು, ಆ ಖಾಲಿ ಜಾಗದಲ್ಲಿ ಕಸ ಶೇಖರಣೆಯಾಗುತ್ತಿದ್ದು, ಈ ಜಾಗವನ್ನು ಸ್ವಚ್ಛಗೊಳಿಸಿ ವ್ಯಾಯಾಮದ ನಂತರ ಪ್ರಾರ್ಥನೆ ಸಲ್ಲಿಸಲು ಉಪಯೋಗಿಸಲಾಗುತ್ತಿತ್ತು. ಮಳೆಗಾಲದಲ್ಲಿ ಪ್ರಾರ್ಥನೆ ಸಲ್ಲಿಸಲಾಗದೆ ಇರುವುದರಿಂದ ಛಾವಣಿಯನ್ನು ಹಾಕಿ ಪ್ರಾರ್ಥನೆ ಸಲ್ಲಿಸುತ್ತಿದ್ದು, ಈ ಪ್ರದೇಶವನ್ನು ಸಹ ಗುತ್ತಿಗೆ ಪ್ರದೇಶ ಒಳಪಟ್ಟಿದ್ದು, ಗುತ್ತಿಗೆ ನವೀಕರಿಸಲು ಕೋರಿರುತ್ತಾರೆ.

ಕಡತದಲ್ಲಿ ಲಗತ್ತಿಸಿರುವ ಗುತ್ತಿಗೆ ಕರಾರು ಪತ್ರದಲ್ಲಿ ನಮೂದಿಸಲಾಗಿರುವ ಸ್ವತ್ತಿನ ಚೆಕ್ಕು ಬಂದಿಯ ಪ್ರಕಾರ 5728 ಚದರ ಅಡಿ ಅಥವಾ 622.2/3 ಚದರ ಗಜ ಎಂಬುದಾಗಿದೆ. ವಾಸ್ತವವಾಗಿ ಕಛೇರಿಯ ಭೂಮಾಪಕರು ಜಾಗದ ಅಳತೆ ಮಾಡಲಾಗಿ, ಸದರಿ ಸ್ವತ್ತಿನ ವಿಸ್ತೀರ್ಣವು 4845 ಚದರ ಅಡಿ ಜಾಗ ಮಾತ್ರವಿದ್ದು, ಇದರಲ್ಲಿ 2142 ಚದರ ಅಡಿ ಪ್ರದೇಶವನ್ನು ಪ್ರಾರ್ಥನಾ ಮಂದಿರ ನಿರ್ಮಿಸಿ ಉಪಯೋಗಿಸಲಾಗುತ್ತಿದೆ. ಉಳಿದ ಪ್ರದೇಶವನ್ನು ವ್ಯಾಯಾಮ ಶಾಲೆ ಉದ್ದೇಶಕ್ಕೆ ಬಳಸಲಾಗುತ್ತಿದೆ. ಗುತ್ತಿಗೆ ಅವಧಿಯು ದಿನಾಂಕ:05-04-1970ಕ್ಕೆ ಮುಕ್ತಾಯವಾಗಿದ್ದು, 2002-03 ರ ಸಾಲಿನವರೆಗೂ ಗುತ್ತಿಗೆ ಹಣವನ್ನು ಪಾವತಿ ಮಾಡಿರುತ್ತಾರೆಂದು ವರದಿ ಮಾಡಿರುತ್ತಾರೆ.

ಸ್ಥಳೀಯರು ಈ ಪ್ರದೇಶವನ್ನು ಪ್ರಾರ್ಥನೆ ಮತ್ತು ವ್ಯಾಯಾಮ ಶಾಲೆ ಎರಡು ಉದ್ದೇಶಗಳಿಗೆ ಬಳಸುತ್ತಿದ್ದು, ಈ ಜಾಗವು ಜನನಿಬಿಡ ಪ್ರದೇಶದ ಮಧ್ಯದಲ್ಲಿದ್ದು, ಪಾಲಿಕೆಯು ಇತರೇ ಉದ್ದೇಶಗಳಿಗೆ ಬಳಸಲು ಕಷ್ಟ ಸಾಧ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ನವೀಕರಿಸುವ ದಿನಾಂಕದವರೆಗೆ ಈ ಹಿಂದೆ ನಿಗಧಿಪಡಿಸಲಾಗಿರುವ ಗುತ್ತಿಗೆ ದರದಂತೆ ವಸೂಲಿ ಮಾಡಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನಕಾಶೆಯಂತೆ ಎರಡು ಉದ್ದೇಶಗಳಿಗೆ ಈ ಕೆಳಕಂಡ ಷರತ್ತಿನೊಂದಿಗೆ ಗುತ್ತಿಗೆ ನವೀಕರಿಸಬಹುದಾಗಿರುತ್ತದೆ.

1. ಗುತ್ತಿಗೆ ನೀಡಲಾದ ಉದ್ದೇಶಗಳನ್ನು ಹೊರತುಪಡಿಸಿ, ಇನ್ನಾವುದೇ ಉದ್ದೇಶಗಳಿಗೆ ಬಳಸದಿರಲು
2. ಈಗ ಉದ್ದೇಶಗಳಿಗೆ ಉಪಯೋಗಿಸುತ್ತಿರುವ ವಿಸ್ತೀರ್ಣಕ್ಕೆ ಹೆಚ್ಚಿನ ವಿಸ್ತೀರ್ಣ ಬಳಸತಕ್ಕದಲ್ಲ
3. ವ್ಯಾಯಾಮ ಶಾಲೆ ಆಡಳಿತ ನಿರ್ವಹಿಸುತ್ತಿರುವ ಸಮಿತಿಯಲ್ಲಿ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ಇವರನ್ನು ವಿಶೇಷ ಆಹ್ವಾನಿತರಾಗಿ ಸೇರಿಸಿಕೊಳ್ಳತಕ್ಕದ್ದು.

ಪ್ರಸ್ತುತ ಜಮೀನಿನ ಮಾರುಕಟ್ಟೆ ಮೌಲ್ಯ ಚದರ ಅಡಿ ಒಂದಕ್ಕೆ ರೂ.1800/- ಗಳಿದ್ದು, 4845 ಚದರ ಅಡಿಗಳಿಗೆ ಆಸ್ತಿಯ ಮೌಲ್ಯ ರೂ.87,21,000 ಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ.10% ರಂತೆ ಪರಿಗಣಿಸಿದಲ್ಲಿ,

. . . .2

(1800x4845=87,21,000 10%=8,72,100=12 ತಿಂಗಳು = 72,675) ಮಾಸಿಕ ರೂ.72,675/-ಗಳಾಗುತ್ತದೆ. ಸರ್ಕಾರಿ ಆದೇಶದ ಪ್ರಕಾರ, ಸದರಿ ಜಾಗವು ಪ್ರಾರ್ಥನೆ ಮತ್ತು ವ್ಯಾಯಾಮ ಶಾಲೆ ಆಗಿರುವುದರಿಂದ ರಿಯಾಯಿತಿ ದರದಲ್ಲಿ ನಿಗಧಿಪಡಿಸಲು ಅವಕಾಶವಿರುತ್ತದೆ. ಈ ಹಿನ್ನಲೆಯಲ್ಲಿ, ಮೇಲ್ಕಂಡ ಸ್ವತ್ತಿಗೆ ದರ ನಿಗಧಿಪಡಿಸಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-03-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ದಿನಾಂಕ:05-03-2011 ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1,000/-ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಯ ಮುಂದೆ ಮರುಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ಸಭೆಯ ನಿರ್ಣಯ ಹಾಗೂ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತಿಗೊಳಪಡಿಸಿ ಮಾನ್ಯ ಆಯುಕ್ತರ ದಿನಾಂಕ:05-03-2011 ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 55 (224)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ವಾರ್ಡ್ ಸಂಖ್ಯೆ:60, ಸಗಾಯಿಪುರಂ ರಿಚರ್ಡ್ಸ್ ಟೌನ್, ಪಾಟರಿಟೌನ್ ರಸ್ತೆಯಲ್ಲಿರುವ 4906.5 ಚ.ಅಡಿಗಳ ಮಾರ್ಜಿನಲ್ ಜಾಗವನ್ನು ಶಾಲಾ ಮಕ್ಕಳಿಗೆ ಉಪಯೋಗಕ್ಕಾಗಿ ಮತ್ತು ಆಟದ ಮೈದಾನಕ್ಕಾಗಿ ವಾರ್ಷಿಕ ರೂ 200/- ರಂತೆ ಗುತ್ತಿಗೆ ಆಧಾರದ ಮೇಲೆ ದಿನಾಂಕ:22-01-1975 ರಿಂದ 21-01-1978 ರವರೆಗೆ 03-ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:21-01-1978ಕ್ಕೆ ಮುಕ್ತಾಯವಾಗಿರುತ್ತದೆ. ಗುತ್ತಿಗೆ ನೀಡಿರುವ ಅವಧಿಯನ್ನೊಳಗೊಂಡಂತೆ ಈವರೆವಿಗೂ ಗುತ್ತಿಗೆ ಮೊತ್ತ ಪಾವತಿಸದ ಕಾರಣ, ವಸೂಲಿ ಮಾಡಿ ಪಾಲನಾ ವರದಿ ಸಲ್ಲಿಸುವಂತೆ ಸೂಚಿಸಲಾಗಿದ್ದರ ಮೇರೆಗೆ 1977 ರಿಂದ 2010ನೇ ಸಾಲಿನವರೆವಿಗೂ ಶೇ:5%ರ ಬಡ್ಡಿಯೊಂದಿಗೆ ಗುತ್ತಿಗೆ ಮೊತ್ತವನ್ನು ಪಾವತಿಸಿ ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕರು ಗುತ್ತಿಗೆ ಅವಧಿಯನ್ನು ನವೀಕರಿಸದೇ ಗುತ್ತಿಗೆಯನ್ನು ರದ್ದುಪಡಿಸಿ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ಕೋರಿರುತ್ತಾರೆ.

ಸಹಾಯಕ ಆಯುಕ್ತರು(ಆಸ್ತಿಗಳು)ರವರು ಪೂರ್ವ ವಲಯದ ಭೂಮಾಪಕರು ಹಾಗೂ ಕಾಡುಗೊಂಡನಹಳ್ಳಿ ಉಪವಲಯದ ಮೌಲ್ಯಮಾಪಕರೊಂದಿಗೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ಆಸ್ತಿಯು ಕರ್ನ್ಸವೆನ್ಸಿ ರಸ್ತೆಯಾಗಿದ್ದು, ಇದರ ಅಳತೆ ಪೂರ್ವ-ಪಶ್ಚಿಮ 360 ಅಡಿಗಳು ಹಾಗೂ ಉತ್ತರ-ದಕ್ಷಿಣದ ಅಳತೆ ಸರಾಸರಿಯಲ್ಲಿ 13.5 ಅಡಿಗಳಾಗಿದ್ದು, ಒಟ್ಟು ವಿಸ್ತೀರ್ಣ 4860 ಅಡಿಗಳ ಪ್ರದೇಶವಾಗಿರುವುದಾಗಿ, ಈ ಪ್ರದೇಶದಲ್ಲಿ ಕ್ಲಾರೆನ್ಸ್ ಶಾಲೆಯ ಮಕ್ಕಳು ಆಟವಾಡಲು ಆಟದ ಸಾಮಗ್ರಿಗಳನ್ನು ಜೋಡಿಸಿ ಮಕ್ಕಳ ಉಪಯೋಗಕ್ಕಾಗಿ ಉಪಯೋಗಿಸುತ್ತಿರುವುದಾಗಿ ವರದಿ ಮಾಡಿರುತ್ತಾರೆ. ಈ ಬಗ್ಗೆ ನಗರಮಾಪನ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯೊಂದಿಗೆ ವರದಿ ಕೋರಲಾಗಿ, ಸದರಿಯವರು ನೀಡಿರುವ ವರದಿಯಂತೆ ಈ ಪ್ರದೇಶವು ಸ್ಥಳೀಯ ಕ್ಷೇತ್ರ 71 ಆಗಿದ್ದು, ಸಗಾಯಿಪುರಂ ವ್ಯಾಪ್ತಿಯ ಸಿ.ಟಿ.ಎಸ್.ನಂ:975ರ ಉತ್ತರ ಭಾಗದ ಕರ್ನ್ಸವೆನ್ಸಿ ಲೀಜ್ ಪ್ರದೇಶವಾಗಿದ್ದು, ಇದು ಪಾಲಿಕೆಯ ಆಸ್ತಿಯಾಗಿದ್ದು, ಇದರ ಅಳತೆ 13.5x360 ಅಡಿಗಳಾಗಿದ್ದು, ಇದರ ಒಟ್ಟು ವಿಸ್ತೀರ್ಣ 4860 ಚದರ ಅಡಿ ಪ್ರದೇಶವಾಗಿರುತ್ತದೆಂದು ವರದಿ ಮಾಡಿರುತ್ತಾರೆ.

ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ರಸ್ತೆಯು (ಮಾರ್ಜಿನಲ್ ಜಾಗ) ಸಾರ್ವಜನಿಕ ಓಡಾಟಕ್ಕೆ ಕಿರಿದಾದ ಪ್ರದೇಶವಾಗಿದ್ದು, ಪಾಲಿಕೆಯ ಯಾವುದೇ ವಾಣಿಜ್ಯ ಉದ್ದೇಶಕ್ಕೆ ಉಪಯೋಗವಿಲ್ಲವೆಂದು ಶಾಲೆಯ ಮಕ್ಕಳಿಗೆ ಸದುಪಯೋಗವಾಗುವುದರಿಂದ, ನಿಯಮಾನುಸಾರ ಗರಿಷ್ಟ ಮೊತ್ತಕ್ಕೆ ಗುತ್ತಿಗೆಗೆ ನೀಡಬಹುದೆಂದು ಸಹಾಯಕ ಆಯುಕ್ತರು(ಆಸ್ತಿಗಳು) ಅಭಿಪ್ರಾಯಿಸಿರುತ್ತಾರೆ.

ಪ್ರಸ್ತುತ ನವೀಕರಿಸಲು ಕೋರಿರುವ ಸ್ವತ್ತಿನ ಮಾರುಕಟ್ಟೆ ದರವು ದಿನಾಂಕ:19-04-2007ರ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಚದರ ಅಡಿ 1ಕ್ಕೆ ರೂ.2000/- ರಂತೆ, 4860 ಚದರ ಅಡಿಗಳಿಗೆ 97,20,000/- ರೂ.ಗಳಾಗುತ್ತದೆ. ಶೇ:10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ.9,72,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.81,000/- ಗಳಾಗುತ್ತದೆ. ದಿನಾಂಕ:01-03-2002ರ ಸುತ್ತೋಲೆ ಕ್ರಮ ಸಂಖ್ಯೆ:5ರ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ

. . . .2

ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕ್ಲಾರೆನ್ಸ್ ಹೈಸ್ಕೂಲ್ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ಗುತ್ತಿಗೆ ದರದಂತೆಯೂ, ಹೊಸದಾಗಿ ಕರಾರು ನೊಂದಾಯಿಸುವ ದಿನಾಂಕದಿಂದ ಐದು-(05) ವರ್ಷಗಳ ಅವಧಿಗೆ ವಾರ್ಷಿಕ/ಮಾಸಿಕ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-07-2011ರ ಟಿಪ್ಪಣಿ ಹಾಗೂ ಗುತ್ತಿಗೆ ಅವಧಿ ನವೀಕರಿಸುವ ಮಾನ್ಯ ಆಯುಕ್ತರವರ ದಿನಾಂಕ:04-07-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ವಾರ್ಷಿಕ ರೂ.25,000/- (ಇಪ್ಪತ್ತೈದು ಸಾವಿರ) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 58 (227)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಶ್ರೀ.ದೊಂಡಾಳೆ ಗೋವಿಂದ ಸಾ ರವರು ನಂ.5, ಉತ್ತರಾಧಿಮಠ, 1ನೇ ಅಡ್ಡ ರಸ್ತೆ, ವಾರ್ಡ್-109ರ ವ್ಯಾಪ್ತಿಯಲ್ಲಿ ಬರುವ ನಗರ ಪಾಲಿಕೆಯ 18.3X1.15=21 ಚದರ ಅಡಿಗಳ ಜಾಗವನ್ನು 5 ವರ್ಷಗಳ ಅವಧಿಗೆ ವಾರ್ಷಿಕ ರೂ.36/- ಗಳಿಗೆ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿಯು 1983ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಣಗೊಳಿಸದೇ ಸದರಿ ಜಾಗವನ್ನು ದಾರಿಯಾಗಿ ಉಪಯೋಗಿಸುತ್ತಿರುತ್ತಾರೆ.

ಸದರಿ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆಯ ಜಾಗಕ್ಕೆ ನಿಗಧಿಪಡಿಸಿದ ವಾರ್ಷಿಕ ಗುತ್ತಿಗೆ ಮೊತ್ತ ರೂ.36/- ರಂತೆ ಈ ವರೆಗೆ ರೂ.1,044/-ಗಳು ಬಾಕಿ ಇದ್ದು, ಇದನ್ನು ಗುತ್ತಿಗೆದಾರರು ಪಾವತಿಸಿರುವುದಿಲ್ಲ ಹಾಗೂ ಅನಧಿಕೃತವಾಗಿ ಸದರಿ ಜಾಗದಲ್ಲಿ ಮುಂದುವರೆದಿರುತ್ತಾರೆ.

ಸದರಿಯವರಿಗೆ 1978 ರಿಂದ 1983ರ ವರೆಗೆ ಗುತ್ತಿಗೆ ಅವಧಿ ಮುಗಿದ ನಂತರ ನವೀಕರಣಗೊಂಡಿಲ್ಲದ ಕಾರಣ ಅನಧಿಕೃತವೆಂದು ಭಾವಿಸಿ ಕೆ.ಪಿ.ಪಿ. ಕಾಯ್ದೆ ಕಲಂ 4(1) ರ ರೀತ್ಯಾ ನೋಟೀಸನ್ನು ಜಾರಿ ಮಾಡಲಾಗಿದೆ.

ಸ್ಥಳೀಯ ಅಧಿಕಾರಿಗಳು ನವೀಕರಿಸುವ ಅಥವಾ ತೆರವುಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ಈ ಜಾಗ ತುಂಬಾ ಕಿರಿದಾದ ಜಾಗವಾಗಿದ್ದು ಸಾರ್ವಜನಿಕ ಉದ್ದೇಶಗಳಿಗೆ ಬಳಸಲು ಸಾಧ್ಯವಿಲ್ಲದ ಕಾರಣ ಗುತ್ತಿಗೆ ನವೀಕರಿಸಿದ್ದಲ್ಲಿ, ಪಾಲಿಕೆಗೆ ಆದಾಯವು ಬರುವುದೆಂಬ ಅಭಿಪ್ರಾಯಪಡಲಾಗಿದೆ.

2007ರ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.2,900/- ಗಳಾಗಿದ್ದು, ಇದರಂತೆ ಲೆಕ್ಕಾಚಾರ ಮಾಡಲಾಗಿ 18.3X1.15=21 ಚದರ ಅಡಿಗಳು ಸ್ವತ್ತಿನ ವಿಸ್ತೀರ್ಣವಾಗಿದ್ದು, ಅದರಂತೆ 2900X21=ರೂ.60,900/- ಗಳಾಗಿದ್ದು, ಇದರಂತೆ ಶೇಕಡ 10 ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ನಿಗಧಿಪಡಿಸಿದ್ದು ರೂ.6,090/- ಗಳಾಗಲಿದ್ದು, ಮಾಸಿಕ ಬಾಡಿಗೆ ರೂ.510/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆದಾರನಿಂದ ರೂ.1,044/- ಬಾಕಿ ಇದ್ದು, ಈ ಮೊತ್ತವನ್ನು ಪಾವತಿಸಿಕೊಂಡು ಈಗಿನ ಮಾಸಿಕ ಬಾಡಿಗೆ ನಿಗಧಿಪಡಿಸಿ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸುವ ಸಲುವಾಗಿ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:09-08-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಬಾಕಿಯಿರುವ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿಯನ್ನು ನವೀಕರಿಸುವ ದಿನಾಂಕದಿಂದ ಮಾಸಿಕ ರೂ.200/- (ಇನ್ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

. . . .2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 59 (228)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸ್ವತ್ತಿನ ಸಂಖ್ಯೆ:06, 2ನೇ ಹಂತ, ಮಾರೇನಹಳ್ಳಿ, ಜಯನಗರ ವಾರ್ಡ್ ನಂ:168, ಪಟ್ಟಾಭಿರಾಮನಗರದಲ್ಲಿನ 13051 ಚ.ಅಡಿಗಳ ಸ್ವತ್ತನ್ನು ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಗೆ ಗುತ್ತಿಗೆಯ ಆಧಾರದ ಮೇಲೆ ನಗರಪಾಲಿಕೆ ವತಿಯಿಂದ ದಿನಾಂಕ:25-02-1994 ರಿಂದ ದಿನಾಂಕ:24-02-1997 ರವರೆಗಿನ 3-ವರ್ಷಗಳ ಗುತ್ತಿಗೆ ಅವಧಿಗೆ ವಾರ್ಷಿಕ ರೂ.1200/- ಗುತ್ತಿಗೆ ಹಣ ನಿಗಧಿಪಡಿಸಿ, ವಸತಿ ನಿಲಯಕ್ಕಾಗಿ ನೀಡಲಾಗಿರುತ್ತದೆ. ಗುತ್ತಿಗೆದಾರರು ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ.

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿರವರು ಪತ್ರ ಬರೆದು, ಗುತ್ತಿಗೆ ಅವಧಿ ವಿಸ್ತರಿಸಲು ಹಾಗೂ ಈ ಸ್ವತ್ತಿಗೆ ಜೂನ್-2005ರವರೆವಿಗೆ ಗುತ್ತಿಗೆ ಮೊತ್ತವನ್ನು ಪಾವತಿಸಿದ್ದು, ತದನಂತರದ ಅವಧಿಗೆ ಗುತ್ತಿಗೆ ಮೊತ್ತವನ್ನು ಶೇ:22.75% ರ ಅಡಿಯಲ್ಲಿ ಕಾದಿರಿಸಿದ ಮೊತ್ತದಲ್ಲಿ ಹಣವನ್ನು ಭರಿಸಲು ಕೋರಿರುತ್ತಾರೆ.

ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ಗುತ್ತಿಗೆ ಅವಧಿಯು ದಿನಾಂಕ:24-02-1997ಕ್ಕೆ ಮುಕ್ತಾಯವಾಗಿದ್ದು, ಗುತ್ತಿಗೆದಾರರು ಜೂನ್-2005ರವರೆಗೆ ಹಣ ಪಾವತಿಸಿರುತ್ತಾರೆ. ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಸ್ವತ್ತಿನಲ್ಲಿ ತಳ ಮತ್ತು ನೆಲ ಅಂತಸ್ತಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸರ್ಕಾರಿ ಕಲಾ ಕಾಲೇಜು, ಬಾಲಕರ ವಿದ್ಯಾರ್ಥಿ ನಿಲಯವನ್ನಾಗಿ ನಡೆಸುತ್ತಿದ್ದು, ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಾಸವಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:24-02-1997 ಕ್ಕೆ ಪೂರ್ಣ ಗೊಂಡಿರುವುದರಿಂದ, ದಿನಾಂಕ:25-02-1997 ರಿಂದ ಗುತ್ತಿಗೆ ಅವಧಿಯನ್ನು ನವೀಕರಿಸಲು ಪ್ರಸ್ತಾಪಿಸಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆಯು ಸರ್ಕಾರದ ಒಂದು ಭಾಗವಾಗಿದ್ದು, ಗುತ್ತಿಗೆ ಷರತ್ತು ಉಲ್ಲಂಘಿಸಿಲ್ಲವಾದ್ದರಿಂದ, ಮುಂದಿನ 5-ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ದಿನಾಂಕ:01-03-2002ರ ಆಯುಕ್ತರ ಸುತ್ತೋಲೆಯ ಕಲಂ-7(4) ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10%ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ. ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.2,800/-ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 13051 ಚ.ಅಡಿಗಳಾಗಿದ್ದು, ಇದರಂತೆ ಲೆಕ್ಕ ಹಾಕಲಾಗಿ 2800x13051 = ರೂ.3,65,42,800/- ಗಳಾಗುತ್ತದೆ. ಇದರಂತೆ ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.36,54,280/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಹಣ ರೂ.3,04,525/- ಗಳಾಗುತ್ತದೆ.

ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಅಧಿಕಾರವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆಯನ್ನು ಮುಂದಿನ 05 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ನವೀಕರಿಸದೇ ಇರುವ ದಿನಾಂಕದಿಂದ ನಿಗಧಿಪಡಿಸುವ ಗುತ್ತಿಗೆ ಹಣದ ಬಗ್ಗೆ

. . . .2

ಮತ್ತು ನವೀಕರಿಸಿದ ಅವಧಿಗೆ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ12-07-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-07-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.27,400/- (ಇಪ್ಪತ್ತೇಳು ಸಾವಿರದ ನಾಲ್ಕು ನೂರು) ಗಳಿಗೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 60 (229)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಶ್ರೀ.ಕುಪ್ಪಯ್ಯ ಬಿನ್ ತಂಗಪ್ಪ ರವರಿಗೆ ನಗರ ಪಾಲಿಕೆ ವತಿಯಿಂದ ವಾರ್ಡ್ ನಂ.04ರ ಹೆಚ್.ಎಂ.ಟಿ ಮುಖ್ಯರಸ್ತೆ, 1ನೇ ಕ್ರಾಸ್, ಎಂ.ಎಸ್.ರಾಮಯ್ಯ ಕಾಲೇಜ್ (ಕಾರ್ನರ್) ಚರ್ಮ ಕುಟೀರ ನಡೆಸುವ ಸಲುವಾಗಿ 6x6 ಅಡಿಗಳ ವಿಸ್ತೀರ್ಣವುಳ್ಳ ಜಾಗವನ್ನು 01-02-2004ರಲ್ಲಿ ಗುತ್ತಿಗೆ ಮೊತ್ತ ಮಾಸಿಕ ರೂ.300/- ರಂತೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ಸದರಿ ಅವಧಿಯು 2007ಕ್ಕೆ ಮುಕ್ತಾಯವಾಗಿದ್ದು, ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ಅರ್ಜಿದಾರರು ದಿ:09-11-2009 ರಂದು ಮನವಿ ಸಲ್ಲಿಸಿರುತ್ತಾರೆ.

ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುವಂತೆ ದಿನಾಂಕ:01-02-2007 ರಂದು ಗುತ್ತಿಗೆ ಅವಧಿ ಮುಗಿದಿರುವ ಮೇರೆಗೆ ದಿನಾಂಕ:02-02-2007 ರಿಂದ 01-02-2010ರ ವರೆಗೆ 3 ವರ್ಷಗಳ ಅವಧಿಗೆ (ಹಿಂದಿನ ಮಾಸಿಕ ಮೊತ್ತ ರೂ.300/- ಗಳಿಗೆ) ಶೇ 10% ರಷ್ಟು ಹೆಚ್ಚಿಸಿ ರೂ.330/- ಎಂದು ನಿಗಧಿಪಡಿಸಿದಲ್ಲಿ ಒಟ್ಟು ಮೊತ್ತ ರೂ.11,880/-ಗಳಾಗಿದ್ದು, ಇದರಂತೆ ಗುತ್ತಿಗೆ ಮೊತ್ತವನ್ನು ಪಾವತಿಸಲು ಗುತ್ತಿಗೆದಾರರಿಗೆ ದಿನಾಂಕ: 30-08-2010 ರಂದು ಹಿಂಬರಹವನ್ನು ಜಾರಿ ಮಾಡಿರುತ್ತಾರೆ.

ಅರ್ಜಿದಾರರು ಪ್ರಸ್ತುತ ದಿನಾಂಕ:30-04-2011 ರಂದು ರೂ.12,000/-ಗಳ ಗುತ್ತಿಗೆ ಮೊತ್ತವನ್ನು ಪಾವತಿಸಿದ್ದು, ದಿನಾಂಕ:01-02-2010 ರಿಂದ 5 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಬಹುದೆಂದು ವಲಯಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯು 2007ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ರೂ.2200/- ಗಳಿದ್ದು, ವಾಣಿಜ್ಯ ಉದ್ದೇಶಕ್ಕೆ ಶೇ:40%ರಷ್ಟು ಹೆಚ್ಚಿಸಿದಾಗ, ರೂ.3080/-ಗಳಾಗುತ್ತದೆ. ಇದರಂತೆ, 66 ಚದರ ಅಡಿ ಗಳ ಜಾಗಕ್ಕೆ ಲೆಕ್ಕ ಹಾಕಲಾಗಿ 3080x66=ರೂ.1,10,880/- ಗಳಾಗುತ್ತದೆ ಮತ್ತು ಶೇ. 10% ರಷ್ಟು ವಾರ್ಷಿಕ ಗುತ್ತಿಗೆ ದರವು ರೂ. 11,080/- ಗಳಾಗಲಿದ್ದು, ಮಾಸಿಕ ಗುತ್ತಿಗೆ ದರವು ರೂ.930/- ಗಳಾಗುವುದಾಗಿ ತಿಳಿಸಿ, ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಕುಪ್ಪಯ್ಯ ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-07-2011 ರ ಟಿಪ್ಪಣಿ ಹಾಗೂ ಚರ್ಮ ಕುಟೀರವು ದೇವಸ್ಥಾನಕ್ಕೆ ನೇರವಾಗಿರದಂತೆ ಪಕ್ಕಕ್ಕೆ ಸ್ಥಳಾಂತರಿಸಿ, ಪಾದಚಾರಿಗಳಿಗೆ ತೊಂದರೆ ಆಗದಂತೆ ನಿರ್ವಹಿಸುವ ಷರತ್ತಿನೊಂದಿಗೆ ದಿನಾಂಕ:22-07-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 02-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/- (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು

. . . .2

ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 61 (230)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ವಾರ್ಡ್ 117, ವಿನಾಯಕನಗರದಲ್ಲಿನ ಸ್ವತ್ತಿನ ಸಂಖ್ಯೆ:03, 2ನೇ ಮುಖ್ಯರಸ್ತೆ, 1ನೇ 'ಎ' ಅಡ್ಡರಸ್ತೆ, ವಿಜಯನಗರ ಇಲ್ಲಿನ ಸ್ವತ್ತಿನ ಪೈಕಿ 13x41 (533 ಚದರ ಅಡಿಗಳ ಜಾಗವನ್ನು) ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್ ರವರಿಂದ ಸಾರ್ವಜನಿಕ ರಸ್ತೆ ಉಪಯೋಗಕ್ಕಾಗಿ ರಸ್ತೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿರುವುದಾಗಿ ಈ ಜಾಗದ ಬದಲಿಗೆ ಇದೇ ವಾರ್ಡಿನ ಜಲಕಂಠೇಶ್ವರ ರಸ್ತೆಯಲ್ಲಿ ಲೆಪ್ರಸಿ ಆಸ್ಪತ್ರೆಗೆ ಪಾಲಿಕೆಯಿಂದ ಗುತ್ತಿಗೆಗೆ ನೀಡಿರುವ ಸ್ವತ್ತಿಗೆ ಹೊಂದಿಕೊಂಡಿರುವ ನಿವೇಶನವನ್ನು ಬದಲೀ ನಿವೇಶನವನ್ನಾಗಿ ನೀಡಬೇಕೆಂದು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ಸ್ಥಳ ಪರಿಶೀಲನಾ ವರದಿಯಲ್ಲಿ ಜಲಕಂಠೇಶ್ವರನಗರ ಮುಖ್ಯರಸ್ತೆಯಲ್ಲಿ 23x36 ಅಡಿ ಸ್ವತ್ತು ಹಂಚಿಕೆ ಮಾಡಲು ಲಭ್ಯವಿರುವುದಾಗಿ ನಕ್ಷೆಯೊಂದಿಗೆ ವರದಿ ಮಾಡಿರುತ್ತಾರೆ.

ಈ ಬಗ್ಗೆ ಉಪ ಆಯುಕ್ತರು (ಆಸ್ತಿಗಳು) ಸ್ಥಳೀಯ ಅಧಿಕಾರಿಗಳೊಂದಿಗೆ ದಿನಾಂಕ:02-07-2011 ರಂದು ನಡೆಸಿದ ಸ್ಥಳ ಪರಿಶೀಲನಾ ವರದಿಯಲ್ಲಿ, ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಷಿಯೇಷನ್ ರವರ ಸ್ವತ್ತಿನಲ್ಲಿ 13x41 ಅಡಿಗಳ ಪ್ರದೇಶವನ್ನು 6 ವರ್ಷಗಳ ಹಿಂದೆ ಪಾಲಿಕೆಗೆ ಬಿಟ್ಟುಕೊಟ್ಟಿದ್ದು, ಆ ಸ್ಥಳದಲ್ಲಿ ಪಾಲಿಕೆ ವತಿಯಿಂದ ಸಿಮೆಂಟಿನ ರಸ್ತೆ ಮಾಡಲಾಗಿರುವುದಾಗಿ, ಪ್ರಸ್ತಾಪಿಸಲಾಗಿರುವ ಆ ಕೊಳಚೆ ಪ್ರದೇಶದ ಜಾಗದ ಎರಡು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಬದಲಿ ನಿವೇಶನ ನೀಡಲು ಪ್ರಸ್ತಾಪಿಸಲಾಗಿರುವ ಜಾಗವನ್ನು ಪರಿಶೀಲಿಸಲಾಗಿ ಇದರ ಅಳತೆ 22x25 ಅಡಿಗಳಿದ್ದು, ಇದರಲ್ಲಿ ಒಂದು ಹಳೆ ಬಾವಿ ಇರುತ್ತದೆ. ಇದಕ್ಕೆ ಲಗತ್ತಾಗಿರುವ ಜಾಗವು ಪಾಲಿಕೆಯ ಜಾಗವಾಗಿದ್ದು, ಬೇರೆಯವರಿಂದ ಅತಿಕ್ರಮಣವಾಗಿರುತ್ತದೆ.

ಅರ್ಜಿದಾರರಿಗೆ ಬದಲಿಯಾಗಿ ನೀಡಲು ಪ್ರಸ್ತಾಪಿಸಿರುವ ಜಾಗ 550 ಚದರ ಅಡಿಗಳಾಗಿದ್ದು, ಅವರು ಬಿಟ್ಟುಕೊಟ್ಟಿರುವ ಜಾಗ 533 ಚದರ ಅಡಿಗಳಾಗಿದ್ದು, 17 ಚದರ ಅಡಿಗಳು ಜಾಸ್ತಿಯಾಗಿರುವುದರಿಂದ ಚಾಲ್ತಿಯಲ್ಲಿರುವ ಮಾರ್ಗಸೂಚಿ ಅನುಸಾರ ವ್ಯತ್ಯಾಸದ ಮೊತ್ತ ಪಾವತಿಸಿಕೊಳ್ಳಬಹುದಾಗಿದೆಯೆಂದು ಅಭಿಪ್ರಾಯಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್ ರವರಿಗೆ 22x25 ಅಡಿಗಳ ಜಾಗವನ್ನು ಬದಲೀ ನಿವೇಶನವನ್ನಾಗಿ ನೀಡುವ ಪ್ರಸ್ತಾವನೆಯ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–09–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26–09–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 63 (232)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:114 ರ ವ್ಯಾಪ್ತಿಯಲ್ಲಿರುವ ಜಾನ್‌ಬುಲ್ ಸ್ಟ್ರೀಟ್‌ನಲ್ಲಿ ವಾಸಿಸುತ್ತಿರುವ 08 ಜನರಿಗೆ ದಿನಾಂಕ: 21-01-1973 ರಿಂದ 20-12-1973 ರವರೆಗೆ (11 ತಿಂಗಳ) ಅವಧಿಗೆ ವಿವಿಧ ಅಳತೆಗಳ ನಿವೇಶನವನ್ನು ತಿಂಗಳಿಗೆ ವಿವಿಧ ದರಗಳಲ್ಲಿ (2/-ರೂ. 3/-ರೂ. 5/-ರೂ.) ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ತದನಂತರ, ಗುತ್ತಿಗೆ ಅವಧಿ ನವೀಕರಿಸದೇ ಇದ್ದು. ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು ಶ್ರೀಯುತರುಗಳಾದ | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಮಾಸಿಕ ಗುತ್ತಿಗೆ ಮೊತ್ತ |
|---|---|---|---|---|---|
| 01 | 1 | ಎಂ.ನಟರಾಜನ್ | ಎಂ. ನಟರಾಜನ್ | 30x25=750 ಚ.ಅಡಿ | ರೂ. 2/- ಗಳು |
| 02 | 1/ಎ | ಸೀತಾರಾಮಮ್ಮ | ಸೀತಮ್ಮ | 20x18=360 ಚ.ಅಡಿ | ರೂ. 5/- ಗಳು |
| 03 | 2 | (ಲೇಟ್)ಎಸ್. ಟೇಕಾರಾಮ್ | ಶ್ರೀಮತಿ. ಮಾಯಾದೇವಿ ಕೋಂ.ಟೇಕಾರಾಮ್.ಎಸ್. | 30x25=750 ಚ.ಅಡಿ | ರೂ. 3/- ಗಳು |
| 04 | 2/ಎ | (ಲೇಟ್)ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 20x30=600 ಚ.ಅಡಿ | ರೂ. 2/- ಗಳು |
| 05 | 3 | ತಿರುವೆಂಕಟಮ್ | ಎಂ.ನಟರಾಜನ್ | 20x18=360 ಚ.ಅಡಿ | ರೂ. 3/- ಗಳು |
| 06 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 20x30=600 ಚ.ಅಡಿ | ರೂ. 2/- ಗಳು |
| 07 | 5 | (ಲೇಟ್) ಸೆಲ್ವರಾಜ್.ಸಿ | ಶ್ರೀಮತಿ.ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 30x20=600 ಚ.ಅಡಿ | ರೂ. 2/- ಗಳು |
| 08 | 6 | (ಲೇಟ್)ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 25x20=500 ಚ.ಅಡಿ | ರೂ. 3/- ಗಳು |

ಗುತ್ತಿಗೆಗೆ ನೀಡಲಾಗಿದ್ದ 08-ಜನರಲ್ಲಿ ಕ್ರಮ ಸಂಖ್ಯೆ:05 ರ ತಿರುವೆಂಕಟಮ್ ರವರನ್ನು ಹೊರತುಪಡಿಸಿ, ಉಳಿದ 07-ಜನ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪೂರ್ಣವಾಗಿ ಪಾವತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಗುತ್ತಿಗೆ ಅವಧಿ ಪೂರ್ಣಗೊಂಡ ಕಾರಣ, ದಿನಾಂಕ:05-08-2010 ರಂದು ಕೆ.ಪಿ.ಪಿ ಕಾಯ್ದೆ-4(1) ರನ್ವಯ ನೋಟೀಸ್ ನೀಡಲಾಗಿದೆ. ಗುತ್ತಿಗೆ ನೀಡಿರುವ ಪ್ರದೇಶದಲ್ಲಿ ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಂಡು ವಾಸವಿದ್ದು, ಅವರಿಗೆ ಹಕ್ಕುಪತ್ರಗಳನ್ನು ನೀಡುವಂತೆ ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕರು ಪತ್ರ ನೀಡಿರುತ್ತಾರೆ. ಮೂಲ ಕಡತಗಳು ಲಭ್ಯವಿಲ್ಲವೆಂದು ವರದಿ ಮಾಡಿದ್ದ ಹಿನ್ನಲೆಯಲ್ಲಿ ಮೂಲ

ದಾಖಲಾತಿಗಳೊಂದಿಗೆ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಜೆರಾಕ್ಸ್ ಪ್ರತಿ ಲಭ್ಯವಿದ್ದಲ್ಲಿ, ಅಧಿಕೃತಗೊಳಿಸಿ ಗುತ್ತಿಗೆ ಅವಧಿ, ವಿಸ್ತೀರ್ಣ, ಗುತ್ತಿಗೆ ಬಾಕಿ ವಿವರಗಳೊಂದಿಗೆ, ಪ್ರತ್ಯೇಕ ಪ್ರತ್ಯೇಕವಾಗಿ ಮಂಡಿಸಲು ಸೂಚಿಸಿ ಕಡತ ಹಿಂದಿರುಗಿಸಲಾಗಿತ್ತು.

ಈ ಮೇರೆಗೆ 8-ಸ್ವತ್ತುಗಳ ಸಂಬಂಧ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಲಭ್ಯವಿರುವ ದಾಖಲೆ ಹಾಗೂ ಭೂಮಾಪಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು ತಯಾರಿಸಿರುವ ನಕ್ಷೆಯನ್ನು ಕಡತದಲ್ಲಿ ಲಗತ್ತಿಸಿ ಗುತ್ತಿಗೆ ನೀಡಿರುವ 08-ಫಲಾನುಭವಿಗಳಲ್ಲಿ 07-ಜನರು ಸದರಿ ಸ್ವತ್ತಿನಲ್ಲಿ ಮನೆ ನಿರ್ಮಿಸಿಕೊಂಡು ವಾಸವಿದ್ದು, ಒಂದು ಖಾಲಿ ನಿವೇಶನ ಇರುವುದಾಗಿ ವರದಿಯಾಗಿದ್ದು, ಗುತ್ತಿಗೆಗೆ ನೀಡಿರುವ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಕೋರಿರುವುದರಿಂದ, ಗುತ್ತಿಗೆಗೆ ನೀಡಿರುವ 08-ಫಲಾನುಭವಿಗಳ ಪೈಕಿ, ಮನೆ ನಿರ್ಮಿಸಿಕೊಂಡು ವಾಸವಾಗಿರುವ 07-ಜನರಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಿ, ಗುತ್ತಿಗೆಗೆ ನೀಡಿದ್ದ ಸ್ಥಳದಲ್ಲಿ ವಾಸಿಸದೇ ಖಾಲಿ ನಿವೇಶನ ಬಿಟ್ಟಿರುವ ಕ್ರಮ ಸಂಖ್ಯೆ:05, ತಿರುವೆಂಕಟಮ್ ರವರಿಗೆ ಗುತ್ತಿಗೆ ನವೀಕರಣ ತಿರಸ್ಕರಿಸಿ, ಸದರಿ ಸ್ವತ್ತನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಬಹುದಾಗಿದೆ.

ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಚದರ ಅಡಿ 1 ಕ್ಕೆ 1600/- ರೂ.ಗಳಾಗಿದ್ದು, ಫಲಾನುಭವಿಗಳ ಹೆಸರಿಗೆ ಮುಂದೆ ಸ್ವತ್ತಿನ ಮೌಲ್ಯ, ವಾರ್ಷಿಕ ಮೌಲ್ಯ ಹಾಗೂ ಮಾಸಿಕ ಮೌಲ್ಯಗಳನ್ನು ಈ ಕೆಳಕಂಡಂತೆ ವಿವರಿಸಿದೆ.

| ಕ್ರ ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಸ್ವತ್ತಿನ ಮೌಲ್ಯ ರೂ.ಗಳಲ್ಲಿ | ವಾರ್ಷಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ | ಮಾಸಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ |
|---|---|---|---|---|---|---|---|
| 01 | 1 | ಶ್ರೀ.ಎಂ.ನಟರಾಜನ್ | ಎಂ. ನಟರಾಜನ್ | 750 ಚ.ಅಡಿ | 12,00,000/- | 1,20,000 | 10,000 |
| 02 | 1/ಎ | ಸೀತಾರಾಮಮ್ಮ | ಸೀತಮ್ಮ | 360 ಚ.ಅಡಿ | 5,76,000/- | 57,600 | 4,800 |
| 03 | 2 | (ಲೇಟ್) ಎಸ್. ಟೇಕಾರಾಮ್ | ಶ್ರೀಮತಿ. ಮಾಯಾದೇವಿ ಕೋಂ.ಟೇಕಾರಾಮ್.ಎಸ್ | 750 ಚ.ಅಡಿ | 12,00,000/- | 1,20,000 | 10,000 |
| 04 | 2/ಎ | (ಲೇಟ್)ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 600 ಚ.ಅಡಿ | 9,60,000/- | 96,000 | 8,000 |
| 05 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 600 ಚ.ಅಡಿ | 9,60,000/- | 96,000 | 8,000 |
| 06 | 5 | (ಲೇಟ್) ಸೆಲ್ವರಾಜ್.ಸಿ | ಶ್ರೀಮತಿ ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 600 ಚ.ಅಡಿ | 9,60,000/- | 96,000 | 8,000 |
| 07 | 6 | (ಲೇಟ್) ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 500 ಚ.ಅಡಿ | 8,00,000/- | 80,000 | 6,667 |

ದಿನಾಂಕ:01-03-2002 ರ ಸುತ್ತೋಲೆ ಕ್ರಮ ಸಂಖ್ಯೆ:5 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ, ಶೇ.100/- ರಷ್ಟು ಸಮಾಜ ಸೇವೆ ಸಲ್ಲಿಸುವ ಸಂಘ/ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮೊತ್ತದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಬಹುದಾಗಿದೆ.

. . . .3

ಆದ್ದರಿಂದ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ದರದಂತೆ, ಕರಾರು ನೊಂದಾಯಿಸುವ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ, ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-08-2011 ರ ಟಿಪ್ಪಣಿ ಹಾಗೂ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಅವಧಿ ನವೀಕರಿಸಲು ಮಂಡಿಸಿರುವ ಆಯುಕ್ತರವರ ದಿನಾಂಕ: 29-08-2011 ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ ಚದರಡಿ ಒಂದಕ್ಕೆ ಮಾಸಿಕ ರೂ.1/- (ಒಂದು) ರಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪುನರ್ ಪರಿಶೀಲಿಸಿ ಗುತ್ತಿಗೆ ದರವನ್ನು ಪರಿಷ್ಕರಿಸಿ, ಸಭೆಯ ಮುಂದೆ ಮರು ಮಂಡಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪುನರ್ ಪರಿಶೀಲಿಸಿ ಗುತ್ತಿಗೆ ದರವನ್ನು ಪರಿಷ್ಕರಿಸಿ, ಸಭೆಯ ಮುಂದೆ ಮರು ಮಂಡಿಸುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 66 (235)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ವಾರ್ಡ್ ನಂ:131, ಮೈಸೂರು ರಸ್ತೆ, ನಾಯಂಡನಹಳ್ಳಿ, ವಾರ್ಡ್ ಕಛೇರಿ ಕಟ್ಟಡದ ಮೊದಲನೆ ಅಂತಸ್ತಿನ 477 ಚ.ಅಡಿ ಪಾಲಿಕೆಯ ಕಟ್ಟಡವನ್ನು ಅಂಚೆ ಕಛೇರಿ ನಡೆಸಲು ಮಾಸಿಕ ರೂ.2100/- ಗಳನ್ನು ನಿಗಧಿಪಡಿಸಿ, ದಿನಾಂಕ:08-02-2002 ರಿಂದ 11 ತಿಂಗಳ ಅವಧಿಗೆ ನೀಡಿದ್ದು, ಗುತ್ತಿಗೆ ಅವಧಿಯು 08-01-2003ಕ್ಕೆ ಮುಕ್ತಾಯವಾಗಿರುತ್ತದೆ. ಸೀನಿಯರ್ ಸೂಪರಿಟೆಂಡೆಂಟ್ ಆಫ್ ಪೋಸ್ಟ್ ಆಫೀಸ್‌ರವರು ಈ ಕಟ್ಟಡದಲ್ಲಿ ಸಾರ್ವಜನಿಕ ಅಂಚೆ ಕಛೇರಿ ನಡೆಸುತ್ತಿದ್ದು, ಗುತ್ತಿಗೆ ಅವಧಿ ಮುಗಿದಿರುವುದರಿಂದ, ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.

ಸಂಬಂಧಿಸಿದ ವಲಯಾಧಿಕಾರಿಗಳು ವರದಿಯಲ್ಲಿ ಈ ಪಾಲಿಕೆ ಕಟ್ಟಡದ ಅಳತೆ 477 ಚ,ಅಡಿ ಇದ್ದು, ಈ ಹಿಂದೆ ಗುತ್ತಿಗೆ ಹಣ ರೂ.2100/- ನಿಗಧಿಯಾಗಿದ್ದು, ಇದು ಕೇಂದ್ರ ಸರ್ಕಾರದ ಇಲಾಖೆಯಾಗಿರುವುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಬಾಕಿ ಗುತ್ತಿಗೆ ಹಣ ಪಾವತಿಸಿಕೊಂಡು ಕಾಮಗಾರಿ ಇಲಾಖೆಯವರು ನಿಗಧಿಪಡಿಸುವ ಗುತ್ತಿಗೆ ಮೊತ್ತದಂತೆ, ಮುಂದಿನ 5-ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ-1976ರ ಕಲಂ-176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ಅಂಚೆ ಕಛೇರಿಗೆ ಗುತ್ತಿಗೆ ನವೀಕರಿಸುವ ವಿಚಾರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಆದೇಶದಂತೆ ಸರ್ಕಾರದ ಮುಖ್ಯಕಾರ್ಯದರ್ಶಿರವರ ಅಧ್ಯಕ್ಷತೆಯ ಸಲಹಾ ಸಮಿತಿಯ ಮುಂದೆ ಅಭಿಪ್ರಾಯಕ್ಕಾಗಿ ಮಂಡಿಸಲಾಗಿದ್ದು, ಸಮಿತಿಯು ಗುತ್ತಿಗೆಯನ್ನು ಗರಿಷ್ಠ ಮೊತ್ತ ವಿಧಿಸಿ, ನವೀಕರಿಸಲು ಸೂಚಿಸಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯು ಕನಿಷ್ಠ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಇದು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರು ಮಾರ್ಗಸೂಚಿಯನ್ವಯ ಮಾಸಿಕ 9,040/-ರೂ.ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ಥಳದಲ್ಲಿನ ಅಂಚೆ ಕಛೇರಿಗೆ ಗುತ್ತಿಗೆ ನವೀಕರಿಸಲು ಹಾಗೂ ಬಾಕಿ ಇರುವ ಗುತ್ತಿಗೆ ಮೊತ್ತ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 03-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.9040/- (ರೂ.ಒಂಭತ್ತು ಸಾವಿರದ ನಲವತ್ತು) ಗಳ ಗುತ್ತಿಗೆ

. . . .2

ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 67 (236)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಸಂತನಗರ ಉಪ-ವಿಭಾಗ, ವಾರ್ಡ್-93, ವಸಂತನಗರ, ಕುಮಾರ ಪಾರ್ಕ್ (ಪಶ್ಚಿಮ) ಸರ್ಪೆಂಟೈನ್ ರಸ್ತೆಯಲ್ಲಿರುವ ಪಾಲಿಕೆ ಗ್ರಂಥಾಲಯ ಕಟ್ಟಡದ ತಳಭಾಗದ ಕಟ್ಟಡದ ವಿಸ್ತೀರ್ಣ 400 ಚದರ ಅಡಿಗಳ ಜಾಗವನ್ನು ಮೆ॥ ವಿಶಾಖಾ ಎಜುಕೇಷನಲ್ ಸೋಷಿಯಲ್ ಮತ್ತು ಕಲ್ಚರಲ್ ಟ್ರಸ್ಟ್‌ನ ಸಂಸ್ಥೆಯ ಅಧ್ಯಕ್ಷರು ರವರು ದಿನಾಂಕ:03-06-2009 ರಂದು ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿ ತಮ್ಮ ಸಂಸ್ಥೆಯು ವಿವಿಧ ಚಟುವಟಿಕೆಗಳಿದ್ದು, ಆದಾಗಿ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ತಾಂತ್ರಿಕ ಮತ್ತು ಇನ್ನಿತರ ಜನಪರ ಕಾರ್ಯಕ್ರಮ ಇತ್ಯಾದಿಗಳ ಬಗ್ಗೆ ವಿವರಿಸುತ್ತಾ ಮನವಿ ಮಡಿದ್ದು ಹಾಗೂ ಇದನ್ನು ಪರಿಶೀಲನೆಯ ತರುವಾಯ ಪ್ರಶ್ನಿಸಲಾಗಿ ನಂತರ ಸದರಿ ಸಂಸ್ಥೆ ಪರಿಶಿಷ್ಟ ಜಾತಿ ವಗ್ಯೆರೆ ವರ್ಗದವರ ಕಲ್ಯಾಣಕ್ಕಾಗಿ ಸಂಬಂಧಿಸಿರುವ ಕಾರಣದ ಮೇರೆಗೆ ಮಾನ್ಯ ಆಯುಕ್ತರವರ ಆದೇಶದ ದಿನಾಂಕ:16-01-2010 ರಂತೆ ದಿನಾಂಕ:03-04-2010 ರಿಂದ 02-03-2011 ರವರೆಗೆ 11 ತಿಂಗಳ ಅವಧಿಗೆ ಮಾಸಿಕ ಬಾಡಿಗೆ ರೂ.2,475/- ಗಳ ಆಧಾರದ ಮೇರೆಗೆ ಗುತ್ತಿಗೆಗೆ ಸ್ಥಳ ಮಂಜೂರು ನೀಡಲಾಗಿದ್ದು ಹಾಗೂ ಸದರಿ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುತ್ತದೆ. ಸದರಿ ಸಂಸ್ಥೆಯ ಪುನ: ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳ ಕಾಲಾವಧಿಗೆ ನವೀಕರಿಸುವ ಬಗ್ಗೆ ಹಾಗೂ ಸದರಿ ಸ್ಥಳದ ಅಳತೆ 400 ಚದರ ಅಡಿಗಳಾಗಿದ್ದು, ಈ ಪ್ರದೇಶದ ಪ್ರಸಕ್ತ ಮಾರುಕಟ್ಟೆ ದರ ನೆಲಮಹಡಿಗೆ ಚದರ ಅಡಿ 1ಕ್ಕೆ ರೂ.530 ಗಳಿದ್ದು, ಈ ಪ್ರಕಾರ 400' X 530 = 2,12,000 ಗಳಾಗಿದ್ದು, ಸರ್ಕಾರದ ಮಾರ್ಗಸೂಚಿಯಂತೆ ಶೇ.40 ರಷ್ಟು 84,800 ಸೇರಿಸಿ, ಒಟ್ಟು = 2,96,800 ಗಳಾಗಿದ್ದು, ಇದರಲ್ಲಿ ಶೇಕಡ 10 ರಂತೆ ರೂ.29,680/- ವಾರ್ಷಿಕ ಬಾಡಿಗೆ ಪ್ರಕಾರ ಪರಿಗಣಿಸಿ, ತಿಂಗಳ ಬಾಡಿಗೆ ರೂ.2,475/- ಗಳಾಗುತ್ತದೆ. ಇದರಂತೆ ಮುಂದಿನ 5 ವರ್ಷಗಳ ಕಾಲಾವಧಿಗೆ ಸದರಿ ಸಂಸ್ಥೆಗೆ ಪ್ರಸ್ತಾಪಿತ ಜಾಗವನ್ನು ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-05-2011ರ ಟಿಪ್ಪಣಿ ಹಾಗೂ ಗುತ್ತಿಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ:20-05-2011 ರ ಪ್ರಸ್ತಾವನೆಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 68 (237)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.94 (27) ಆಚಾರ್ಯ ತುಳಸಿ ಮಾರ್ಗ ರಸ್ತೆ, ಗಾಂಧಿನಗರ, ಸ್ವತ್ತಿನ ಸಂಖ್ಯೆ. 11 ಈ ಸ್ವತ್ತು ಆಲ್ ಇಂಡಿಯಾ ಇನ್ಸ್ಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗೌರ್ನಮೆಂಟ್, ಬೆಂಗಳೂರು ಇವರಿಗೆ ನಗರ ಪಾಲಿಕೆ ವತಿಯಿಂದ ಸರ್ಕಾರದ ಆದೇಶ ಸಂಖ್ಯೆ. ನಅಇ 14 ಎಂಎನ್‌ಜಿ 2000, ದಿನಾಂಕ:06-02-2003 ರ ಆದೇಶದಂತೆ ಗಾಂಧಿನಗರ ಪ್ರೌಢಶಾಲೆ ಕಟ್ಟಡದಲ್ಲಿನ 1539 ಚದರ ಅಡಿಗಳ ಜಾಗವನ್ನು ಮಾಹೆಯಾನ ರೂ.5000/- ಗಳಿಗೆ ಹಾಗೂ ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಿಸುವ ಷರತ್ತುಗೊಳಪಟ್ಟು, ದಿನಾಂಕ:15-02-2001 ರಿಂದ ಮುಂದಿನ 10 ವರ್ಷಗಳಿಗೆ ಗುತ್ತಿಗೆಯನ್ನು ನವೀಕರಿಸಲು ಮಂಜೂರಾತಿ ನೀಡಿದ್ದು, ಅದರಂತೆ ಸದರಿ ಗುತ್ತಿಗೆ ಅವಧಿಯು ದಿನಾಂಕ:14-02-2011 ಕ್ಕೆ ಪೂರ್ಣಗೊಂಡಿದೆ.

ಮಾನ್ಯ ಮುಖ್ಯ ಮಂತ್ರಿಯವರ ಸಲಹೆಗಾರರು (ನಗರಾಭಿವೃದ್ಧಿ ವಿಷಯಗಳು) ರವರ ದಿನಾಂಕ:29-01-2010 ರ ಪತ್ರದಂತೆ ಮೇಲ್ಕಂಡ ಸಂಸ್ಥೆಯ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಕಳೆದ 80 ವರ್ಷಗಳಿಂದ ಅಗಾಧವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದು, ಈ ಸಂಸ್ಥೆಗೆ ವಿನೂತನ ಮಾದರಿಯ ತರಬೇತಿ ಸಂಕೀರ್ಣ ಕಟ್ಟಡ ಒಂದರ ನಿರ್ಮಾಣಕ್ಕೆ ಸರ್ಕಾರದ ವತಿಯಿಂದ ಸೂಕ್ತ ರೀತಿಯ ಭೂಮಿಯನ್ನು ವಿತರಿಸಲು, ಸಂಸ್ಥೆಯವರು ಸಲ್ಲಿಸಿರುವ ಅರ್ಜಿಯ ಮೇರೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಈಗಾಗಲೇ ಮೇಲ್ಕಂಡ ಸಂಸ್ಥೆಗೆ ನೀಡಿರುವ ಸ್ವತ್ತಿನ ಪೂರ್ವದ ಕಡೆಯ ಮುಂಭಾಗದಲ್ಲಿ 25x66 = 1650 ಚದರ ಅಡಿಗಳ ನಗರ ಪಾಲಿಕೆಯ ಖಾಲಿ ನಿವೇಶನವಿದ್ದು, ಹಾಲಿ ಇದ್ದ ಅಳತೆಗೆ ಹೆಚ್ಚುವರಿ ಅಳತೆ ಅನುಸರಿಸಿ, ಒಟ್ಟು 3189 ಚದರ ಅಡಿಗಳ ಸ್ವತ್ತನ್ನು ಮತ್ತೇ 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ದಿನಾಂಕ:15-02-2011 ರಿಂದ ಜಾರಿಗೆ ಬರುವಂತೆ ಹಾಗೂ ಮುಂದುವರೆದಂತೆ ಸದರಿ ನಗರ ಪಾಲಿಕೆಯ ಹೆಚ್ಚುವರಿ ಜಾಗದಲ್ಲಿ ಮೇಲ್ಕಂಡ ಸಂಸ್ಥೆಯವರು ನಗರಾಭಿವೃದ್ಧಿ/ಮುನಿಸಿಪಲ್ ನೌಕರರಿಗೆ ಅನುಕೂಲ ಮಾಡುವ ದಿಶೆಯಿಂದ ಹಲವಾರು ತರಬೇತಿ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿರ್ವಹಿಸುವುದಾಗಿ ತಿಳಿಸಿದ್ದು, ಇದು ನಗರಾಭಿವೃದ್ಧಿ/ಮುನಿಸಿಪಲ್ ನೌಕರರಿಗೆ ಸಹಕಾರವಾಗುವುದು ಎಂಬುದಾಗಿ ತಿಳಿಸಲಾಗಿದೆ.

ಪ್ರಸ್ತಾಪಿತ ಪ್ರದೇಶದ 2007ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ವಾಣಿಜ್ಯಕ್ಕೆ ರೂ.7,000/- ಗಳಾಗಿದ್ದು, ಅದರಂತೆ ಲೆಕ್ಕಾಚಾರ ಮಾಡಲಾಗಿ 7000x3189= ರೂ.2,23,23,000/- ಗಳಾಗಿದ್ದು, ಅದರಂತೆ ಶೇ.10% ರಷ್ಟು ಪರಿಗಣಿಸಲಾಗಿ, ವಾರ್ಷಿಕ ರೂ.22,32,300/- ಗಳಾಗಿರುತ್ತದೆ ಹಾಗೂ ಮಾಸಿಕ ರೂ.1,86,025/- ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರ ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ ಹಾಗೂ ಈ ಸ್ಥಾಯಿ ಸಮಿತಿಗಳು ಮತ್ತು

. . . .2

ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯನ್ನು 5 ವರ್ಷಗಳಿಗಿಂತ ಹೆಚ್ಚಿಗೆ ನೀಡಬೇಕಾದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯುವುದು ಅವಶ್ಯವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ನೀಡಿರುವ ಅಳತೆಗೆ ಮಾಹೆಯಾನ ಬಾಡಿಗೆ ರೂ.5000/- ಗಳಿಂದ ರೂ.10,000/- ಗಳಿಗೆ ಹೆಚ್ಚಿಸಿ, ಪ್ರತಿ ವರ್ಷ ಶೇ.10 ರಷ್ಟು ಬಾಡಿಗೆಯನ್ನು ಹೆಚ್ಚಿಸುವ ಷರತ್ತಿಗೆ ಒಳಪಡಿಸಿ, ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ದಿನಾಂಕ:15-02-2011 ರಿಂದ ಮುಂದಿನ 5 ವರ್ಷಗಳ ಅವಧಿಗೆ ನೀಡಬಹುದೇ ಎಂಬುದರ ಬಗ್ಗೆ ಪ್ರಸ್ತಾವನೆಯನ್ನು ನವೀಕರಿಸುವ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾಗಿತ್ತು. ದಿನಾಂಕ:28-06-2011 ರಂದು ನಡೆದ ಪಾಲಿಕೆ ಸಭೆಯಲ್ಲಿ ಇವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ.

ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಸಂಸ್ಥೆಯ ಕೋರಿಕೆಯನ್ನು ಮರುಪರಿಶೀಲಿಸಲು ಪ್ರಸ್ತಾಪಿಸಿರುವ ಸಂಬಂಧ ಪ್ರಸ್ತಾವನೆ ಕುರಿತಂತೆ ಪುನರ್ ಪರಿಶೀಲನೆಯಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-10-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:20-10-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 70 (239)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ವಾರ್ಡ್ ಸಂಖ್ಯೆ 117 ರ ಪಾಲಿಕೆ ಸದಸ್ಯರು ದಿನಾಂಕ:15-02-2011 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ವಾರ್ಡ್ 117ರ ಶಾಂತಿನಗರ ಲಾಂಗ್‌ಪೋರ್ಡ್ ರಸ್ತೆ, ಆಸ್ತಿ ಸಂಖ್ಯೆ:5 ರಲ್ಲಿನ ನಗರ ಪಾಲಿಕೆ ವಾರ್ಡ್ ಕಛೇರಿ ಆವರಣದಲ್ಲಿ ಶಾಶ್ವತವಾಗಿ ಡಾ॥ ಬಿ.ಆರ್.ಅಂಬೇಡ್ಕರ್ ಪುತ್ಥಳಿ ಸ್ಥಾಪಿಸಲು ಕೋರಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಶಾಂತಿನಗರ) ಉಪ ವಿಭಾಗ ರವರ ವರದಿಯಂತೆ ವಾರ್ಡ್-117ರ ನೂತನವಾಗಿ ನಿರ್ಮಾಣವಾಗಿರುವ ಹೆಲ್ಪ್‌ಲೈನ್ ಸೆಂಟರ್ ಪಾಲಿಕೆ ಸದಸ್ಯರ ಕಛೇರಿ, ಕಂದಾಯ ಇಲಾಖೆಯ ಕಛೇರಿ ಹಾಗೂ ಕಾಮಗಾರಿ ವಿಭಾಗದ ಕಛೇರಿಗಳಿದ್ದು, ಇದರ ಮಧ್ಯದಲ್ಲಿ ಸುಮಾರು 16.00x11.50 ಮೀ ಅಳತೆಯ ಖಾಲಿ ಜಾಗವಿದ್ದು ಇದರಲ್ಲಿ 2.0x1.0 ಮೀ ಅಳತೆಯ ಜಾಗವನ್ನು ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪಿಸಲು ಸ್ಥಳದ ನಕ್ಷೆಯೊಂದಿಗೆ ಅನುಮೋದನೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ವಾರ್ಡ್-117ರಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿ ಸ್ಥಾಪಿಸಲು ಅನುಮತಿ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 26-09-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 71 (240)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಗೆ ನೀಡಲಾಗಿರುವ ಗುತ್ತಿಗೆಯ ಷರತ್ತು ಉಲ್ಲಂಘಿಸಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ದಿನಾಂಕ:10-06-2011 ರಂದು ಟಿಪ್ಪಣಿ ಮಂಡಿಸಲಾಗಿರುತ್ತದೆ.

ದಿನಾಂಕ:14-06-2011 ರಂದು ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಸಂಸ್ಥೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸಿಎಲ್-4 ಸನ್ನದನ್ನು ನೀಡಿದ್ದು, ಇದರ ಅವಧಿಯು ದಿನಾಂಕ:30-06-2011 ರವರೆಗೆ ಮಾತ್ರವಿರುತ್ತದೆ. ಪಾಲಿಕೆಯ ಆಯುಕ್ತರು, ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಮಧ್ಯಪಾನ ಪರವಾನಿಗೆ ರದ್ದುಪಡಿಸುವ ಕುರಿತು ನಡೆದ ಚರ್ಚೆಯ ಹಿನ್ನಲೆಯಲ್ಲಿ ದಿನಾಂಕ:20-06-2011 ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಈ ಸಂಸ್ಥೆಗೆ ನೀಡಲಾಗಿರುವ ಮಧ್ಯಪಾನ ಪರವಾನಗಿಯನ್ನು ನವೀಕರಿಸಬಾರದು ಎಂಬುದಾಗಿ ಕೋರಲಾಗಿತ್ತು. ಇದರ ಅನ್ವಯ ಸಿಎಲ್-4 ಪರವಾನಿಗೆಯನ್ನು ನವೀಕರಿಸಲಾಗಿರುವುದಿಲ್ಲ.

ದಿನಾಂಕ:23-08-2011 ರಂದು ನಡೆದ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಈ ಸಂಸ್ಥೆಗೆ ನೀಡಿರುವ ಮಧ್ಯಪಾನ ಪರವಾನಗಿಯನ್ನು ನವೀಕರಿಸದೆ ಇರುವುದು ಸಮಂಜಸವಲ್ಲ ಹಾಗೂ ನಗರದ ಇಂತಹ ಇತರೆ ಸಂಸ್ಥೆಗಳಿಗೆ ನೀಡಲಾಗಿರುವ ಪರವಾನಗಿಯನ್ನು ರದ್ದುಪಡಿಸದೆ ಇದ್ದು, ಈ ಸಂಸ್ಥೆಗೆ ಮಾತ್ರ ಈ ರೀತಿಯ ಕ್ರಮ ಜರುಗಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯ ನೀಡುತ್ತಾ, ಪಾಲಿಕೆಯವರು ಮಧ್ಯಪಾನ ಪರವಾನಗಿಯನ್ನು ನವೀಕರಿಸುವಂತೆ ಸಂಬಂಧಿಸಿದವರಿಗೆ ಪ್ರಸ್ತಾಪಿಸುವ ನಿರ್ದೇಶನ ನೀಡಿರುತ್ತಾರೆ.

ಈ ವಿಷಯವು ಪಾಲಿಕೆಯ ಸಭೆಗೆ ಮಂಡಿಸಿ, ಸೂಕ್ತ ತೀರ್ಮಾನ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯವರಿಗೆ ಸಿಎಲ್-4 ಪರವಾನಿಗೆ ನೀಡಿರುವುದನ್ನು ನವೀಕರಿಸಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾಪಿಸುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-08-2011 ರ ಟಿಪ್ಪಣಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿ ತೀರ್ಮಾನ ಕೈಗೊಳ್ಳಲು ಸಲ್ಲಿಸಲಾಗಿರುವ ಮಾನ್ಯ ಆಯುಕ್ತರ ದಿನಾಂಕ:27-08-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)

ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 72 (160)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಈ ಹಿಂದೆ ತಯಾರಿಸಲ್ಪಟ್ಟ "Capital Investment Plan for Bangalore" ಗೆ ಈಗಾಗಲೇ ಸರ್ಕಾರದಿಂದ ರೂ.22,000/- ಕೋಟಿಯ ಯೋಜನೆಗಳಿಗೆ ತಾತ್ವಿಕ ಅನುಮೋದನೆಯನ್ನು ಆದೇಶ ಸಂಖ್ಯೆ: UDD/371/MNY/2009, ದಿನಾಂಕ:21-10-2009 ರಂತೆ ಪಡೆಯಲಾಗಿರುತ್ತದೆ. ಸದರಿ "Capital Investment Plan" ನಲ್ಲಿ ಬೆಂಗಳೂರು ನಗರದಲ್ಲಿನ ಸಂಚಾರದ ಒತ್ತಡವನ್ನು ಕಡಿಮೆಗೊಳಿಸಲು ಬೃಹತ್ ನೀರುಗಾಲುವೆಯ ಕಾರಿಡಾರ್‌ಗಳ ಮೇಲೆ ಎಲಿವೇಟೆಡ್ ರಸ್ತೆ ನಿರ್ಮಾಣ ಮಾಡುವ ಯೋಜನೆಗಳನ್ನು ಪ್ರಸ್ತಾಪಿಸಲಾಗಿರುತ್ತದೆ.

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ದಿನಾಂಕ:20-10-2010 ರಂದು ಪತ್ರ ಬರೆದು, ಬೃಹತ್ ನೀರುಗಾಲುವೆಯ ಕಾರಿಡಾರ್‌ಗಳ ಮೇಲೆ ಎಲಿವೇಟೆಡ್ ರಸ್ತೆ ನಿರ್ಮಾಣದ ಯೋಜನೆ ರೂಪಿಸಿ, ಕಾರ್ಯಗತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಾಡಲು ಪಾಲಿಕೆಯಿಂದ ನಿರಾಕ್ಷೇಪಣೆಯನ್ನು ನೀಡಲು ವಿನಂತಿಸಿರುತ್ತಾರೆ.

ಆದುದರಿಂದ, ಬೃಹತ್ ನೀರುಗಾಲುವೆಗಳ ಕಾರಿಡಾರ್‌ಗಳ ಮೇಲೆ ಎಲಿವೇಟೆಡ್ ರಸ್ತೆ ಕಾರಿಡಾರ್ ನಿರ್ಮಾಣದ ಯೋಜನೆ ಹಾಗೂ ಕಾರ್ಯಾನುಷ್ಠಾನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಪಾಲಿಕೆಯಿಂದ ನಿರಾಕ್ಷೇಪಣೆಯ ಪತ್ರ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-06-2011 ರ ಟಿಪ್ಪಣಿ ಹಾಗೂ ಬೃಹತ್ ನೀರುಗಾಲುವೆಗಳ ಮೇಲೆ ಎಲಿವೇಟೆಡ್ ರಸ್ತೆ ಕಾರಿಡಾರ್ ನಿರ್ಮಾಣದ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದಲೇ ಅನುಷ್ಠಾನಗೊಳಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸಲಾಗಿರುತ್ತದೆ. ಆದಕಾರಣ, ಇದರ ಸಾಧಕ ಬಾಧಕಗಳ ಬಗ್ಗೆ ಪಾಲಿಕೆಯ Technical Advisory Committee ಯಿಂದ ಹಾಗೂ ಸದರಿ ಕಾಮಗಾರಿ ಬಗ್ಗೆ ಪರಿಣಿತಿ ಹೊಂದಿರುವ ತಜ್ಞರಿಂದ ಸೂಕ್ತ ಅಭಿಪ್ರಾಯ ಪಡೆದು ಮರುಮಂಡಿಸುವಂತೆ ಆಯುಕ್ತರವರನ್ನು ಕೋರುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:21-06-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:21-06-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 73 (241)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ದಾಸರಹಳ್ಳಿ ವಲಯದ ದಾಸರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಅಪಜೀ 348 ಇಸಿಬಿ 2006, ಬೆಂಗಳೂರು, ದಿನಾಂಕ:30-04-2008 ರಂತೆ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ಅಭಿವೃದ್ಧಿ ಕಾರ್ಯದ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದ ಆದೇಶದಂತೆ "ಕೆರೆ ಅಭಿವೃದ್ಧಿ ಪ್ರಾಧಿಕಾರ"ರವರಿಂದ ದಿನಾಂಕ:20-08-2008 ರ ಪತ್ರದಂತೆ, ಸದರಿ ಕೆರೆಯ ಯೋಜನಾ ವರದಿಯನ್ನು ಮೊತ್ತ ರೂ.956.80 ಲಕ್ಷಗಳಿಗೆ ತಯಾರಿಸಿ, ಅನುಮೋದನೆಯನ್ನು ಪಡೆಯಲಾಗಿರುತ್ತದೆ ಹಾಗೂ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಅಂದಾಜು ಮೊತ್ತ ರೂ.956.80 ಲಕ್ಷಗಳಿಗೆ ಮಾನ್ಯ ಆಡಳಿತಗಾರರು ದಿನಾಂಕ:11-07-2008 ರಂದು ವಿಷಯ ಸಂಖ್ಯೆ:311/2008-09 ರಲ್ಲಿ ರೂ.956.80ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

ಸದರಿ ದಾಸರಹಳ್ಳಿ ಕೆರೆಯ ಗಡಿ ಭಾಗಕ್ಕೆ ತಂತಿ ಬೇಲಿ ಅಳವಡಿಸಲು ತಾಲ್ಲೂಕು ಸರ್ವೆಯರ್‌ರವರಿಂದ ಸರ್ವೆ ಕಾರ್ಯ ಕೈಗೊಂಡು, ಒಟ್ಟು 6 ಎಕರೆ 12.5 ಗುಂಟೆ ಒತ್ತುವರಿ ಗುರುತಿಸಲಾಗಿದ್ದು, ಈ ಪೈಕಿ ದಿನಾಂಕ: 23-03-2011 ರಂದು ಕೆರೆಯಲ್ಲಿನ ಒಟ್ಟು 4 ಎಕರೆ ಪ್ರದೇಶದಲ್ಲಿನ ಅನಧಿಕೃತ ಕಟ್ಟಡ, ನಿವೇಶನ / ವಾಣಿಜ್ಯ ಮಳಿಗೆಗಳನ್ನು ತೆರವುಗೊಳಿಸಿ ಕೆರೆಯ ಗಡಿ ಭಾಗಕ್ಕೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ.

ಸದರಿ ಕೆರೆಗೆ ಪೀಣ್ಯ ಕೈಗಾರಿಕಾ ಪ್ರದೇಶದಿಂದ ಕೊಳಚೆ ನೀರು ಬರುತ್ತಿದ್ದು, ಸದರಿ ನೀರನ್ನು ಸಂಸ್ಕರಿಸಿ ಸದಾ ಕೆರೆಯಲ್ಲಿ ನೀರನ್ನು ಜೀವಂತವಾಗಿಸಲು ಕೆರೆಯಲ್ಲಿ 1 MLD ಸಾಮರ್ಥ್ಯದ ನೀರು ಸಂಸ್ಕರಣಾ ಘಟಕ (Water Reclamation Plant) ಅನ್ನು ಸ್ಥಾಪಿಸಲು ಐದು ವರ್ಷಗಳ ನಿರ್ವಹಣೆಯೊಂದಿಗೆ DBFOT/ Annuity ಮಾದರಿಯಲ್ಲಿ ಸ್ಥಾಪಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ದಾಸರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಗೆ ಗುತ್ತಿಗೆದಾರರನ್ನು ನಿಯೋಜಿಸಲಾಗಿ, ಕೆರೆಯಲ್ಲಿನ ಅನುಪಯುಕ್ತ ಹೂಳನ್ನು ತೆಗೆಯಲಾಗಿರುತ್ತದೆ ಹಾಗೂ ಕೆರೆಗೆ ಕೊಳಚೆ ನೀರು ಬಾರದಂತೆ ಪೈಪ್ ಲೈನ್ ಮುಖಾಂತರ ಬೇರ್ಪಡಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಯನ್ನು ಗುತ್ತಿಗೆದಾರರು, ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ವಿಫಲರಾದ ಹಿನ್ನೆಲೆಯಲ್ಲಿ ದಿನಾಂಕ:28-07-2011 ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:35(108)/ 2011-12 ರಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲು, ಗುತ್ತಿಗೆದಾರರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಗುತ್ತಿಗೆಯಲ್ಲಿನ ಬಾಕಿ ಕಾಮಗಾರಿಗಳನ್ನು Risk & Cost ನಲ್ಲಿ ಕೈಗೊಳ್ಳಲು ಹಾಗೂ ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ. ಅಂತೆಯೇ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1ರ ಬಾಕಿ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದು, 2011ನೇ ಸಾಲಿನ ಮಳೆಗಾಲದ ನಂತರ ಹಂತ-1ರ ಬಾಕಿ ಕಾಮಗಾರಿ ಕೈಗೊಳ್ಳಲು ಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು, ಕೆರೆ ಅಭಿವೃದ್ಧಿಯ ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸದರಿ ದಾಸರಹಳ್ಳಿ ಕೆರೆಯ 2ನೇ ಹಂತದ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ 2012ನೇ ಸಾಲಿನಲ್ಲಿ ಬರುವ ಮಳೆ

ನೀರನ್ನು ಕೆರೆಯಲ್ಲಿ ಸಂಗ್ರಹಿಸಲು ಅನುವಾಗುತ್ತದೆ ಹಾಗೂ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿನ ಬಹುತೇಕ ಬಡಾವಣೆಗಳಲ್ಲಿನ ಅಂತರ್ಜಲ ಮಟ್ಟವನ್ನು ಸುಧಾರಿಸುವ ಹಿತದೃಷ್ಟಿಯಿಂದ ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಪಿ-2175 ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಕಾಮಗಾರಿ ಸಂಕೇತ ಪಡೆಯಲು ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 74 (242)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಿನ್ನಪ್ಪನಹಳ್ಳಿ ಕೆರೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಒಟ್ಟು ಮೊತ್ತ ರೂ.232.86 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಸದರಿ ಕೆರೆಯನ್ನು 3 ವರ್ಷಗಳ ನಿರ್ವಹಣೆಗಾಗಿ ಮೆ॥ಸಿಮೆನ್ಸ್ ಇಂಡಿಯಾ ಲಿಮಿಟೆಡ್‌ರವರೊಂದಿಗೆ ಸೌಹಾರ್ದ ಒಡಂಬಡಿಕೆ (ಎಂ.ಓ.ಯು.) ಮಾಡಿಕೊಳ್ಳಲಾಗಿರುತ್ತದೆ. ಸದರಿ ಒಪ್ಪಂದದಡಿಯಲ್ಲಿ ಮೀನುಗಾರಿಕೆ ನಿಷೇಧ ಎಂಬ ಒಪ್ಪಂದವನ್ನು ಸಹ ಅಳವಡಿಸಿಕೊಳ್ಳಲಾಗಿರುತ್ತದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಜಯನಗರ, ಬೆಂಗಳೂರು ರವರು ಶ್ರೀ.ಶ್ರೀನಿವಾಸ್ ಬಿನ್ ವೇಲು ಎಂಬುವವರಿಗೆ ಚಿನ್ನಪ್ಪನಹಳ್ಳಿ ಕೆರೆಯಲ್ಲಿ ಮೀನುಗಾರಿಕೆ ಪಾಶುವಾರು ಹಕ್ಕನ್ನು ನೀಡಿರುತ್ತಾರೆ. ಇದರಿಂದ ಮೆ॥ಸಿಮೆನ್ಸ್ ಇಂಡಿಯಾ ಸಂಸ್ಥೆಯವರು ಒಡಂಬಡಿಕೆಯ ಒಪ್ಪಂದದಂತೆ ಮೀನುಗಾರಿಕೆಯನ್ನು ತಡೆಹಿಡಿಯಲು ಅಗ್ರಹಿಸುತ್ತಿರುತ್ತಾರೆ.

ಈ ಸಂಬಂಧವಾಗಿ, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರಿಗೆ, ದಿನಾಂಕ:18-04-2011 ರಂದು, ಮೀನುಗಾರಿಕೆ ಹಕ್ಕನ್ನು ರದ್ದುಪಡಿಸುವಂತೆ ಕೋರಿ ಪತ್ರ ಬರೆದರೂ ಸಹ ಮೀನು ಪಾಶುವಾರು ಹಕ್ಕನ್ನು ಮುಂದುವರೆಸಿರುತ್ತಾರೆ. ಆಹಾರಕ್ಕಾಗಿ ವಿವಿಧ ಜಾತಿಯ ಪಕ್ಷಿಗಳು ಕೆರೆಗೆ ಬರುತ್ತಿದ್ದು, ಮೀನುಗಾರಿಕೆಯಿಂದ ಅವುಗಳಿಗೆ ಅಡಚಣೆಯಾಗುತ್ತಿರುತ್ತದೆ. ಮೀನುಗಳನ್ನು ಅವಲಂಬಿಸಿರುವ ಇತರೆ ಜಲಚರ ಪ್ರಾಣಿಗಳು ಸಹ ಕೆರೆಯಲ್ಲಿದ್ದು, ಮೀನುಗಾರಿಕೆಯಿಂದ ಅವುಗಳ ಚಲನವಲನ ಮತ್ತು ವಂಶಾಭಿವೃದ್ಧಿಗೆ ಅಡಚಣೆ ಉಂಟಾಗಿ ಪರಿಸರಕ್ಕೆ ಹಾನಿಯಾಗುತ್ತಿರುತ್ತದೆ.

ಆದುದರಿಂದ, ಪಾಲಿಕೆ ಅಭಿವೃದ್ಧಿಗೊಳಿಸಿರುವ ಕೆರೆಗಳಲ್ಲಿ ಮೀನುಗಾರಿಕೆಗೆ ಅನುಮತಿ ನೀಡದಂತೆ ಮೀನುಗಾರಿಕೆ ಇಲಾಖೆಗೆ ನಿರ್ದೇಶನ ನೀಡಲು ಆದೇಶಿಸುವಂತೆ ಕೋರಿ ಸರ್ಕಾರದಿಂದ ಆದೇಶ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯವನ್ನು ಒಪ್ಪುತ್ತಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆರವರು ನೀಡಿರುವ ಮೀನುಗಾರಿಕೆ ಪಾಶುವಾರು ಹಕ್ಕನ್ನು ಹಿಂಪಡೆಯಲು ಹಾಗೂ ಕಾನೂನು ಉಲ್ಲಂಘಿಸಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಿರುದ್ಧ ಕ್ರಮಕ್ಕೈಗೊಳ್ಳುವಲ್ಲಿ ಆಯುಕ್ತರು ಸೂಕ್ತ ಕ್ರಮ ತೆಗೆದುಕೊಳ್ಳುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:10-11-2011 ರ ನಿರ್ಣಯವನ್ನು ಒಪ್ಪುತ್ತಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆರವರು ನೀಡಿರುವ ಮೀನುಗಾರಿಕೆ ಪಾಶುವಾರು ಹಕ್ಕನ್ನು ಹಿಂಪಡೆಯಲು ಹಾಗೂ ಕಾನೂನು ಉಲ್ಲಂಘಿಸಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಲ್ಲಿ ಆಯುಕ್ತರು ಸೂಕ್ತ ಕ್ರಮ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 76 (244)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹದೇವಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾಡುಗೋಡಿ ವಾರ್ಡ್ ನಂ.83ರ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತವು ರೂ.398.50 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರು ದಿನಾಂಕ:07-02-2009 ರಂದು ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಮೊತ್ತ ರೂ.3,38,87,499.00 ಗಳಿಗೆ ಅನುಷ್ಠಾನಗೊಳಿಸಲು ಮೆ॥ ಅಜಯ್ ಎಂಟರ್‌ಪ್ರೈಸಸ್ (ರಾಮಯ್ಯ) ರವರಿಗೆ ದಿನಾಂಕ:01-01-2010 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

ಕಾಮಗಾರಿಯನ್ನು ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಿದ್ದರು ಸಹ ಕಾಮಗಾರಿಯ ಅಕ್ಕಪಕ್ಕದ ಭೂ ಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ಕೆಲಸವನ್ನು ಸ್ಥಗಿತಗೊಳಿಸಲಾಗಿರುತ್ತದೆ. ತದನಂತರ, ಸಂಬಂಧಪಟ್ಟ ಭೂ ಮಾಲೀಕರು ಮತ್ತು ಸ್ಥಳೀಯ ಚುನಾಯಿತ ಪ್ರತಿನಿಧಿಗಳೊಂದಿಗೆ ಚರ್ಚಿಸಲಾಗಿ ಪಾಲಿಕೆಯ ನಿಯಮಾವಳಿಗಳಂತೆ ಭೂ ಮಾಲೀಕರು ಟಿಡಿಆರ್ ಪಡೆದು ಭೂಮಿಯನ್ನು ರಸ್ತೆಗೆ ಹಸ್ತಾಂತರಿಸಲು ಮುಂದೆ ಬಂದಿದ್ದು, ಕಾಮಗಾರಿಯನ್ನು ಪುನರ್ ಪ್ರಾರಂಭಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ವಿಳಂಭವಾಗಿರುತ್ತದೆ. ಆದ್ದರಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅವಧಿಯನ್ನು ದಂಡ ರಹಿತವಾಗಿ ದಿನಾಂಕ:30-10-2011 ರವರೆಗೆ ಅನುಮೋದನೆ ನೀಡಲಾಗಿರುತ್ತದೆ.

ಮಂಜೂರಾದ ಅಂದಾಜು ಪಟ್ಟಿಯಂತೆ ರಸ್ತೆಯ ಒಟ್ಟು ಉದ್ದವು 1800 ಮೀ ಇದ್ದು, ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸಬೇಕಾಗಿದುದರಿಂದ, ರಸ್ತೆಯ ಒಟ್ಟು ಉದ್ದದಲ್ಲಿ 327ಮೀ ಹೆಚ್ಚುವರಿಯಾಗಿರುತ್ತದೆ. ರಸ್ತೆಯ ಕಾಮಗಾರಿಯನ್ನು ಸ್ಥಳೀಯ ಪ್ರದೇಶಗಳಿಗೆ ಅನುಗುಣವಾಗಿ ನಿರ್ವಹಿಸುತ್ತಿರುವುದರಿಂದ ಕಾಮಗಾರಿಯ ಉದ್ದ ಮತ್ತು ಅಗಲದಲ್ಲಿ ಹೆಚ್ಚುವರಿಯಾಗಿದ್ದು ಕಾಮಗಾರಿಯಲ್ಲಿರುವ ಕೆಲವು ಅಂಶಗಳಲ್ಲಿ ಮತ್ತು ಮಂಜೂರಾಗಿರುವ ಅಂದಾಜು ಪಟ್ಟಿಯ ಮೊತ್ತದೊಳಗೆ ಉಳಿತಾಯವಾಗಿದ್ದು ಈ ಅಂಶಗಳಿಗೆ ಪ್ರತ್ಯೇಕವಾಗಿ ವರ್ಕ್‌ಸ್ಲೀಪ್ ಮತ್ತು ಇಐಆರ್‌ಎಲ್ ನಲ್ಲಿ ವಿವರಿಸಲಾಗಿದ್ದು ಅನುಮೋದನೆ ನೀಡಲಾಗಿರುತ್ತದೆ. ಅಲ್ಲದೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರು ಡಿಸೆಂಬರ್ 2010 ರಲ್ಲಿ ಪರಿವೀಕ್ಷಣೆಗೆ ಬಂದಾಗ ಅಂದಾಜಿನಲ್ಲಿ ಲೈನ್ ಮಾರ್ಕಿಂಗ್ ಇಲ್ಲದಿದ್ದನ್ನು ಗಮನಿಸಿ, ಲೈನ್ ಮಾರ್ಕಿಂಗ್ (ವೈಟ್‌ಲೈನ್) ಹಾಕುವಂತೆ ಆದೇಶ ನೀಡಲಾಗಿದ್ದು, ಅವರ ಆದೇಶವನ್ನು ಸಹ ಪಾಲಿಸಿ ಕಾಮಗಾರಿಯಲ್ಲಿ ಅಳವಡಿಸಲಾಗಿರುತ್ತದೆ.

ಈ ಎಲ್ಲಾ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

1) ಸದರಿ ಕಾಮಗಾರಿಯ ಸ್ಥಳಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸುವ ಹಂತದಲ್ಲಿ ಆದ ಅಂಶಗಳ ಬದಲಾವಣೆಯನ್ನು ಪರಿಗಣಿಸಿ ಪರಿಷ್ಕೃತ ಅಂದಾಜು ಮೊತ್ತ ರೂ.3,60,37,852-00 ಗಳಿಗೆ ಅನುಮೋದನೆ ನೀಡುವುದು.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯಕವಿದ್ದು, ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ

. . . .2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-10-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:04-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:04-11-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:04-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 77 (245)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೇಂದ್ರ ಸರ್ಕಾರದ ಜೆ.ನರ್ಮ್ ಅಭಿಯಾನದಡಿಯಲ್ಲಿ ನಗರ ಪಾಲಿಕೆಗಳ ಆಡಳಿತದಲ್ಲಿ ಸುಧಾರಣೆ ಹಾಗೂ ಪಾರದರ್ಶಕತೆಯನ್ನು ತರಲು ಗಣಕೀಕರಣ ವ್ಯವಸ್ಥೆ ಅಳವಡಿಸಿಕೊಳ್ಳುವುದು ಒಂದು ಭಾಗವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನಗರ ಪಾಲಿಕೆಗಳು ಡೇಟಾ ಸೆಂಟರ್ ಹಾಗೂ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ. ಒಟ್ಟು ಯೋಜನಾ ಮೊತ್ತವನ್ನು ಮೂರು ಭಾಗವಾಗಿ ಮಾಡಿ, ಕೇಂದ್ರ ಸರ್ಕಾರವು ಶೇಕಡ 35, ರಾಜ್ಯ ಸರ್ಕಾರವು ಶೇಕಡ 15 ಹಾಗೂ ನಗರ ಪಾಲಿಕೆಗಳು ಶೇಕಡ 50 ಭರಿಸಬೇಕಾಗಿರುತ್ತದೆ.

ಈ ಸಂಬಂಧ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಡಾಟಾ ಸೆಂಟರ್ ಹಾಗೂ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಿದ್ದು, ಯೋಜನಾ ಅವಧಿಯು ಮೂರು ವರ್ಷಗಳಾಗಿದ್ದು, ಯೋಜನೆಯ ಒಟ್ಟು ಮೊತ್ತ ರೂ.17.20 ಕೋಟಿ, ಅದರಲ್ಲಿ ಪಾಲಿಕೆಯು ರೂ.8.60 ಕೋಟಿ ಭರಿಸಬೇಕಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಟ್ಟಿರುತ್ತದೆ. ಯೋಜನಾ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 78 (246)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ದಕ್ಷಿಣ ತಾಲ್ಲೂಕ್ ರಾಜರಾಜೇಶ್ವರಿ ನಗರ ವಲಯದ ಹಲಗೇವಡೇರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಮುಖ್ಯ ಅಭಿಯಂತರರು ಪರಿಸರ ಕೋಶ, ಕೆರೆಗಳು ರವರು ರೂ.299.80 ಲಕ್ಷಗಳ ಅಂದಾಜು ಪಟ್ಟಿಗೆ 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ-ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಇಬ್ಬರು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ-ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.2,69,12,607.11 ಗಳಾಗಿದ್ದು, ಇದರ ಕಾಮಗಾರಿ ಪ್ರಮಾಣ ಸಂಖ್ಯೆ: 308-11-000007 ಆಗಿದ್ದು, ಈ ಕಾಮಗಾರಿಯ ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ ರವರು ಶೇಕಡ 7.20 ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು ಪರಿಸರ ಕೋಶ-ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.2,49,74,384.43 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್ಎನ್‌ವೈ/ 2007 (ಭಾ) ದಿನಾಂಕ:11-05-2009ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010, ದಿನಾಂಕ:02-04-2011ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ ರವರು 2010-11ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 7.20% ರಷ್ಟು ಕಡಿಮೆ ದರಗಳು ಅಥವಾ ರೂ.2,49,74,384.43 (ರೂ. ಎರಡು ಕೋಟಿ ನಲವತ್ತೊಂಭತ್ತು ಲಕ್ಷದ ಎಪ್ಪತ್ನಾಲ್ಕು ಸಾವಿರದ ಮುನ್ನೂರ ಎಂಭತ್ನಾಲ್ಕು ಮತ್ತು ನಲವತ್ಮೂರು ಪೈಸೆಗಳು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:08-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

. . . .2

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:08–09–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:08–09–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 79 (247)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯು ಮೈಸೂರು ರಸ್ತೆಯಲ್ಲಿ ಕೆಂಗೇರಿಯಿಂದ ಪ್ರಾರಂಭಗೊಂಡು ಕೆಂಗೇರಿ ಉಪನಗರ ಹೊಯ್ಸಳ ವೃತ್ತ, ನೇತಾಜಿ ನಗರ, ನಾಗದೇವನಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ ಪಶ್ಚಿಮ ದ್ವಾರ, ಮರಿಯಪ್ಪನಪಾಳ್ಯ, ಉಲ್ಲಾಳು ಕ್ರಾಸ್, ಮಲ್ಲತಹಳ್ಳಿ ಕ್ರಾಸ್, ಕೆಂಗುಟ್ಟೆ, ಅಂಬೇಡ್ಕರ್ ಕಾಲೇಜ್, ಪಾಪರೆಡ್ಡಿ ಪಾಳ್ಯ, ಕೆ.ಎಲ್.ಇ ವಿದ್ಯಾಸಂಸ್ಥೆಗಳು, ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್, ವಿಶ್ವೇಶ್ವರಯ್ಯ ಕಾನೂನು ಕಾಲೇಜ್, ಶ್ರೀಗಂಧದ ಕಾವಲ್ ಪಿ.ಯು ಕಾಲೇಜು ಮಾರ್ಗ, ಶ್ರೀಗಂಧದ ಕಾವಲ್ ಬಳಿ ಮಾಗಡಿ ಮುಖ್ಯ ರಸ್ತೆಯನ್ನು ಸಂಪರ್ಕಿಸುತ್ತದೆ. ನಂತರ ಮಾಗಡಿ ರಸ್ತೆಯಲ್ಲಿ ಹಾದು ಪುನ: ಸುಮನಹಳ್ಳಿ ಬಳಿಯಿಂದ ರಿಂಗ್ ರಸ್ತೆಯಾಗಿ ಪ್ರಾರಂಭಗೊಂಡು ಚೌಡೇಶ್ವರಿ ನಗರ, ಕೆಂಪೇಗೌಡ ನಗರ, ಲಗ್ಗೆರೆ, ಸ್ವಾತಂತ್ರ್ಯ ಯೋಧರ ನಗರ, ಡಾ|| ರಾಜ್ ಕುಮಾರ್ ಸಮಾಧಿ ಮಾರ್ಗ ತುಮಕೂರು ರಸ್ತೆಯನ್ನು ಸಂಪರ್ಕಿಸುತ್ತದೆ. ಈ ರಿಂಗ್ ರಸ್ತೆಯು ಮೇಲೆ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯ ಹಾಗೂ ತುಮಕೂರು ರಸ್ತೆಯನ್ನು ಮತ್ತು ಏಷ್ಯಾದಲ್ಲಿಯೇ ಪ್ರಮುಖ ಕೈಗಾರಿಕಾ ವಸಾಹತುವಾದ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಬಾರಿ ಸಂಚಾರದ ಒತ್ತಡವಿರುವ ಹೊರವರ್ತುಲ ರಸ್ತೆಯಾಗಿದೆ. ರಿಂಗ್ ರಸ್ತೆಯ ಮೈಸೂರು ರಸ್ತೆ, ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಭಾಗವು ದ್ವಿಮುಖ ಸಂಚಾರದ ಎರಡು ಪಥದ, ವಿಶೇಷವಾಗಿ ಬಾರಿ ಸರಕು ಸಾಗಣೆ ವಾಹನಗಳು, ಲಾರಿಗಳು, ನೂರಾರು ಬಿ.ಎಂ.ಟಿ.ಸಿ ಬಸ್ಸುಗಳು ಸಂಚರಿಸುತ್ತವೆ. ಈ ರಸ್ತೆ ಭಾಗದಲ್ಲಿ ರಸ್ತೆಯ ಎರಡು ಬದಿಗಳು ಸೇರಿದಲ್ಲಿ ಒಟ್ಟಾರೆ 33 ಬಸ್ ನಿಲುಗಡೆಗಳಿದ್ದು, ಬಸ್‌ಗಳ ಸಂಚಾರ ನಿಲುಗಡೆಗಳಿರುತ್ತವೆ. ರಿಂಗ್ ರಸ್ತೆಯನ್ನು ಹೊಂದಿಕೊಂಡಂತೆ, ನೂರಾರು ಜನ ವಸತಿಗಳು, ಬೆಂಗಳೂರು ವಿಶ್ವವಿದ್ಯಾಲಯ ಒಳಗೊಂಡಂತೆ, ಹಲವಾರು ವಿದ್ಯಾಸಂಸ್ಥೆಗಳು, ಪ್ರೌಢಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್/ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಕಾಲೇಜುಗಳು, ಬಹಳಷ್ಟು ವಾಣಿಜ್ಯ ಮಳಿಗೆ ಹಾಗೂ ಸಂಕೀರ್ಣಗಳು, ಇತ್ಯಾದಿಗಳಿಗೆ ಈ ರಿಂಗ್ ರಸ್ತೆಯ ಸಂಪರ್ಕ ನಾಡಿಯಾಗಿರುತ್ತದೆ. ಮುಂದುವರೆದ ಭಾಗವಾಗಿ ವಾಣಿಜ್ಯ ಮಳಿಗೆಗಳು, ದರ್ಶಿನಿಗಳು, ಹೋಟೆಲ್‌ಗಳು, ಪೆಟ್ರೋಲ್ ಪಂಪ್‌ಗಳು, ಮಾರುಕಟ್ಟೆಗಳು, ಸಿನಿಮಾ ಮಂದಿರಗಳು ಸಹ ತಳವೂರುತ್ತಿರುತ್ತವೆ.

ಮೇಲೆ ವಿವರಿಸಿರುವಂತೆ, ಇತ್ತೀಚಿನ ದಿನಗಳಲ್ಲಿ ಈ ರಸ್ತೆಯಲ್ಲಿ ಭಾರಿ ವಾಹನಗಳ ಹಾಗೂ ಬಹಳಷ್ಟು ವಾಹನಗಳ ಸಂಚಾರದಟ್ಟಣೆ ಹೆಚ್ಚುತ್ತಿದ್ದು, ವೇಗ ಸಂಚಾರವು ಹೆಚ್ಚಾಗಿರುವುದರಿಂದ ಸಾರ್ವಜನಿಕರು, ಅದರಲ್ಲೂ ಶಾಲಾ ಮಕ್ಕಳು, ಮಹಿಳೆಯರು ಮತ್ತು ಹಿರಿಯನಾಗರಿಕರು ಪಾದಚಾರಿ ಮಾರ್ಗವನ್ನು ಬಳಸುವುದು ಅನಿವಾರ್ಯವಾಗಿದೆ. ಆದರೆ ಹಾಲಿ ಇರುವ ಪಾದಚಾರಿ ಮಾರ್ಗ ಸಮತಟ್ಟಾಗಿರದೆ, ಏರಿಳಿತಗಳಿಂದ, ಬಹಳೆಡೆ ಗುಂಡಿಗಳಿಂದ, ಕಟ್ಟಡ ಸಾಮಾಗ್ರಿಗಳು/ಭಗ್ನಾವಶೇಷಗಳಿಂದ, ಫುಟ್‌ಪಾತ್ ವ್ಯಾಪಾರದಿಂದ, ಶಿಥಿಲ ತೋಳು ಚರಂಡಿಗಳಿಂದ, ಮುರಿದ ಕರ್ಬುಗಳಿಂದ ಇದ್ದು, ಇದರಿಂದಾಗಿ ಪಾದಚಾರಿಗಳಿಗೆ ನಡೆಯುವುದು ಕಷ್ಟ ಸಾಧ್ಯವಾಗಿದೆ. ಸ್ವಲ್ಪ ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿದೆ ಎನ್ನಬಹುದಾದ ಪಾದಚಾರಿ ಮಾರ್ಗದಲ್ಲಿಯೂ ವಿದ್ಯುತ್ ಕಂಬಗಳು, ಟ್ರಾನ್ಸಫಾರ್ಮರ್‌ಗಳು ಮತ್ತಿತರ ಅಡೆತಡೆಗಳು ಕಾಲ್ನಡಿಗೆಯ ಆಸೆಗೆ ತಣ್ಣೀರು ಎರಚುವಂತಿವೆ. ಸದಾ ಅಪಾಯಕ್ಕೆ ಆಹ್ವಾನ ನೀಡುವಂತಿವೆ.

ನಾಗರಿಕರ ಆರೋಗ್ಯದ ದೃಷ್ಟಿಯಿಂದಲೂ ಕಾಲ್ನಡಿಗೆ ಅಭ್ಯಾಸ ಬೆಳೆಸಿಕೊಂಡರೆ, ಅದಕ್ಕೆ ಪೂರಕವಾಗಿ ಪಾದಚಾರಿ ಮಾರ್ಗಗಳು ಅಭಿವೃದ್ಧಿಯಾದರೆ ಅದರಿಂದ ಸಮಾಜದ ಆರೋಗ್ಯ ಸುಧಾರಿಸಲಿದೆ. ಇದರ

ಓತೆಯಲ್ಲಿಯೇ ಸೈಕಲ್ ತುಳಿಯುವಿಕೆ ಪ್ರೇರೇಪಿಸಲು ಸೈಕಲ್ ಪಥವನ್ನು ಪಾದಚಾರಿ ಮಾರ್ಗದಲ್ಲಿ ಮಿಳಿತಗೊಳಿಸುವುದು ಇಂದಿನ ಪ್ರಸ್ತುತತೆಯಾಗಿದೆ. ಅಷ್ಟರಮಟ್ಟಿಗೆ ವಾಹನಗಳ ಓಡಾಟ ಕಡಿಮೆಯಾದರೆ ಪರಿಸರ ಮಾಲಿನ್ಯ ಕೂಡ ಕಡಿಮೆಯಾಗಲಿದೆ.

ಈ ಪಾದಚಾರಿ ಮಾರ್ಗದ ಆಧುನೀಕರಿಸಿ ಪಾದಚಾರಿಗಳಿಗೆ ನಡಿಗೆಸ್ನೇಹಿಯಾಗಿ ಪರಿವರ್ತಿಸಲು ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರುಗಳಾದ ಶ್ರೀ. ಅಂಜಿನಪ್ಪ ಕೆಂಗೇರಿ ವಾರ್ಡ್, ಶ್ರೀ. ರಾಜನ್ ಉಲ್ಲಾಳು ವಾರ್ಡ್, ಶ್ರೀ. ಎಸ್.ವೆಂಕಟೇಶ್ ಬಾಬು ಕೊಟ್ಟಿಗೆಪಾಳ್ಯ ವಾರ್ಡ್ ರವರುಗಳೂ ತಮ್ಮ ಪತ್ರ ದಿನಾಂಕ:03-04-2011, 20-04-2011 ಗಳಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಲ್ಲಿ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯ ಆದ್ಯತೆಯ ಮತ್ತು ಹೆಮ್ಮೆಯ ಯೋಜನೆಯಾದ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆಯನ್ನು ಪಾದಚಾರಿ ಮಾರ್ಗದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಎಲ್ಲಾ, ಅಂದರೆ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥ ಒಳಗೊಂಡಂತೆ ನಡಿಗೆಯ ಸ್ನೇಹಿ ಪಾದಚಾರಿ ಮಾರ್ಗದ ಉನ್ನತೀಕರಣಗೊಳಿಸಲು 2010-11 ನೇ ಸಾಲಿನ ಲೋಕೋಪಯೋಗಿ, ಬೆಂಗಳೂರು ವೃತ್ತದ ದರಪಟ್ಟಿಯ ಅನುಸಾರ ಕೆಳಕಂಡಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

1. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 0.00 ಕಿ.ಮೀ. ಯಿಂದ 2.00 ಕಿ.ಮಿ ವರೆಗೆ, ಕೆಂಗೇರಿ ವಾರ್ಡ್) – ಅಂದಾಜು ರೂ.298.00 ಲಕ್ಷಗಳು

2. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 2.00 ಕಿ.ಮೀ. ಯಿಂದ 4.50 ಕಿ.ಮಿ ವರೆಗೆ, ಉಲ್ಲಾಳು ವಾರ್ಡ್) – ಅಂದಾಜು ರೂ.290.00 ಲಕ್ಷಗಳು
3. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 4.50 ಕಿ.ಮೀ. ಯಿಂದ 7.00 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.288.00 ಲಕ್ಷಗಳು

4. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 7.00 ಕಿ.ಮೀ. ಯಿಂದ 9.80 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.360.00 ಲಕ್ಷಗಳು

ಸದರಿ ಕಾಮಗಾರಿಗಳಿಗೆ 2011-12 ನೇ ಸಾಲಿನ ಪಾದಚಾರಿ ಮಾರ್ಗ ಅಭಿವೃದ್ಧಿಯ ಲೆಕ್ಕ ಶೀರ್ಷಿಕೆ P-2193 ಅಡಿಯಲ್ಲಿ ಭರಿಸಿ ಈ ನಾಲ್ಕು ಅಂದಾಜುಗಳ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕಾದ ಹಿನ್ನಲೆಯಲ್ಲಿ, ಈ ನಾಲ್ಕು ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ

. . . .3

ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–06–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16–06–2011 ರ ನಿರ್ಣಯ ಹಾಗೂ ದಿನಾಂಕ:28–06–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ "ಆರ್ಥಿಕ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು" ತೀರ್ಮಾನಿಸಿರುವ ಸಭೆಯ ನಿರ್ಣಯ ಹಾಗೂ 2011–12ರ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–09–2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16–06–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16–06–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 82 (250)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶೇಷಾದ್ರಿ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.343.85 ಲಕ್ಷಗಳಿಗೆ ಸಂಖ್ಯೆ:ನಅಇ/603/ಎಂ.ಎನ್.ವೈ/2007, ದಿನಾಂಕ:10-03-2008 ರ ಆದೇಶದಲ್ಲಿ ಸರ್ಕಾರವು ದಿನಾಂಕ:10-03-2008 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಶ್ರೀ.ಎಂಎಸ್.ವೆಂಕಟೇಶ್ ರವರಿಗೆ ರೂ.5,33,82,189,00 ಗಳಿಗೆ ವಹಿಸಿ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಕಾಮಗಾರಿಯು ಪ್ರಗತಿಯಲ್ಲಿರುವ ವೇಳೆಯಲ್ಲಿ ಮಹಾರಾಣಿ ಕಾಲೇಜು ಜಂಕ್ಷನ್‌ನಲ್ಲಿ ಸಿಗ್ನಲ್ ಮುಕ್ತ ವಾಹನ ಚಾಲನೆ ಉದ್ದೇಶದಿಂದ ನಿರ್ಮಿಸಲಾಗುತ್ತಿದ್ದ ಫ್ರೀಕ್ಯಾಸ್ಟ್ ಬಾಕ್ಸ್ ಅಂಡರ್‌ಪಾಸ್ ಕಾಮಗಾರಿಯ ಜೊತೆಯಲ್ಲಿಯೇ, ಕೆ.ಆರ್.ವೃತ್ತದ ಬಳಿಯು ರೋಟರಿ ನಿರ್ಮಿಸಿ ಸಿಗ್ನಲ್ ಮುಕ್ತ ವಾಹನ ಸಂಚಾರ ಚಾಲನೆಯಾಗುವ ಒಂದು ಯೋಜನಾ ರೂಪುರೇಷೆಯನ್ನು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸಭೆಯಲ್ಲಿ ದಿನಾಂಕ:13-04-2009 ಮಾನ್ಯ ಆಯುಕ್ತರು ಪ್ರಸ್ತಾವನೆಯನ್ನು ಮಂಡಿಸಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಒಪ್ಪಿಗೆ ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ (ರೂ.195.00 ಲಕ್ಷಗಳ) ಕೆ.ಆರ್.ವೃತ್ತದ ರೋಟರಿ ನಿರ್ಮಾಣ ಕಾಮಗಾರಿಯು ಅಂದಾಜು ಪಟ್ಟಿಯ ಕಾಮಗಾರಿಗಳನ್ನು ತ್ವರಿತವಾಗಿ ಸಂಪೂರ್ಣಗೊಳಿಸುವ ಉದ್ದೇಶದಿಂದ, ಶೇಷಾದ್ರಿ ರಸ್ತೆಯ ಮೂಲ ಅಂದಾಜಿನಲ್ಲಿಯೇ ಇ.ಐ.ಆರ್.ಎಲ್ ಮತ್ತು ವರ್ಕ್ ಸ್ಲಿಪ್ ಮುಖಾಂತರ ಸೇರ್ಪಡಿಸಿ, ಮೂಲ ಅಂದಾಜನ್ನು ಪರಿಷ್ಕರಿಸಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆಗೆ ಅಂದಿನ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಈ ಎರಡು ಮುಖ್ಯ ಕಾರಣಗಳಿಂದ ಮೂಲ ಟೆಂಡರ್ ಮೊತ್ತ ರೂ.5,33,82,000/- ರಿಂದ ಪರಿಷ್ಕೃತ ಮೊತ್ತ ರೂ.9,64,86,000/- (ಟೆಂಡರ್ ಪ್ರೀಮಿಯಂ ಸೇರಿ) ಗಳಾಗಿರುತ್ತದೆ. ಒಟ್ಟಾರೆ ಹೆಚ್ಚುವರಿ ಮೊತ್ತ ರೂ. 4,31,04,000/- ಗಳಾಗಿರುತ್ತದೆ.

ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಎಲ್ಲಾ ಅಂಶಗಳನ್ನು ಪರಿಗಣಿಸಿ ನಿಯಮಾನುಸಾರ ಲೋಕೋಪಯೋಗಿ ಇಲಾಖೆಯ ಪ್ರಸಕ್ತ ಸಾಲಿನ ದರಪಟ್ಟಿಯಂತೆ ತಯಾರಿಸಲಾಗಿದ್ದು, ಈ ಪರಿಷ್ಕೃತ ಅಂದಾಜು ಪಟ್ಟಿಯ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ಕಾಮಗಾರಿಯ ವಿವರಗಳು | ಮೊತ್ತ |
|---|---|---|
| 01 | ಮೂಲ ಅನುಮೋದಿತ ಅಂದಾಜು ಪಟ್ಟಿಯ ಮೊತ್ತ | 3,43,85,000/- |
| 02 | ಮೂಲ ಗುತ್ತಿಗೆ ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) | 5,33,82,000/- |
| 03 | ಪರಿಷ್ಕೃತ ಅಂದಾಜು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) | 9,64,86,000/- |
| 04 | ಒಟ್ಟು ಹೆಚ್ಚುವರಿ ಮೊತ್ತ | 4,31,04,000/- |
| 05 | ಒಟ್ಟು ಶೇಕಡವಾರು ಹೆಚ್ಚುವರಿ | 80.74% |

ಸದರಿ ಹೆಚ್ಚುವರಿ ಮೊತ್ತವನ್ನು ಮೂಲ ಅಂದಾಜಿನಲ್ಲಿ ಪಾಲಿಕೆಯ 2010-11 ರ ಆಯವ್ಯಯದಲ್ಲಿ ಮೀಸಲಿಟ್ಟು, ಅದರಲ್ಲಿ ಭರಿಸಲಾಗುವುದು ಎಂದು ಅನುಮೋದನೆಗೆ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿ

ಮಂಡಿಸಲಾಗಿದ್ದು, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಶೇಷಾದ್ರಿ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ರೂ.9,64,86,000/- (ಒಂಭತ್ತು ಕೋಟಿ ಅರವತ್ನಾಲ್ಕು ಲಕ್ಷದ ಎಂಭತ್ತಾರು ಸಾವಿರ ಮಾತ್ರ) ಗಳಿಗೆ ಮಾನ್ಯ ಘನ ಸರ್ಕಾರದ ಅನುಮೋದನೆ ಪಡೆಯಬೇಕಾಗಿದುದ್ದರಿಂದ, ಸದರಿ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರು "After obtaining Government approval may be placed in the BBMP Council meeting after such approval" ಎಂದು ತೀರ್ಮಾನಿಸಲಾಗಿರುತ್ತದೆ. ಸದರಿ ತೀರ್ಮಾನದ ಹಿನ್ನಲೆಯಲ್ಲಿ, ಪರಿಷ್ಕೃತ ಅಂದಾಜಿಗೆ ಅನುಮೋದನೆಯನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರವು ಆದೇಶ ಸಂಖ್ಯೆ:ನಅಇ:390:ಎಂ.ಎನ್.ವೈ:2010, ದಿನಾಂಕ:05-05-2011 ರಂತೆ ಅನುಮೋದನೆ ನೀಡಿರುತ್ತದೆ.

ತದನಂತರ, ಕರ್ನಾಟಕ ಸರ್ಕಾರ ಸಚಿವಾಲಯ ಪತ್ರ ಸಂಖ್ಯೆ: ನಅಇ:390:ಎಂ.ಎನ್.ವೈ:2010, ದಿನಾಂಕ:04-06-2011 ರ ಪತ್ರದಂತೆ, ಸದರಿ ಅನುಮೋದನೆಗೆ ಸಂಬಂಧಪಟ್ಟಂತೆ ಪಾಲಿಕೆಯ ಆಡಳಿತಗಾರರು, ಆದೇಶಿಸಿರುವಂತೆ ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಗೆ ಘನ ಸರ್ಕಾರದ ಅನುಮೋದನೆ ದೊರಕಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ದಾಖಲಾತಿಗಾಗಿ ಮಂಡಿಸಲು ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಶೇಷಾದ್ರಿ ರಸ್ತೆಯ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯ ಪರಿಷ್ಕೃತ ಅಂದಾಜುಪಟ್ಟಿ ರೂ.9,64,86,000/- (ಒಂಭತ್ತು ಕೋಟಿ ಅರವತ್ನಾಲ್ಕು ಲಕ್ಷದ ಎಂಭತ್ತಾರು ಸಾವಿರ ಮಾತ್ರ) ಗಳಿಗೆ ಘನ ಸರ್ಕಾರವು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಸದರಿ ಆದೇಶವನ್ನು ಪಾಲಿಕೆ ಸಭೆಯಲ್ಲಿ ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (251)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ರವರು ದಿನಾಂಕ:18-07-2011 ರಂದು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ರಾಷ್ಟ್ರಕವಿ ಕುವೆಂಪುರವರ ಆಳೆತ್ತರದ ಕಂಚಿನ ಪ್ರತಿಮೆಯನ್ನು ಸ್ವಾತಂತ್ರ್ಯ ಉದ್ಯಾನವನದ ಉತ್ತರ ದಿಕ್ಕಿನಲ್ಲಿ ಪ್ರತಿಷ್ಠಾಪಿಸಲು ಸ್ಥಳಾವಕಾಶ ಕಲ್ಪಿಸಲು ಕೋರಿರುತ್ತಾರೆ.

ಸದರಿ ಮನವಿ ಮೇರೆಗೆ, ಮಾನ್ಯ ಉಪ ಮಹಾಪೌರರು ಹಾಗೂ ಮುಖ್ಯ ಅಭಿಯಂತರರು, ಪರಿಸರ ಕೋಶ (ಕೆರೆಗಳು) ರವರು ದಿನಾಂಕ:28-10-2011 ರಂದು ಚರ್ಚಿಸಿ ಸ್ಥಳ ಪರಿಶೀಲನೆ ಮಾಡಿ ಸ್ವಾತಂತ್ರ್ಯ ಉದ್ಯಾನವನದ ಪ್ರವೇಶದ್ವಾರದ ಬಲಗಡೆ ಸುಮಾರು 100 ಚ.ಅ (ನೂರು ಚ.ಅ) ಸ್ಥಳವನ್ನು ನಿಗಧಿಪಡಿಸಲಾಗಿದ್ದು, ಸದರಿ ಪ್ರಸ್ತಾವನೆಯ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (252)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಸವನಗುಡಿ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 154ರಲ್ಲಿ ಎನ್.ಆರ್.ಕಾಲೋನಿಯ ವಾರ್ಡ್ ಕಛೇರಿ ಹಾಗೂ ಅಕ್ಕಪಕ್ಕದ ಖಾಲಿ ಜಾಗವನ್ನು ಉಪಯೋಗಿಸಿಕೊಂಡು ವಿವಿಧ್ದೋದ್ದೇಶ ಬೆಂಗಳೂರು-ಒನ್ ಕಟ್ಟಡ ನಿರ್ಮಾಣ ಮಾಡಲು ಮಾನ್ಯ ನಗರ ಪಾಲಿಕೆ ಸದಸ್ಯರು ಕೋರಿರುತ್ತಾರೆ. ಅದರಂತೆ, ಸದರಿ ಸ್ಥಳದಲ್ಲಿ ವಿವಿಧ್ದೋದ್ದೇಶ ಬೆಂಗಳೂರು-ಒನ್ ಕಟ್ಟಡ ನಿರ್ಮಿಸಲು ಮೆ॥ ACE Group architects and consultancy ರವರು ಸ್ಥಳ ಪರಿಶೀಲಿಸಿ ರೂ.280.00 ಲಕ್ಷಗಳಿಗೆ ಲೋಕೋಪಯೋಗಿ ಇಲಾಖೆಯ 2010-11ನೇ ಸಾಲಿನ ದರ ಪಟ್ಟಿ ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಕಾಮಗಾರಿಯ ರೂ.280.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ದಿನಾಂಕ:06/06/2011 ರಂದು ಟೆಂಡರ್ ಪ್ರಕಟಣೆಯನ್ನು ನೀಡಿ, ಟೆಂಡರ್ ಅನ್ನು ದಿನಾಂಕ:02-07-2011 ರಂದು ತೆರೆಯಲಾಯಿತು. ಟೆಂಡರ್ ಪ್ರಕ್ರಿಯೆಯನ್ನು ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗೆ 3 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿ ಮೂರು ಜನ ಗುತ್ತಿಗೆದಾರರ ಪೈಕಿ ಶ್ರೀ.ಕೆ.ಮಧನ ಮೋಹನ ರೆಡ್ಡಿ (ಮೆ॥ ಅಭಿರಾಮ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ.) ರವರು ಶೇಕಡ 10.47% ರಷ್ಟು ಹೆಚ್ಚಿನ ದರವನ್ನು ನಮೂದಿಸಿದ್ದು, 3 ಜನ ಗುತ್ತಿಗೆದಾರರಿಗೆ ಹೋಲಿಸಿದರೆ, ಕಡಿಮೆ ದರ ನಮೂದಿಸಿರುವ ಅರ್ಹ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ. | ಗುತ್ತಿಗೆದಾರರ ಹೆಸರು | ನಮೂದಿಸಿರುವ ದರ | ಟೆಂಡರ್‌ಗಿಟ್ಟ ಮೊತ್ತ | ಪ್ರಸಕ್ತ ಸಾಲಿನ ದರದಂತೆ ಹೋಲಿಸಿದಾಗ (ಎಸ್.ಆರ್.2010-11) |
|---|---|---|---|---|
| 1 | K.MADAN MOHAN REDDY (ABHIRAM INFRA PROJECTS PVT. LTD. | 2,89,40,321.09 | 2,52,39,936.52 | 10.47% ಹೆಚ್ಚುವರಿ |

ಪ್ರಸ್ತಾಪಿಸಿರುವ ಕಾಮಗಾರಿಗೆ ಶ್ರೀ.ಕೆ.ಮದನ್ ಮೋಹನ್ ರೆಡ್ಡಿ (ಮೆ॥ ಅಭಿರಾಮ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ.) ರವರು ರೂ.2,89,40,321.09 ಗಳನ್ನು ನಮೂದಿಸಿದ್ದು, ಈ ಮೊತ್ತವು 2010-11ನೇ ಸಾಲಿನ ದರಗಳ ಮೇಲೆ ಶೇಕಡ 10.47% ರಷ್ಟು ಹೆಚ್ಚಾಗಿದ್ದು, ಸದರಿ ಕಾಮಗಾರಿ ಕೆಲಸವು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ್ದಾಗಿರುವುದರಿಂದ, ಗುತ್ತಿಗೆದಾರರು ನಮೂದಿಸಿರುವ ದರಗಳ ವಾಸ್ತವವಾಗಿರುವುದರಿಂದ ಈ ದರಗಳಿಗೆ ಜಂಟಿ ಆಯುಕ್ತರು (ದಕ್ಷಿಣ) ರವರು ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಅನುಮೋದನೆ ಕೋರಿರುತ್ತಾರೆ.

ಪ್ರಸ್ತಾಪಿಸಿರುವ ಕಾಮಗಾರಿಯ ಟೆಂಡರ್ ಮೊತ್ತವು ರೂ.289.40 ಲಕ್ಷಗಳಾಗಿದ್ದು, ಸದರಿ ಟೆಂಡರ್ ಪ್ರೀಮಿಯಂ ಶೇಕಡ 10.47% ರಷ್ಟು (2010-11ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ) ಹೆಚ್ಚಾದುದರಿಂದ ಟೆಂಡರ್ ಪ್ರಸ್ತಾವನೆಗೆ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಅನುಮೋದನೆ ಅಗತ್ಯವಿರುತ್ತದೆ.

ಈ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಗೆ ಶ್ರೀ.ಕೆ.ಮದನ್ ಮೋಹನ್ ರೆಡ್ಡಿ (ಮೆ॥ ಅಭಿರಾಮ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ.) ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.2,89,40,321.09 ಗಳಿಗೆ ಹಾಗೂ 2010-11ನೇ ಸಾಲಿನ ದರಗಳ ಶೇಕಡ 10.47% ಹೆಚ್ಚಿನ ಟೆಂಡರ್‌ಗೆ

ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-11-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 29-11-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 253/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.137 ರಾಯಪುರಂ ವ್ಯಾಪ್ತಿಯಲ್ಲಿ ವೆಂಕಟಸ್ವಾಮಿ ಗಾರ್ಡನ್, ಐ.ಪಿ.ಡಿ ಸಾಲಪ್ಪ ಬಡಾವಣೆಯ 2ನೇ ಮುಖ್ಯ ರಸ್ತೆಯಲ್ಲಿರುವ ಡಾ॥ ವಿಷ್ಣುವರ್ಧನ್ ರವರ 7.0' ಅಡಿ ಪ್ರತಿಮೆಯನ್ನು 8' X 8' ಜಾಗದಲ್ಲಿ ಪ್ರತಿಷ್ಠಾಪನೆಗೆ ಹೃದಯವಂತ ವಿಷ್ಣುವರ್ಧನ್ ಅಭಿಮಾನಿಗಳ ಸೇವಾ ಸಮಿತಿ (ರಿ) ರವರು ಕೋರಿರುವ ಬಗ್ಗೆ.

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸದರಿ ಸ್ಥಳವನ್ನು ಪರಿಶೀಲನೆ ನಡೆಸಿದ್ದು, ಈ ಸ್ಥಳವು ಕಸದ ರಾಶಿಯಿಂದ ತುಂಬಿರುತ್ತದೆ.
2. ಸದರಿ ಜಾಗವು ರಸ್ತೆಯ ಪಕ್ಕದಲ್ಲಿದ್ದು ಸಾರ್ವಜನಿಕರಿಗೆ ಮತ್ತು ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಯಾವುದೇ ತೊಂದರೆಯಾಗುವುದಿಲ್ಲ.
3. ಈ ಪ್ರದೇಶದ ಸುತ್ತ ಮುತ್ತಲಿನ ಜನರು ಈ ಪ್ರತಿಮೆ ಪ್ರತಿಷ್ಠಾಪನೆಯಿಂದ ಯಾವುದೇ ತೊಂದರೆ ಇರುವುದಿಲ್ಲವೆಂದು ನಾಗರೀಕರು ಮತ್ತು ಸಂಘ ಸಂಸ್ಥೆಯವರು ಪತ್ರವನ್ನು ನೀಡಿರುತ್ತಾರೆ.
4. ವಿಷ್ಣುವರ್ಧನ್ ಪ್ರತಿಮೆಯನ್ನು ಅಭಿಮಾನಿಗಳು ಮತ್ತು ಹೃದಯವಂತ ವಿಷ್ಣುವರ್ಧನ್ ಅಭಿಮಾನಿಗಳ ಸೇವಾ ಸಮಿತಿ (ರಿ) ಸಂಸ್ಥೆಯವರು ತನ್ನ ಸ್ವಂತ ಖರ್ಚಿನಿಂದ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಲು ಉದ್ದೇಶಿಸಿರುತ್ತಾರೆ.
5. 8' X 8' ಜಾಗದಲ್ಲಿ ಪ್ರತಿಮೆ ಪ್ರತಿಷ್ಠಾಪನೆಗೆ ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಸಿ.ಎಸ್.ರಾಧಾಕೃಷ್ಣ ರವರು ಶಿಫಾರಸ್ಸು ಮಾಡಿರುತ್ತಾರೆ.

ಡಾ॥ ವಿಷ್ಣುವರ್ಧನ್ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-11-2011 ರ ಟಿಪ್ಪಣಿ ಹಾಗೂ ಡಾ॥ ವಿಷ್ಣುವರ್ಧನ್ ರವರ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಮಾನ್ಯ ಆಯುಕ್ತರ ದಿನಾಂಕ:16-11-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು